# ಅನುದಿನದ ಆಹಾರ

# Anudhinada Ahara - July 2014

ಜುಲೈ - 2014

ಮರ 15 ಹಣ್ಣು 7 TREE 15 FRUIT 7


## ವಿಶ್ವಾಸದ ಜೀವಿತ!

"ನಂಬಿಕೆ ಇಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" (ಇಬ್ರಿ. 11:6).

ನಂಬಿಕೆ ಅಥವಾ ವಿಶ್ವಾಸ ಎಂದರೇನು? ಕಣ್ಣಿಗೆ ಕಾಣದವುಗಳ ವಿಷಯವಾಗಿ ಭರವಸದಿಂದಿರುವದು ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವದು ಆಗಿದೆ (ಇಬ್ರಿ. 11:1). ನಮ್ಮ ಅನುದಿನದ ಜೀವಿತದಲ್ಲಿ ನಾವು ನಂಬಿಕೆಯಿಂದಲೇ ಜೀವಿಸುತ್ತೇವೆ. ಬೆಳಿಗ್ಗೆ ಹಾಸಿಗೆಯಿಂದ ಏಳುವಾಗ ಈ ದಿನದ ಅಂತ್ಯವನ್ನು ಕಾಣುತ್ತೇವೆ ಎಂದು ನಂಬಿಕೆಯಿಂದಲೇ ಏಳುತ್ತೇವೆ. ಹಾಗೆಯೇ ರಾತ್ರಿ ಹಾಸಿಗೆಗೆ ಹೋಗುವಾಗಲೂ ನಾಳೆಯ ದಿನವನ್ನು ಕಾಣುತ್ತೇವೆ ಎಂದೇ ನಂಬುತ್ತೇವೆ. ಆದರೆ ಆತ್ಮೀಕ ನಂಬಿಕೆಯೇ ಬೇರೆ. ಅದು ಸತ್ಯದ ಮೇಲೆ ನಂಬಿಕೆ ಇಡುವದು. ದೇವರೇ ಸತ್ಯವೂ ನಿತ್ಯವೂ ಆಗಿದ್ದಾನೆ. ಆತನಿಲ್ಲದೆ ಈ ಪ್ರಪಂಚದಲ್ಲಿ ಒಂದೂ ಸೃಷ್ಟಿಸಲ್ಪಡಲಿಲ್ಲ. ದೇವರು ಇದ್ದಾನೆ ಎಂದು ಆತನಲ್ಲಿ ಭರವಸೆ, ನಂಬಿಕೆ ಇಡುವಾಗ ನಾವು ದೇವರ ಬಳಿಗೆ ಬರಲು ಸಾಧ್ಯ. ಆತನಿಗೆ ಮೆಚ್ಚಿಗೆಯಾದ ರೀತಿಯಲ್ಲಿ ನಡೆದುಕೊಳ್ಳಲು ಸಾಧ್ಯ.

ನಂಬಿಕೆಗೆ ಮೂಲ ಕಾರಣನು ಯೇಸುಕ್ರಿಸ್ತನೇ ಆಗಿದ್ದಾನೆ. ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆತನೇ. ಆತನಿಲ್ಲದೆ ಯಾವದೂ ಸೃಷ್ಟಿಸಲ್ಪಡಲಿಲ್ಲ ಎಂದು ದೇವರ ವಾಕ್ಯ ಹೇಳುತ್ತದೆ. "ನಾನೇ ಮಾರ್ಗವೂ, ಸತ್ಯವೂ, ಜೀವವೂ ಆಗಿದ್ದೇನೆ. ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾ.14:6) ಎಂದು ಕ್ರಿಸ್ತನು ಹೇಳುವದನ್ನು ಸತ್ಯವೇದದಲ್ಲಿ ಬರೆಯಲ್ಪಟ್ಟಿರುವದು.

ಆತನೇ ಲೋಕಕ್ಕೆ ಬೆಳಕಾಗಿದ್ದಾನೆ. ಆತನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕಿನಲ್ಲಿ ನಡೆಯುವವನಾಗಿರುವನು (ಯೋಹಾ. 8:12).

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆದ ಯೇಸುಕ್ರಿಸ್ತನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಓಡುವಾಗ ದೇವರ ಮೇಲಿನ ನಂಬಿಕೆ ದೃಢಗೊಳ್ಳುವದು (ಇಬ್ರಿ. 12:2). ಪ್ರಾರ್ಥನೆಯ ಮೂಲಕ ನಮ್ಮ ನಂಬಿಕೆ ಹೆಚ್ಚುವದು. ದೇವರೇ, ನನ್ನ ನಂಬಿಕೆಯನ್ನು ಹೆಚ್ಚಿಸು, ನನ್ನಲ್ಲಿ ನಂಬಿಕೆ ಕಡಿಮೆಯಾಗಿದೆ ಎಂದು ಪ್ರಾರ್ಥಿಸಿರಿ. ಆಗ ಕರ್ತನು ನಿಮಗೆ ಸಹಾಯ ಮಾಡುವನು.

ಕರ್ತನನ್ನು ನಂಬುವದರಿಂದ ದೊರಕುವ ಆಶೀರ್ವಾದಗಳು ಯಾವವು? ಕರ್ತನನ್ನು ನಂಬುವದರಿಂದ ನೀತಿವಂತರೆಂದು ನಿರ್ಣಯಿಸಲ್ಪಡುತ್ತೀರಿ. ಅಬ್ರಹಾಮನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯಿಸಲ್ಪಟ್ಟನು. ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ (ಎಫೆ. 2:8) ಎಂದು ಅಪೊ. ಪೌಲನು ಬರೆಯುತ್ತಾನೆ. ಹೌದು ಯಾರ್ಯಾರು ಕ್ರಿಸ್ತನ ಹೆಸರಿನಲ್ಲಿ ನಂಬಿಕೆ ಇಡುವರೋ ಅವರಿಗೆ ದೇವರ ಮಕ್ಕಳಾಗುವ ಭಾಗ್ಯವನ್ನು ರಕ್ಷಣೆಯನ್ನು ದೇವರು ಕರುಣಿಸುವನು (ಯೋಹಾ.1:12). ನಂಬಿಕೆಯ ಮೂಲಕ ಆತ್ಮನ ಶುದ್ಧೀಕರಣ ಹೊಂದುವಿರಿ (ಅ.ಕೃ.15:9). ಪವಿತ್ರಾತ್ಮನ ದಾನವನ್ನು ಪಡೆಯುವಿರಿ (ಗಲಾ. 3:14). ಆತ್ಮದಲ್ಲಿ ಧೈರ್ಯವನ್ನು ಹೊಂದುವಿರಿ (1 ತಿಮೊ. 1:13). ದೇವರಲ್ಲಿ ನಂಬಿಕೆ ಇಡುವಾಗ ಜಯದ ಜೀವಿತ ನಿಮ್ಮದಾಗುವದು (1 ಯೋಹಾ. 5:4). ಒಬ್ಬನು ಕರ್ತನನ್ನು ನಂಬುವಾಗ ಅವನಿಂದ ಎಲ್ಲವನ್ನೂ ಮಾಡಲು ಸಾಧ್ಯವಾಗುವದು (ಮಾರ್ಕ. 9:23).

ನಂಬಿಕೆಗೆ ತಡೆ ಉಂಟುಮಾಡುವ ಸಂಗತಿಗಳಾದರೂ ಯಾವವು? ನಂಬಿಕೆಗೆ ವಿರೋಧವಾಗಿ ಕೆಲಸ ಮಾಡುವ ದೊಡ್ಡ ಶತ್ರು ಎಂದರೆ ಸೈತಾನನು. ಆದಾಮ ಹವ್ವ ಇವರ ಹೃದಯದಲ್ಲಿ ಅವಿಧೇಯತೆ ಎಂಬ ಬೀಜವನ್ನು ಬಿತ್ತಿ ತಿನ್ನಬಾರದೆಂದು ದೇವರು ಆಜ್ಞಾಪಿಸಿದ್ದ ಹಣ್ಣನ್ನು ತಿಂದು ದೇವರ ಕೋಪಕ್ಕೆ ಗುರಿಯಾದರು (ಆದಿ. 3:17). ದೇವರ ವಾಕ್ಯಗಳಿಗೆ ಅವಿಧೇಯರಾಗುವಾಗ ನಮ್ಮಲ್ಲಿ ದೇವರ ಕುರಿತಾಗಿ ಇರುವ ನಂಬಿಕೆ ಕಡಿಮೆಯಾಗುತ್ತಾ ಹೋಗುವದು. ದೇವರ ವಾಕ್ಯಗಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವಾಗ ನಂಬಿಕೆಯು ಕುಂದುವದು? ಇಹಲೋಕದ ನಡವಳಿಕೆಗೆ ನಮ್ಮನ್ನು ಒಪ್ಪಿಸಿಕೊಡುವಾಗ ನಂಬಿಕೆ ಕುಸಿಯುವದು. ನಮ್ಮ ಸ್ವಂತ ಜ್ಞಾನ ಬಲದ ಮೇಲೆ ಆತುಕೊಳ್ಳುವಾಗ ನಂಬಿಕೆ ಕಡಿಮೆಯಾಗುವದು.



ಎರಡನೆಯದಾಗಿ ಸಂಶಯ. ಮನಸ್ಸಿನಲ್ಲಿ ಸಂದೇಹ ಅಥವಾ ಸಂಶಯ ಹುಟ್ಟುವಾಗ ನಂಬಿಕೆಯಲ್ಲಿ ದೃಢವಾಗಿ ನಿಲ್ಲಲು ಸಾಧ್ಯವಿಲ್ಲ. ಸಂದೇಹ ಪಡುವವನು ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು (ಯಾಕೊ. 1:6). ಯೇಸುಕ್ರಿಸ್ತನು ತನ್ನ ಶಿಷ್ಯರನ್ನು ಕುರಿತು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀವು ಸಂಶಯ ಪಡದೆ ನಂಬಿದರೆ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿದರೆ ಅದೂ ಆಗುವದು. ನಾನು ಮಾಡಿದ ಕಾರ್ಯಗಳನ್ನು ನೀವೂ ಮಾಡುವಿರಿ (ಮತ್ತಾ.21:21) ಎಂದು ಹೇಳಿದನು. ಇನ್ನು ಮೂರನೆಯದಾಗಿ ಚಿಂತೆ. ಸಮಸ್ಯೆಗಳು ಜೀವನದಲ್ಲಿ ಎದುರಾಗುವಾಗ ನಂಬಿಕೆಯು ಕುಗ್ಗುವದು. ಯೇಸುಕ್ರಿಸ್ತನು ತನ್ನ ಪರ್ವತ ಪ್ರಸಂಗದಲ್ಲಿ "ಎಲೈ ಅಲ್ಪವಿಶ್ವಾಸಿಗಳೇ, ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ, ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವವನಲ್ಲವೇ. ಹೀಗಿರುವದರಿಂದ.... ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ" (ಮತ್ತಾ. 6:30,31) ಎಂದು ಹೇಳುತ್ತಾನೆ. ನಾಲ್ಕನೆಯದಾಗಿ ತಡೆ ಭಯ. ಯೇಸು ಸಮುದ್ರದ ಮೇಲೆ ನಡೆದು ಬರುವದನ್ನು ನೋಡಿದ ಪೇತ್ರನು ಯೇಸುವನ್ನು ನೋಡಿ ತನಗೂ ನೀರಿನ ಮೇಲೆ ನಡೆಯಲು ಅಪ್ಪಣೆ ಕೊಡಬೇಕೆಂದು ಕೇಳಲು ಯೇಸು–ಬಾ ಅಂದನು. ಪೇತ್ರನು ಕರ್ತನ ಮಾತಿನಂತೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು. ಅದೇ ಗಾಳಿಯನ್ನು ನೋಡಿ ಭಯಪಟ್ಟು ಸ್ವಾಮೀ ಮುಳುಗುತ್ತಿದ್ದೇನೆ ನನ್ನನ್ನು ಕಾಪಾಡು ಎಂದು ಕೂಗಿಕೊಂಡನು. ಆಗ ಯೇಸು ಕೈಹಿಡಿದು ಎಲೈ ಅಲ್ಪ ವಿಶ್ವಾಸಿಯೇ ಯಾಕೆ ಸಂದೇಹಪಟ್ಟೆ ಅಂದನು. ಭಯದಆತ್ಮ ದೇವರಲ್ಲಿನ ವಿಶ್ವಾಸವನ್ನು ಕುಂಟಿತಗೊಳಿಸುವದು.

ನಂಬಿಕೆಯಲ್ಲಿ ದೃಢವಾಗಿ ನಿಲ್ಲುವಾಗ ಅದ್ಭುತಗಳನ್ನು ಕಾಣಲು ಸಾಧ್ಯ. ಅಂದು ಯೇಸುಸ್ವಾಮಿಯನ್ನು ಆತನ ಸ್ವಂತ ಜನರೇ ನಂಬದೇ ಹೋದದ್ದರಿಂದ ತನ್ನ ಸ್ವಂತ ಸ್ಥಳದಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಾಗಲಿಲ್ಲ ಎಂದು ಸತ್ಯವೇದ ಹೇಳುತ್ತದೆ (ಮತ್ತಾ. 13:58). ಆದ್ದರಿಂದ ನಾವು ನಮ್ಮ ಜೀವಿತದಲ್ಲಿ ಕರ್ತನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳದೆ ಆತನಿಂದ ಅದ್ಭುತಗಳನ್ನು ನಿರೀಕ್ಷಿಸೋಣ.

**ವಾಗ್ದಾನ ವಚನ – ಯೋಬ 5:9**

**"ಆತನು ಅಪ್ರಮೇಯ ಮಹಾಕಾರ್ಯಗಳನ್ನೂ ಅಸಂಖ್ಯವಾದ ಅದ್ಭುತ ಕೃತ್ಯಗಳನ್ನೂ ಮಾಡುತ್ತಾನೆ"**

## ವ್ಯತ್ಯಾಸವಿಲ್ಲ!

ಒಮ್ಮೆ ಒಂದು ಸುವಾರ್ತಾಗುಂಪು ಆಫ್ರಿಕಾ ದೇಶದಲ್ಲಿರುವ ಒಂದು ಬುಡಕಟ್ಟಿನ ಜನರ ಬಳಿ ಸುವಾರ್ತೆ ಸಾರಲು ಹೋಯಿತು. ಆ ಗ್ರಾಮದಲ್ಲಿದ್ದ ಬಡಜನರು ಅವರನ್ನು ಸ್ವಾಗತಿಸಿ ಸಗಣಿಯಿಂದ ಸಾರಿಸಿದ ನೆಲದ ಮೇಲೆ ಕುಳ್ಳಿರಿಸಿದರು. ಸೇವೆಗೆ ಬಂದವರೋ ದೊಡ್ಡ ವಿದ್ಯಾವಂತರು, ಜ್ಞಾನಿಗಳು, ಒಳ್ಳೆಯ ಪದವಿಗಳಲ್ಲಿದ್ದವರು. ಆ ಗ್ರಾಮಸ್ಥರಿಗೆ ಏನನ್ನು ಪ್ರಸಂಗಿಸಬೇಕೆಂಬುದು ಅವರಿಗೆ ತಿಳಿಯದಾಯಿತು. ಇವರ ಮಧ್ಯದಲ್ಲಿ ನಾವು ಸೇವೆ ಮಾಡಬೇಕಾ? ನಮ್ಮ ಸಮಯವನ್ನು ವ್ಯರ್ಥಗೊಳಿಸಬೇಕಾ? ಎಂದು ಭಾವಿಸಿದರು.

ಆಗ ಕರ್ತನು ಹೇಳಿದನು, "ನೀವು ಪಟ್ಟಣದಲ್ಲಿರುವ ವಿದ್ಯಾವಂತರಿಗೆ ಏನು ಪ್ರಸಂಗಿಸುವಿರೋ ಅದನ್ನೇ ಸರಳವಾದ ರೀತಿಯಲ್ಲಿ ಈ ಗ್ರಾಮದ ಮಕ್ಕಳಿಗೂ ಹೇಳಿರಿ. ಪಾಪಕ್ಷಮಾಪಣೆ, ನಿತ್ಯಜೀವ, ಪರಿಶುದ್ಧತೆಯ ಕುರಿತು ಬೋಧಿಸಿರಿ. ಅವರಲ್ಲಿ ಕೆಲವರನ್ನು ಪರಲೋಕದ ಸಿಂಹಾಸನದಲ್ಲಿ ನಾನು ಕುಳ್ಳಿರಿಸುವೆನು" ಎಂದು. ಹೌದು ಬಡಜನರಿಗೂ ಒಂದೇ ಆತ್ಮ, ವಿದ್ಯಾವಂತ, ಐಶ್ವರ್ಯವಂತರಿಗೂ ಒಂದೇ ಆತ್ಮ. ಇಬ್ಬರಿಗೂ ಒಬ್ಬನೇ ದೇವರು. ಒಂದೇ ರೀತಿಯಲ್ಲಿ ಕ್ರಿಸ್ತನು ಶಿಲುಬೆಯಲ್ಲಿ ರಕ್ತ ಸುರಿಸಿರುವನು. ಬಡವರಾದ ಅವರನ್ನು ಸಿಂಹಾಸನದಲ್ಲಿ ಕುಳ್ಳಿರಿಸಲು ಪರಲೋಕದ ಅರಸನು ಕೃಪಾಪೂರ್ಣನಾಗಿರುವನು. ಆತನಲ್ಲಿ ಯಾವ ಬೇಧವಾಗಲಿ, ವ್ಯತ್ಯಾಸವಾಗಲಿ ಇಲ್ಲ.

## ಮಾರ್ಗಗಳನ್ನು ಸಿದ್ಧಮಾಡಿರಿ !

ದಟ್ಟವಾದ ಕಾಡು ಒಂದರಲ್ಲಿ ಕೆಲವು ಕುರಿಗಳು ಸಿಕ್ಕಿಹಾಕಿಕೊಂಡವು. ಒಂದು ಚಿಕ್ಕ ಕುರಿಮರಿ ತನ್ನ ಯಜಮಾನನ ಮೇಲೆ ಇಟ್ಟ ಪ್ರೀತಿಯಿಂದ ಬೇಗ ಮನೆಗೆ ಹಿಂದಿರುಗಬೇಕೆಂದು ಬಯಸಿ ಎಲೆಗಳನ್ನು, ಕಸವನ್ನು ಸರಿಸಿ ಹೇಗೋ ಒಂದು ದಾರಿಯನ್ನು ಮಾಡಿಕೊಂಡು ಮನೆಗೆ ಬಂದು ಸೇರಿತು. ಕೆಲವು ಗಂಟೆಗಳ ನಂತರ ಕುರಿಗಳೊಂದಿಗೆ ಇದ್ದ ನಾಯಿ ಮಾರ್ಗ ಕಾಣದೆ ಹುಡುಕಾಡಿ ಕುರಿಮರಿಯ ಹೆಜ್ಜೆಯ ಜಾಡನ್ನು ಹಿಡಿದು ಹೇಗೋ ಮನೆಗೆ ಹಿಂದಿರುಗಿ ಬಂದು ಸೇರಿತು. ಆ ಸ್ಥಳ ಒಂದುವರೆ ಅಡಿ ಮಾರ್ಗವಾಗಿ ಮಾರ್ಪಟ್ಟಿತು. ಕೆಲವು ದಿನಗಳಲ್ಲಿ ಎಲ್ಲಾ ಮಂದೆಗಳೂ ಆ ಮಾರ್ಗವಾಗಿ ಹೋಗಿ ದೊಡ್ಡದಾರಿಯಾಗಿ ಮಾರ್ಪಟ್ಟಿತು. ಸ್ವಲ್ಪ ಕಾಲದನಂತರ ಮಾರ್ಗ ನಿರ್ಮಿಸಲು ಬಂದ ಅಧಿಕಾರಿಗಳು ಆ ಹಳೆಯ ಮಾರ್ಗವನ್ನೇ ವಿಸ್ತರಿಸಿ ಬಸ್ಸು ಕಾರುಗಳು ಓಡಾಡುವಂಥ ರಸ್ತೆಯನ್ನು ನಿರ್ಮಿಸಿದರು. ಇದಕ್ಕೆ ಕಾರಣ ಆ ಚಿಕ್ಕ ಕುರಿಮರಿಯೇ.

ಅದರಂತೆಯೇ ಕರ್ತನಿಗಾಗಿ ನೀವು ಮಾಡುವ ಕಾರ್ಯಗಳು ಚಿಕ್ಕದಾಗಿದ್ದರೂ ಮುಂದೆ ಅದು ದೊಡ್ಡ ಸೇವೆಗೆ ಕಾರಣವಾಗುವದು ಮಾತ್ರವಲ್ಲ ದೊಡ್ಡ ಫಲವನ್ನೇ ನೀಡುವದು.



## ಕಪ್ಪು ಅಂಗಿ!

ಒಮ್ಮೆ ಮಾರ್ಟಿನ್ ಲೂಥರ್ ಜೀವಿತದಲ್ಲಿ ಒಂದು ದೊಡ್ಡ ಹಿಂಜರಿಯುವಿಕೆಯೂ ಮನಸ್ಸಿನ ಚಂಚಲತೆಯೂ ಉಂಟಾಯಿತು. ಚಿಂತೆಮಾಡಿ, ಸೋತು ಕೊರಗಿ ಒಂದು ಮೂಲೆಯಲ್ಲಿ ಕುಳಿತುಬಿಟ್ಟನು. ಊಟ ನಿದ್ರೆ ಯಾವುದೂ ಬೇಡವಾಯಿತು. ಆ ಸಂದರ್ಭದಲ್ಲಿ ಆತನ ಮಡದಿ ಆತನಿಗೆ ಒಂದು ಪಾಠ ಕಲಿಸಬೇಕೆಂದೆಣಿಸಿ ಒಂದು ಕಪ್ಪು ಬಣ್ಣದ ಅಂಗಿಯನ್ನು ಹಾಕಿಕೊಂಡು ಆತನ ಮುಂದೆ ಬಂದು ನಿಂತಳು. ವಿದೇಶಗಳಲ್ಲಿ ಕಪ್ಪು ಅಂಗಿ ಧರಿಸಿದರೆ ಸಮೀಪ ಬಂಧುಗಳು ತೀರಿಕೊಂಡರೆಂದು ಅರ್ಥ. ಆದ್ದರಿಂದ ಈ ಕಪ್ಪು ಉಡುಪಿನಲ್ಲಿ ಮಡದಿಯನ್ನು ಕಂಡ ಲೂಥರ್ ಭಯ ಹಿಡಿದವರಾಗಿ ನಡುಗುತ್ತಾ "ಯಾರಮ್ಮಾ ಸತ್ತಿದ್ದಾರೆ?" ಎಂದು ವಿಸ್ಮಯರಾಗಿ ಕೇಳಿದರು.

ಆಗ ಅವರ ಮಡದಿಯು "ಅಯ್ಯಾ ಯೇಸು ಸ್ವಾಮಿ ಸತ್ತುಹೋದರು. ನೀವು ಇಷ್ಟು ಚಿಂತಾಕ್ರಾಂತರಾಗಿ ಶೋಕಿಸುವುದನ್ನು ಕಂಡು ನಿಮ್ಮ ರಕ್ಷಕನೇ ಸತ್ತಿರಬೇಕೆಂದೆಣಿಸಿ ಕೊಂಡೆನು" ಎಂದಳು. ತನ್ನ ರಕ್ಷಕನು ಜೀವಿಸಿದ್ದಾನೆಂದು ಚಾತುರ್ಯದಿಂದ ತನಗೆ ಬೋಧಿಸಿದ ಮಡದಿಯನ್ನು ಮಾರ್ಟಿನ್ ಕೃತಜ್ಞತೆಯಿಂದ ವಂದಿಸಿದರು.

ದೇವಮಗುವೇ, ನಿನ್ನ ಮನಸ್ಸು ಮುದುಡಿದ ವೇಳೆಗಳಲ್ಲಿ ನಿನ್ನ ದೇವರಾದ ಕರ್ತನು ನಿನ್ನೊಂದಿಗೆ ಜೀವವುಳ್ಳವನಾಗಿ ಇದ್ದಾನೆಂದು ನಂಬು! ನಿನ್ನ ಮನೋನೇತ್ರದಲ್ಲಿ ನೆನಸಿ ಉತ್ಸಾಹದಿಂದ ಸ್ತುತಿಸಿ ಸ್ತೋತ್ರಮಾಡು. ನಿನ್ನ ನಿರುತ್ಸಾಹಗಳು ದೇವ ಪ್ರಭಾವದಿಂದ ಮಾರ್ಪಡಲಿ!

## ನಿಮ್ಮ ಚಿಂತನೆಗಾಗಿ

* ನಾವು ಸರಿಯಾಗಿಲ್ಲದ ಪಕ್ಷಕ್ಕೆ ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತಿದ್ದೇವೆ. ಹಾಗಿದ್ದಲ್ಲಿ ನಾವು ಕೇಳಲೇಬೇಕಾದ ಪ್ರಶ್ನೆ – ನನ್ನ ಹೃದಯವು ಶುದ್ಧವಾಗಿದೆಯೋ ನನ್ನ ಹಸ್ತಗಳು ನಿರ್ಮಲವಾಗಿದೆಯೋ?
* ದೇವ ಸೇವಕರುಗಳಿಗೆ ಬೇಕಾದ ಅರ್ಹತೆ ಮೊದಲು ಆತ್ಮಗಳ ಮೇಲಿನ ಪ್ರೀತಿಯಲ್ಲ, ಬದಲಾಗಿ ಕ್ರಿಸ್ತನ ಮೇಲಿನ ಪ್ರೀತಿ.
* ದೇವರಿಂದ ನಡೆಸಲ್ಪಡದೆ ಮನುಷ್ಯರಿಂದ ನಡೆಸಲ್ಪಡುವ ಸಭೆಗಳು ಮತ್ತು ಸೇವೆಗಳು ವಿಫಲತೆಗೆ ಗುರಿಯಾಗುತ್ತವೆ.
* ನಾವು ದೇವರ ಬಳಿ ಪ್ರಾರ್ಥಿಸಲು ಹೋಗುವಾಗ ಸೈತಾನನು ಅವನ ವಿರೋಧವಾಗಿ ಹೋರಾಡಲು ನಾವು ಬಲಪಡೆಯುವವೆಂದು ತಿಳಿದು ತನ್ನ ಸತತ ಹೋರಾಟವನ್ನು ನಮ್ಮ ಮೇಲೆ ಬಿಡಲೊಲ್ಲನು.

## ನ್ಯಾಯ ತೀರ್ಪಿನ ದಿನ

ಒಬ್ಬ ಅರಸನು ದಿನವೂ ವಾಯುವಿಹಾರಕ್ಕಾಗಿ ಅಡ್ಡಾಡುವದು ವಾಡಿಕೆ. ಒಂದು ದಿನ ಕಳ್ಳತನ ಮಾಡುವಾಗ ಸಿಕ್ಕಿಬಿದ್ದಂಥ ಯೌವನಸ್ಥನನ್ನು ಅರಸನ ಬಳಿ ಕರೆತಂದರು. ಅರಸನು ಕಳ್ಳನ ಬಳಿ "ಯೌವನಸ್ಥನೇ, ನಿನ್ನ ತಪ್ಪನ್ನು ಕ್ಷಮಿಸುವೆನು, ಇನ್ನು ಮೇಲೆ ಕಳ್ಳತನ ಮಾಡದೆ ಒಳ್ಳೆಯವನಾಗಿರು" ಎಂದು ಹೇಳಿದನು. ಅರಸನ ಹಿತನುಡಿಗಳನ್ನು ಕೇಳಿದ ಯೌವನಸ್ಥನು ಸಂತೋಷವಾಗಿ ಮನೆಗೆ ಹೋದನು. ಪುನಃ ಒಂದು ದಿನ ವಿಹಾರಾರ್ಥವಾಗಿ ಬರುತ್ತಿದ್ದಾಗ, ಅದೇ ಯುವಕನನ್ನು ಕಳ್ಳತನ ಮಾಡಿದ ಅಪರಾಧಕ್ಕಾಗಿ ಹಿಡಿದು ತಂದರು. ಕದ್ದಂಥ ಯೌವನಸ್ಥನು ಭಯವಿಲ್ಲದೆ ನಿಂತಿದ್ದನು. ಅರಸನು ಪ್ರೀತಿಯುಳ್ಳವನೆಂಬ ನೆನಪು ಅವನನ್ನು ಗರ್ವ ಪಡುವಂತೆ ಮಾಡಿತು. ಅರಸನು ಅವನನ್ನು ನೋಡಿ ಮುಗುಳ್ನಗುತ್ತಾ "ಯೌವನಸ್ಥನೇ, ನಿನ್ನನ್ನು ನಾನು ಕ್ಷಮಿಸುತ್ತೇನೆ, ಇನ್ನು ಮೇಲಾದರೂ ನೀನು ಒಳ್ಳೆಯವನಾಗಿ ನಡೆದುಕೋ" ಎಂದು ಹೇಳಿ ಬಿಡುಗಡೆ ಮಾಡಿದನು. ಆದರೆ ಕಳ್ಳನ ಹೃದಯ ಮತ್ತೂ ಕಠಿಣವಾಯಿತು. ಕದಿಯುವದೆಂದರೆ ನೀರು ಕುಡಿದ ಹಾಗೆ ಧಾರಾಳವಾಗಿ ಮಾಡುತ್ತಿದ್ದನು. ದಿನಗಳು ಕಳೆದವು. ಮೂರನೇ ಸಾರಿ ಕಳ್ಳತನದ ಆರೋಪಿಯಾಗಿ ಕದಿಯುವಾಗಲೇ ಸಿಕ್ಕಿ ಬಿದ್ದನು. ಅರಸನ ಬಳಿ ಕರೆದುಕೊಂಡು ಹೋದರು. ಕಳ್ಳನು, ಈ ಸಾರಿಯೂ ಬಿಡುಗಡೆ ಸಿಕ್ಕುವದೆಂದು ಧೈರ್ಯದಿಂದಿದ್ದನು.

ಅರಸನು ನ್ಯಾಯಾಧೀಶನಾಗಿ ಒಂದು ಪುಸ್ತಕದೊಂದಿಗೆ ಕುಳಿತಿದ್ದನು. ಅವನ ಮುಖ ಗಡುಸಾಗಿತ್ತು. ಅರಸನು ಕಳ್ಳನನ್ನು ನೋಡಿ "ಸ್ನೇಹಿತನೇ, ನಾನು ನಿನ್ನನ್ನು ಪ್ರೀತಿಸುತ್ತೇನೆ. ಈಗಲೂ ನಿನ್ನನ್ನು ಕ್ಷಮಿಸಲು ನನಗೆ ಮನಸ್ಸುಂಟು. ಆದರೆ ನಾನೇನು ಮಾಡಲಿ? ನಾನು ಇಲ್ಲಿ ನ್ಯಾಯಾಧೀಶನಾಗಿ ಕುಳಿತಿದ್ದೇನೆ. ಈಗ ನಾನಲ್ಲ (ಸತ್ಯವೇದವನ್ನು ಎತ್ತಿ ತೋರಿಸಿ) ಈ ಪುಸ್ತಕವೇ ನಿನಗೆ ನ್ಯಾಯ ತೀರಿಸುವದು. "ಈ ಪುಸ್ತಕದ ಆಜ್ಞೆಯಂತೆ ನಿನಗೆ ನೇಣು ದಂಡನೆ ಕೊಡುತ್ತೇನೆ" ಎಂದನು. ಕಳ್ಳನು ಭಯದಿಂದ ನಡುಗಿದನು. ದೇವರು ಪ್ರೀತಿ ಸ್ವರೂಪನು ಎಂಬದನ್ನು ಮಾತ್ರ ನಂಬಿಕೊಂಡು, ನ್ಯಾಯತೀರ್ಪಿನ ದಿನವನ್ನು ನಾವು ಮರೆತು ಬಿಡುವೆವಾದರೆ ನಮಗೂ ಇದೇ ಗತಿ.

## ವ್ಯಕ್ತಿತ್ವ

ಒಂದು ಕಬ್ಬಿಣದ ತುಂಡನ್ನು ಗಮನಿಸೋಣ. ಅದನ್ನು ಉರಿಯುತ್ತಿರುವ ಬೆಂಕಿಯಲ್ಲಿ ಹಾಕಿದರೆ ಅದೂ ಸಹ ಬೆಂಕಿ ಕೆಂಡದಂತೆ ಕೆಂಪಗೆ ಕಾಯುತ್ತದೆ. ಆದರೆ ಆ ಕಬ್ಬಿಣ ತಾನು ಬೆಂಕಿ ಎಂದಾಗಲಿ, ಬೆಂಕಿಯು ತಾನು ಕಬ್ಬಿಣವೆಂದಾಗಲಿ ಎಂದು ಅಂದುಕೊಳ್ಳಬಾರದು. ಅದೇ ರೀತಿ ಕ್ರಿಸ್ತನಲ್ಲಿ ನೆಲೆಗೊಂಡಿರುವ ಒಬ್ಬ ದೇವ ಮಗುವು ತನ್ನತನವನ್ನು ಕಳೆದುಕೊಳ್ಳುವೆನೆಂದೆಣಿಸಬಾರದು. ಕ್ರಿಸ್ತನು ನಮ್ಮೊಳಗೂ, ನಾವೂ ಕ್ರಿಸ್ತನಲ್ಲೂ ಇರುವದರಿಂದ ಆ ರೀತಿ ಗಾಢವಾದ ಐಕ್ಯವುಂಟಾಗಿ ನಮ್ಮ ಸ್ವಭಾವ ಬದಲಾಗುವದು. ಇದರಿಂದ ನಮ್ಮ ವ್ಯಕ್ತಿತ್ವ ಅಳಿದು ಹೋಗುವದಿಲ್ಲ.



## ಏಕ ಮನಸ್ಸು!

ತನ್ನ ಕುಟುಂಬ ಪ್ರಗತಿ ಹೊಂದಲಿಲ್ಲ. ಅಭಿವೃದ್ಧಿಯಾಗಲಿಲ್ಲ, ತನ್ನ ಸಭೆಯು ಉಜ್ಜೀವನ ಹೊಂದಲಿಲ್ಲ ಎಂದು ದೀರ್ಘಾಲೋಚನೆಯಲ್ಲಿ ಮುಳುಗಿದ್ದ ಭಕ್ತನು ತನ್ನ ಸಮೀಪದಲ್ಲಿ ಒಂದು ಇರುವೆ ಗುಂಪು ಇರುವದನ್ನು ಕಂಡರು; ಏಳು ಅಥವಾ ಎಂಟು ಇರುವೆಗಳೂ ಸೇರಿ ಒಂದು ಚಿಕ್ಕ ಸಕ್ಕರೆ ಉಂಡೆಯಲ್ಲಿ ಕುಳಿತಿದ್ದವು. ಇರುವೆಗಳಿಗೆ ಬಲ ಅಧಿಕ; ಹಾಗಿದ್ದರೂ ಈ ಸಕ್ಕರೆ ಅಲ್ಲಿಯೇ ಇದೆಯಲ್ಲ ಕಾರಣವೇನೆಂದು ಯೋಚಿಸಿದರು. ಕೊನೆಗೆ ಕಾರಣ ಗೊತ್ತಾಯಿತು.

ಹೌದು, ಎಂಟು ಇರುವೆಗಳು, ಎಂಟು ಕಡೆಗಳಲ್ಲಿದ್ದುಕೊಂಡು ಎಂಟು ದಿಕ್ಕಿಗೆ ಎಳೆದರೆ ಸಕ್ಕರೆ ಉಂಡೆ ಹೇಗೆ ಮುಂದೆ ಹೋದೀತು? ಈ ಎಂಟು ಇರುವೆಗಳೂ ಸೇರಿ ಒಂದೇ ದಿಕ್ಕಿನಲ್ಲಿ ಎಳೆಯುವುದಾದರೆ ಸಕ್ಕರೆ ಉಂಡೆ ಹೋಗಬಲ್ಲುದಲ್ಲವೇ? ಈಗ ಅವರಿಗೆ ಅರ್ಥವಾಯಿತು. ತನ್ನ ಕುಟುಂಬದಲ್ಲಿ ಒಂದೇ ಮನಸ್ಸು ಇಲ್ಲದರಿಂದ, ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಮನಬಂದಂತೆ ಖರ್ಚು ಮಾಡಿ ಒಬ್ಬರಿಗೊಬ್ಬರು ಕಚ್ಚಾಡುವುದರಿಂದಲೇ ತಾವು ಮುಂದುವರೆಯಲಾಗಲಿಲ್ಲ. ತನ್ನ ಸಭೆಯ ಉಜ್ಜೀವನದ ತಡೆಗೂ ಇದೇ ಕಾರಣ ಎಂದು ಮನಗೊಂಡರು! ಒಂದೇ ಮನಸ್ಸು ಅಗತ್ಯ. ಕುಟುಂಬದ ಪ್ರಾರ್ಥನೆಯಲ್ಲಿ ದೇವಭಕ್ತಿಯಲ್ಲಿ ಕರ್ತನಿಗೆ ಕೊಡುವುದರಲ್ಲಿ ಏಕಮನಸ್ಸಿರಬೇಕು. ಅಂದು ಶಿಷ್ಯರು ಏಕಮನಸ್ಸಿನಿಂದ ಒಗ್ಗಟ್ಟಾಗಿ ಕೂಡಿಬಂದಾಗ ಯೆರೂಸಲೇಮಿನಲ್ಲಿ ಒಂದು ವಿಶೇಷವಾದ ಉಜ್ಜೀವನ ಉಂಟಾಯಿತು (ಅಪೊ. 2:1). ಒಂದೇ ಮನಸ್ಸಿನಿಂದ ಪ್ರಾರ್ಥಿಸು! ಒಂದೇ ಮನಸ್ಸುಂಟಾಗಲೂ ಪ್ರಾರ್ಥಿಸು.

## ಮಾನವ ಜೀವಿತದ ರಹಸ್ಯ

ಒಂದು ಹಡಗನ್ನು ಗಮನಿಸಿ ನೋಡಿರಿ. ಅದು ನೀರಿನಲ್ಲೇ ಇರುವದು. ಅದು ನೀರಿನ ಮೇಲೆ ಯಾವಾಗಲೂ ಚಲಿಸುತ್ತದೆ. ಆದರೆ ಹಡಗಿನೊಳಗೆ ನೀರು ಬಂದುಬಿಟ್ಟರೆ ಏನು ಸಂಭವಿಸುವದು? ಹಡಗು ಮುಳುಗುವದು. ಹಡಗು ಸ್ವಲ್ಪ ಸ್ವಲ್ಪವಾಗಿ ನೀರಿನಲ್ಲಿ ಮುಳುಗುವಾಗ ಸಾವಿರಗಟ್ಟಲೆ ಬೆಲೆ ಬಾಳುವ ವಸ್ತುಗಳು ನಾಶವಾಗುತ್ತವೆ. ನೂರಾರು ಪ್ರಾಣಗಳಿಗೆ ಆಪತ್ತು ಬರುತ್ತದೆ. ಅದೇ ರೀತಿ ಒಬ್ಬನು ಈ ಲೋಕದಲ್ಲಿ ಜೀವಿಸಿ ತೋರಿಸುವದು ಅವನಿಗೂ ಇತರರಿಗೂ ಆಶೀರ್ವಾದಕರವಾಗಿರುವದು. ಅನೇಕರನ್ನು ಮೋಕ್ಷದ ಜೀವಿತವೆಂಬ ರೇವು ಪಟ್ಟಣಕ್ಕೆ ಕೊಂಡೊಯ್ದು ಸೇರಿಸುವದು. ಆದರೆ ಲೌಕೀಕ ಸುಖಭೋಗಗಳಲ್ಲಿ ಮುಳುಗುವದು ತನಗೂ ಇತರರಿಗೂ ಕೇಡನ್ನೇ ಕಲ್ಪಿಸುವದು. ಇದೇ ಮಾನವನ ಜೀವಿತದ ರಹಸ್ಯವಾಗಿದೆ.

# ನಮ್ಮ ದೇಶದ ಸುದ್ದಿಗಳು

## (INDIAN NEWS)

### 1. 189 ದೇಶಗಳಲ್ಲಿ ಭಾರತಕ್ಕೆ 111ನೇ ಸ್ಥಾನ :

ಸಂಸತ್ತಿನಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ವಿಶ್ವದ 189 ದೇಶಗಳಲ್ಲಿ ಭಾರತವು 111ನೇ ಸ್ಥಾನ ಪಡೆದಿದೆ. ಅಂತರರಾಷ್ಟ್ರೀಯ ಸಂಸದೀಯ ಸಮಿತಿ ಈ ಪಟ್ಟಿಯನ್ನು ಬಿಡುಗಡೆ ಮಾಡಿದೆ.

### 2. ಭಾರತದಲ್ಲಿ ಪ್ರತಿವರ್ಷ 7 ಲಕ್ಷ ಶಿಶುಗಳ ಸಾವು :

ಭಾರತದಲ್ಲಿ ಪ್ರತಿವರ್ಷ ಸುಮಾರು 7 ಲಕ್ಷಕ್ಕೂ ಹೆಚ್ಚು ನವಜಾತ ಶಿಶುಗಳು ಮರಣ ಹೊಂದುತ್ತಿವೆ. ಇದು ವಿಶ್ವದಲ್ಲೇ ಅತಿ ಹೆಚ್ಚು ಎಂದು ಹೊಸ ಅಧ್ಯಯನದಿಂದ ತಿಳಿದುಬಂದಿದೆ. ವಿಶ್ವದಾದ್ಯಂತ ವರ್ಷವೊಂದಕ್ಕೆ 55 ಲಕ್ಷ ಶಿಶುಗಳು ಯಾವುದೇ ದಾಖಲೆಗಳಿಲ್ಲದೆ ಸಾವನ್ನಪ್ಪುತ್ತಿವೆ ಎಂದು ತಿಳಿದು ಬಂದಿದೆ.

### 3. ನೌಕಾಪಡೆಗೆ “ಸುಮೇಧಾ” :

ಹೊಸ ಮಾದರಿಯ ಸಂಪೂರ್ಣ ಸ್ವದೇಶಿ ನಿರ್ಮಿತ ಕಡಲು ಗಸ್ತು ನೌಕೆ “ಐಎನ್‌ಎಸ್ ಸುಮೇಧಾ” ಅಧಿಕೃತವಾಗಿ ಭಾರತೀಯ ನೌಕಾಪಡೆಗೆ ಸೇರ್ಪಡೆಯಾಗಿದೆ. 105 ಮೀಟರ್ ಉದ್ದದ ಈ ನೌಕೆ ಜಿಎಸ್‌ಎಲ್ ನಿರ್ಮಿತ 200ನೇ ನೌಕೆಯಾಗಿದೆ.

### 4. ಬ್ರಿಟನ್ ಸಿರಿವಂತರ ಪಟ್ಟಿ : ಮೊದಲ ಸ್ಥಾನದಲ್ಲಿ ಭಾರತ ಮೂಲದವರು:

ಬ್ರಿಟನ್ನಿನ 1,000 ಶ್ರೀಮಂತರ ಪಟ್ಟಿಯಲ್ಲಿ ಭಾರತದ ಹಿಂದು ಜಾ ಸಹೋದರರು ಮೊದಲ ಸ್ಥಾನದಲ್ಲಿದ್ದಾರೆ. ಕುತೂಹಲಕಾರಿ ಸಂಗತಿ ಎಂದರೆ ಈ ಭಾರತೀಯ ಮೊದಲ ಉದ್ಯಮಿಗಳ ಸಂಪತ್ತಿನ ಒಟ್ಟು ಮೌಲ್ಯ 51,890 ಕೋಟಿ ಪೌಂಡ್‌ಗಳಾಗಿದ್ದು ಅಂದಾಜು ರೂ.51,11,684 ಕೋಟಿ. ಇದು ಬ್ರಿಟನ್ನಿನ ವಾರ್ಷಿಕ ಜಿಡಿಪಿಯ ಮೂರನೇ ಒಂದರಷ್ಟಾಗಿದೆ.

### 5. ತೆಲಂಗಾಣ ರಾಜ್ಯೋದಯ :

ದೇಶದ 29ನೇ ರಾಜ್ಯವಾಗಿ ತೆಲಂಗಾಣ ಉದಯವಾಗಿದೆ. 10 ಜಿಲ್ಲೆಗಳಿಂದ ಕೂಡಿರುವ ಈ ರಾಜ್ಯವು ತನ್ನ ಅಸ್ಮಿತೆ ಸಾಬೀತು ಮಾಡಲು ಅತ್ಯಂತ ದೀರ್ಘ ಹೋರಾಟ ನಡೆಸಿದ ಪ್ರಾಂತ್ಯ ತೆಲಂಗಾಣವಾಗಿದೆ.





# ಹೊರ ದೇಶದ ಸುದ್ದಿಗಳು

## (FOREIGN NEWS)

### 1. ಬಾಂಗ್ಲಾದಲ್ಲಿ ಪುರುಷಪ್ರಾಧಾನ್ಯ ಕುರಿತು ಅಧ್ಯಯನ :

ಇತ್ತೀಚಿನ ದಿನಗಳಲ್ಲಿ ಬಾಂಗ್ಲಾದೇಶ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಜಗತ್ತಿನ ಪ್ರಶಂಸೆಗೆ ಗುರಿಯಾಗುತ್ತಿರುವ ಬೆನ್ನಲ್ಲೆ ಅಲ್ಲಿನ ಪುರುಷರು ಮಾತ್ರ ಹೆಂಡತಿಯರಿಗೆ ಹೊಡೆಯುವದೇ ತಮ್ಮ ಕಾನೂನು ಬದ್ಧ ಹಕ್ಕು ಎಂದುಕೊಂಡಿದ್ದಾರೆ ಎಂದು ಸಮೀಕ್ಷೆಯೊಂದು ಹೇಳಿದೆ.

### 2. ಭಯೋತ್ಪಾದನೆ ದಮನಕ್ಕೆ ಚೀನಾ ಅಧ್ಯಕ್ಷ ಕರೆ :

ಸುಸ್ಥಿರತೆ ಮತ್ತು ಬಾಳಿಕೆ ಬರುವ ರಕ್ಷಣಾ ಸಹಕಾರದ ಹೊಸ ಸ್ವರೂಪವನ್ನು ಏಷ್ಯಾದ ದೇಶಗಳು ಈಗ ರಚಿಸಿಕೊಳ್ಳಬೇಕು ಎಂದು ಚೀನಾದ ಅಧ್ಯಕ್ಷ ಕ್ಸಿಜಿನ್‌ಪಿಂಗ್ ಹೇಳಿದ್ದಾರೆ.

### 3. ಅರ್ಜೆಂಟಿನಾ : ಜಗತ್ತಿನ ಅತಿ ದೊಡ್ಡ ಡೈನೊಸಾರ್ ಪಳೆಯುಳಿಕೆ ಪತ್ತೆ :

ಜಗತ್ತಿನ ಅತೀ ದೊಡ್ಡ ಡೈನೊಸಾರ್‌ನ ಪಳೆಯುಳಿಕೆಗಳು ಅರ್ಜೆಂಟಿನಾದಲ್ಲಿ ಪತ್ತೆಯಾಗಿವೆ. ಈ ಡೈನೊಸಾರ್ 14 ಆಫ್ರಿಕಾ ಆನೆಗಳಷ್ಟು ತೂಕ ಮತ್ತು 7 ಮಹಡಿ ಕಟ್ಟಡಕ್ಕೆ ಸಮನಾದ ಗಾತ್ರ ಹೊಂದಿತ್ತು ಎಂದು ವಿಜ್ಞಾನಿಗಳು ಹೇಳಿದ್ದಾರೆ.

### 4. ವಿಶ್ವಸಂಸ್ಥೆ ವಿಚಾರಣೆಯಲ್ಲಿ ಶ್ರೀಲಂಕಾ ಪರ ವಾದಿಸಲು ಪಾಕ್ ವಕೀಲ:

ಯುದ್ಧ ಅಪರಾಧ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ನಡೆಸುತ್ತಿರುವ ವಿಚಾರಣೆಯಲ್ಲಿ ತನ್ನನ್ನು ಸಮರ್ಥಿಸಲು ಶ್ರೀಲಂಕಾ ಸರ್ಕಾರವು ಪಾಕಿಸ್ತಾನದ ಹಿರಿಯ ವಕೀಲ ಐತ್ಝಾಜ್ ಅಹ್ಸಾನ್‌ರವರನ್ನು ನೇಮಿಸಿಕೊಂಡಿದೆ.

### 5. ಜೈಲಿನಲ್ಲಿ ಕೈದಿಗಳಿಂದ ಸಂಬಂಧಿಕರ ಒತ್ತೆ :

ಜೈಲಿಗೆ ಭೇಟಿ ನೀಡಿದ 122 ಮಂದಿ ಸಂಬಂಧಿಕರನ್ನು ಕೈದಿಗಳು ಒತ್ತೆಯಾಳುಗಳಾಗಿ ಇಟ್ಟುಕೊಂಡಿರುವ ಘಟನೆ ಬ್ರೆಜಿಲಿಯಾ ರಾಜ್ಯದ ಸೆರ್‌ಗಿಪಿಯ ಜೈಲಿನಲ್ಲಿ ನಡೆದಿದೆ. ಕೈದಿಗಳ ಈ ಗಲಭೆಗೆ ಕಾರಣ ತಿಳಿದುಬಂದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜುಲೈ 1

# ಭಕ್ತರ ಹಾಸಿಗೆ!

ಬೆಳಿಗ್ಗೆ : ಯೋಬ. 20,21
ಸಂಜೆ : ಅ.ಕೃ. 10:24–48

"ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ; ಹಾಸಿಗೆಯ ಮೇಲಿರುವಾಗಲೂ ಉತ್ಸಾಹಧ್ವನಿ ಮಾಡಲಿ" (ಕೀರ್ತನೆ 149:5).

ಸಾಧಾರಣವಾಗಿ ಒಬ್ಬ ಮನುಷ್ಯನು ಒಂದು ದಿನಕ್ಕೆ ಎಂಟುಗಂಟೆಗಳು ಮಲಗುತ್ತಾನೆ. ವಿಶ್ರಾಂತಿ ಪಡೆಯುತ್ತಾನೆ. ಇಡೀ ಜೀವಿತಕಾಲದಲ್ಲಿ ಮೂರರಲ್ಲಿ ಒಂದು ಭಾಗವನ್ನು ಅವನು ಹಾಸಿಗೆಯಲ್ಲೂ, ನಿದ್ರೆಯಲ್ಲಿಯೂ ಕಳೆಯುತ್ತಾನೆ. ಸರಾಸರಿ ಒಬ್ಬ ಮನುಷ್ಯನು ಎಪ್ಪತ್ತೈದು ವರ್ಷಗಳು ಜೀವಿಸಿದರೆ, ಇಪ್ಪತ್ತೈದು ವರ್ಷಗಳು ನಿದ್ರೆಯಲ್ಲಿ ಕಳೆದುಹೋಗುತ್ತದೆ.

ಆದರೆ ದೇವಮಕ್ಕಳು, ಮಲಗುವ ವೇಳೆಯನ್ನೂ ಸಹ ಉಪಯೋಗಿಸಿಕೊಳ್ಳುವರು. "ಭಕ್ತರು ತಮಗುಂಟಾದ ಮಹಿಮೆಯಲ್ಲಿ ಹಿಗ್ಗಲಿ, ಹಾಸಿಗೆಯ ಮೇಲಿರುವಾಗಲೂ ಉತ್ಸಾಹ ಧ್ವನಿ ಮಾಡಲಿ" (ಕೀರ್ತ 149:5) ಎಂದು ಸತ್ಯವೇದ ಹೇಳುತ್ತದೆ. ಇಲ್ಲಿ ಹಾಸಿಗೆಯಲ್ಲಿ ಮಲಗುವರು ಎಂದು ಬರೆಯಲ್ಪಡಲಿಲ್ಲ. "ಉತ್ಸಾಹ ಧ್ವನಿ ಮಾಡುವರು" ಎಂದು ಓದುತ್ತೇವೆ. ಭಕ್ತರು ಹಾಸಿಗೆಯಲ್ಲಿ ಕರ್ತನನ್ನು ಸ್ತುತಿಸುವರು. ಸ್ತೋತ್ರ ಮಾಡುವರು. ಪರಲೋಕದ ದೃಶ್ಯಗಳನ್ನು ನೋಡುವರು. ಕರ್ತನು ದರ್ಶನಗಳ ಮೂಲಕವೂ, ಸ್ವಪ್ನಗಳ ಮೂಲಕವೂ ಅವರೊಂದಿಗೆ ಮಾತನಾಡುವನು. ರಾತ್ರಿಯಲ್ಲಿ ಹಾಸಿಗೆಗೆ ಹೋಗುವ ಮೊದಲು ಕುಟುಂಬವಾಗಿ ಪ್ರಾರ್ಥಿಸಿರಿ. ಗಂಡನೂ, ಹೆಂಡತಿಯೂ ಕೈಜೋಡಿಸಿ ಪ್ರಾರ್ಥಿಸಿರಿ. ನಿದ್ರೆ ಬರುವವರೆಗೂ ಆತ್ಮೀಕ ಹಾಡುಗಳನ್ನು ಹಾಡಿಕೊಂಡೇ ಅನ್ಯಭಾಷೆಗಳನ್ನು ಮಾತನಾಡುತ್ತಾ ದೇವರನ್ನು ಮಹಿಮೆ ಪಡಿಸಿಕೊಂಡೇ ಇರಿ. ಆಗ ಕರ್ತನ ಮಹಿಮೆಯಾದ ಪ್ರಸನ್ನತೆ ನಿಮ್ಮನ್ನು ಆವರಿಸಿಕೊಳ್ಳುವದು. ನಿಮಗೆ ಸಹಾಯವಾಗಿ ದೇವದೂತರು ನಿಲ್ಲುವದನ್ನು ನೋಡುವಿರಿ. ದಾವೀದನು ಹೀಗೆ ಹೇಳುತ್ತಾನೆ "ನಾನು ನಿರ್ಭಯವಾಗಿರುವದರಿಂದ ಮಲಗಿಕೊಂಡು ಕೂಡಲೆ ನಿದ್ರೆ ಮಾಡುವೆನು; ಯಾಕೆಂದರೆ ಯೆಹೋವನೇ ನಾನು ಯಾವ ಅಪಾಯವೂ ಇಲ್ಲದೆ ಸುರಕ್ಷಿತನಾಗಿರುವಂತೆ ನೀನು ಕಾಪಾಡುತ್ತೀ" (ಕೀರ್ತ.4:8)

ದೇವಮಕ್ಕಳೇ, ರಾತ್ರಿಯಲ್ಲಿ ಮಲಗುವಾಗ ಸ್ತುತಿಸುತ್ತಲೇ ಮಲಗುವಿರಾದರೆ, ಬೆಳಿಗ್ಗೆಯಲ್ಲಿ ಎದ್ದು ಸ್ತುತಿಸುವಂತೆ ಪವಿತ್ರಾತ್ಮನು ಎಬ್ಬಿಸುವನು. ಕರ್ತನ ನೂತನ ಕೃಪೆಯನ್ನು ರುಚಿಸುವಿರಿ. ಹೊತ್ತಾರೆಯಲ್ಲಿ ಕರ್ತನನ್ನು ಸ್ತುತಿಸಿ ಆರಾಧಿಸುವಾಗ ನೂತನ ಬಲವನ್ನು ಹೊಂದಿಕೊಳ್ಳುವಿರಿ. ನೂತನ ಬಲದಿಂದ ನಿಮ್ಮ ಕೆಲಸ ಕಾರ್ಯಗಳನ್ನು ನಿರ್ವಹಿಸುವಿರಿ.

*ನೆನಪಿಗೆ : ನಾನಾದರೋ ನಿರಪರಾಧಿಯು, ನಿನ್ನ ಸಾನಿಧ್ಯವನ್ನು ಸೇರುವೆನು. ಎಚ್ಚೆತ್ತಾಗ ನಿನ್ನ ಸ್ವರೂಪ ದರ್ಶನದಿಂದ ತೃಪ್ತನಾಗಿರುವೆನು (ಕೀರ್ತ. 17:15).*



ಜುಲೈ 2

# ಪಾಪದ ಹಾಸಿಗೆ!

ಬೆಳಿಗ್ಗೆ : ಯೋಬ. 22,23,24
ಸಂಜೆ : ಅ.ಕೃ. 11

ಅವನು ಬಿದ್ದಿರುವದನ್ನು ಯೇಸು ಕಂಡು ಇವನು ಹೀಗಾಗಿ ಬಹುಕಾಲವಾಗಿದೆ ಎಂದು ತಿಳಿದು ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ? ಎಂದು ಅವನನ್ನು ಕೇಳಿದನು (ಯೋಹಾ.5:6).

ಯೆರೂಸಲೇಮಿನಲ್ಲಿ ಕುರಿ ಅಗಸೇ ಬಾಗಿಲಿನ ಹತ್ತಿರದಲ್ಲಿ ಬೆತ್ಸಥಾ ಎಂಬ ಒಂದು ಕೊಳವಿದೆ. ಬೆತ್ಸಥಾ ಎಂದರೆ 'ಕನಿಕರದ ಮನೆ' ಎಂದು ಅರ್ಥ. ಆ ಕೊಳದಲ್ಲಿ ಕೆಲವು ಸಮಯಗಳಲ್ಲಿ ದೇವದೂತನು ಇಳಿದುಬಂದು ಆ ಕೊಳದ ನೀರನ್ನು ಕಲಕುತ್ತಿದ್ದನು. ಆ ಸಮಯದಲ್ಲಿ ಯಾವ ರೋಗಿ ಆ ಕೊಳದಲ್ಲಿ ಮೊದಲು ಇಳಿಯುತ್ತಿದ್ದನೋ ಅಂಥಹ ವ್ಯಕ್ತಿಯು ಸ್ವಸ್ಥವಾಗುತ್ತಿದ್ದನು ಪಾಪದ ಹಾಸಿಗೆ, ಪಾಪದ ಜೀವಿತದ ಗುರುತಾಗಿದೆ.

ಆ ಕೊಳದ ಬಳಿ ಅನೇಕ ರೋಗಿಗಳು ಬಿದ್ದುಕೊಂಡಿರುತ್ತಿದ್ದರು. ಅವರಲ್ಲಿ ಮೂವತ್ತೆಂಟು ವರ್ಷಗಳಿಂದ ಪಾರ್ಶ್ವವಾಯು ರೋಗದಿಂದ ನರಳುತ್ತಿದ್ದವನೂ ಒಬ್ಬನಾಗಿದ್ದನು. ಬೆತ್ಸಥಾ ಕೊಳದಲ್ಲಿ ಕನಿಕರ ಇದ್ದರೂ ಅದು ಪೂರ್ಣವಾದದ್ದಾಗಿರಲಿಲ್ಲ. ಕೆಲವರಿಗೆ ಮಾತ್ರ ಸಿಗುತ್ತಿತ್ತು. ಕೊಳದ ನೀರು ಕಲಕಿದ ಸಮಯದಲ್ಲಿ ಮೊದಲು ಇಳಿದಂಥ ವ್ಯಕ್ತಿಗೆ ಮಾತ್ರ ಕನಿಕರ ದೊರಕುತ್ತಿತ್ತು. ನಿತ್ರಾಣಿಗಳಿಗೆ ಸಿಗುತ್ತಿರಲಿಲ್ಲ. ದೇವದೂತನು ಯಾವಾಗಲೋ ಒಂದು ಸಲ ಬರುವನು, ಮೂವತ್ತೆಂಟು ವರ್ಷಗಳು ಕೊಳದ ಬಳಿ ವ್ಯಾಧಿಯಿಂದ ಬಿದ್ದಿದ್ದ ಮನುಷ್ಯನು ಧರ್ಮಶಾಸ್ತ್ರದ ಕೆಳಗೆ ಇದ್ದು, ಅರಣ್ಯದಲ್ಲಿ ಅಲೆದು ಸುತ್ತಿದ್ದ ಇಸ್ರಾಯೇಲ್ಯರಿಗೆ ಗುರುತಾಗಿದ್ದಾನೆ. ಬೆತ್ಸಥಾ ಕೊಳದ ಸುತ್ತಲೂ ಇದ್ದ ಐದು ಮಂಟಪಗಳು ಧರ್ಮಶಾಸ್ತ್ರದ ಐದು ಪುಸ್ತಕಗಳಿಗೆ ಗುರುತಾಗಿದೆ. ಅವು ಆದಿಕಾಂಡ, ವಿಮೋಚನಾಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ ಎಂಬವುಗಳೇ. ಇಸ್ರಾಯೇಲ್ಯರು ಐಗುಪ್ತ ದೇಶದಿಂದ ಕಾನಾನಿಗೆ ಬಂದು ಸೇರಿದ ಕಾಲ ನಾಲ್ವತ್ತು ವರ್ಷಗಳಾದರೂ, ಅವರು ಅರಣ್ಯದಲ್ಲಿ ಪ್ರಯಾಣ ಮಾಡಿದ ವರ್ಷಗಳು ಮೂವತ್ತೆಂಟು ವರ್ಷಗಳು (ಧರ್ಮೋ. 2:14). ಧರ್ಮಶಾಸ್ತ್ರದ ಪ್ರಕಾರ ಇಸ್ರಾಯೇಲ್ಯರು ಪಾಪಕ್ಷಮಾಪಣೆಯೆಂಬ ಕನಿಕರವನ್ನು ಪಡೆದುಕೊಳ್ಳಲು ಬಲಿ ಅರ್ಪಿಸಬೇಕಿತ್ತು. ಆದರೆ ಬಲಿ ಅರ್ಪಿಸಲಾಗದೇ ಇರುವವರಿಗೆ ಪಾಪ ಕ್ಷಮಾಪಣೆ ಸಿಗುತ್ತಿರಲಿಲ್ಲ. ಈ ಬೆತ್ಸಥಾ ಕೊಳದ ಬಳಿ ನಿಂತಿರುವ ಯೇಸುವನ್ನು ನೋಡಿರಿ! ಆತನು ಕನಿಕರ ತುಂಬಿದವನು. ತನ್ನ ಬಳಿಗೆ ಬರುವ ಯಾರನ್ನೂ ತಳ್ಳಿಬಿಡುವವನಲ್ಲ. ಮೂವತ್ತೆಂಟು ವರ್ಷದಿಂದ ಹಾಸಿಗೆ ಹಿಡಿದವನ ಬಳಿಗೆ ಬಂದು ನಿನಗೆ ಸ್ವಸ್ಥವಾಗುವದಕ್ಕೆ ಮನಸ್ಸುಂಟೋ ಎಂದು ಕೇಳಿ ಸ್ವಸ್ಥಮಾಡಿದನು.

ದೇವಮಕ್ಕಳೇ, ಇಂಥಾ ಕರುಣೆಯುಳ್ಳ ದೇವರನ್ನು ನಿಮ್ಮ ರಕ್ಷಕನನ್ನಾಗಿ ಇಂದೇ ಅಂಗೀಕರಿಸಿ ಪಾಪಕ್ಷಮಾಪಣೆ ಮತ್ತು ಅದ್ಭುತಗಳನ್ನು ಹೊಂದಿಕೊಳ್ಳಿರಿ.

*ನೆನಪಿಗೆ : ನೀನು ದಯೆಯೂ, ಕನಿಕರವೂ, ದೀರ್ಘಶಾಂತಿಯೂ, ಮಹಾಕೃಪೆಯೂ ಉಳ್ಳ ದೇವರು, ಮಾಡಬೇಕೆಂದಿದ್ದ ಕೇಡಿಗೆ ಮನಮರುಗುವವನು ಎಂದು ತಿಳಿದಿದ್ದೇನೆ (ಯೋನ.4:2).*

## ಜುಲೈ 3 ಹಾಸಿಗೆಯನ್ನು ಎತ್ತಿಕೊಂಡು!

ಬೆಳಿಗ್ಗೆ : ಯೋಬ. 25,26,27
ಸಂಜೆ : ಅ.ಕೃ. 12

ಯೇಸು ಅವನಿಗೆ "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ಹೇಳಿದನು (ಯೋಹಾನ. 5:8).

ಒಂದು ನಿಮಿಷ ನಿಮ್ಮ ಮನೋನೇತ್ರಗಳಿಂದ ಮೂವತ್ತೆಂಟು ವರುಷಗಳಿಂದ ಮಲಗಿದ್ದ ವ್ಯಾಧಿಗ್ರಸ್ಥನ ಸ್ಥಿತಿಯನ್ನು ಸ್ವಲ್ಪ ಚಿಂತಿಸಿನೋಡಿರಿ. ಅವನಿಗೆ ಪಾರ್ಶ್ವವಾಯು ರೋಗವಿದ್ದದ್ದರಿಂದ ಅವನು ತನ್ನ ಹಾಸಿಗೆಯನ್ನು ಶುದ್ಧಮಾಡಿಕೊಳ್ಳಲು ಸಾಧ್ಯವಾಗಿಲ್ಲದೇ ಇದ್ದಿರಬಹುದು. ದೀರ್ಘಕಾಲ ಮಲಗಿದ್ದ ನಿಮಿತ್ತ ಅವನ ಶರೀರದಲ್ಲಿ ಹುಣ್ಣುಗಳಾಗಿದ್ದಿರಬಹುದು. ಇತರರು ಅಸಹ್ಯ ಪಟ್ಟುಕೊಳ್ಳುವ ಸ್ಥಿತಿಯಲ್ಲಿರುವ ಹಾಸಿಗೆಯ ಮೇಲೆ ಇದ್ದಾಗಲೂ, ಅವನು ಮನೆಯವರು ತಂದು ಕೊಡುತ್ತಿದ್ದ ಆಹಾರವನ್ನು ಸೇವಿಸಿ ಹರಟೆ ಹೊಡೆಯುತ್ತಾ ಕಾಲಹರಣ ಮಾಡುತ್ತಿದ್ದಿರಬಹುದು.

ಆದ್ದರಿಂದಲೇ ಯೇಸು ಬಂದು "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ" ಎಂದು ಕೇಳಿದಾಗ, ಅವನು ಹೌದು ಎಂದು ಉತ್ತರ ಕೊಡಲಿಲ್ಲ, ಇಲ್ಲವೆಂದೂ ಹೇಳಲಿಲ್ಲ. ಅವನ ಬಾಯಲ್ಲಿ ಗುಣುಗುಟ್ಟುವಿಕೆ ಮತ್ತು ಇತರರ ಬಗ್ಗೆ ನಿಂದನೆ ಇದ್ದಿತು. ಯೇಸುವಿನ ಬಳಿ ಏನು ಹೇಳಿದನು ನೋಡಿ! ನೀರು ಕಲಕುವಾಗ ನನ್ನನ್ನು ಕೊಳದಲ್ಲಿ ಇಳಿಸಲು ಯಾರೂ ಇಲ್ಲ. ನಾನು ಹೋಗುವದರೊಳಗೆ ಬೇರೊಬ್ಬನು ನನಗೆ ಮುಂದಾಗಿ ಇಳಿದು ಬಿಡುವನು. ಅಂದರೆ ನನಗೆ ಸಹಾಯ ಮಾಡುವವರು ಯಾರೂ ಇಲ್ಲ ಎಂದನು. ಯೇಸು ಅವನಿಗೆ ಎರಡು ಅದ್ಭುತಗಳನ್ನು ಮಾಡಿದನು. ಮೊದಲನೆಯದಾಗಿ ಅವನ ವ್ಯಾಧಿಯನ್ನು ಸ್ವಸ್ಥಪಡಿಸಿದನು. ಎರಡನೆಯದಾಗಿ ಅವನು ಹಾಸಿಗೆಯನ್ನು ಎತ್ತಿಕೊಂಡು ಹೋಗಲು ಬೇಕಾದ ಬಲ ನೀಡಿದನು. ದೇವರು ನಿಮಗೆ ಅದ್ಭುತವಾದ ಸ್ವಸ್ಥತೆ ತರುವಾಗ ಹಳೆಯ ಜೀವಿತದ, ಕೊರತೆಗಳ ಗುಣುಗುಟ್ಟುವಿಕೆ ಇವುಗಳನ್ನು ದೂರತಳ್ಳಿರಿ. ಶರೀರದಲ್ಲಿ ಮಾತ್ರವಲ್ಲ, ನಿಮ್ಮ ಆತ್ಮದಲ್ಲೂ ಸಹ, ಕರ್ತನು ಬಿಡುಗಡೆ ನೀಡುವನು. ವ್ಯಾಧಿ ನೀಗಿ, ಆರೋಗ್ಯ ಪಡೆಯುವಾಗ ನೂತನ ಹೃದಯವನ್ನೂ, ಉತ್ಸಾಹವನ್ನೂ, ಚೈತನ್ಯವನ್ನೂ ಬೇಡಿಕೊಳ್ಳಿರಿ. ಆಗ ಕರ್ತನು ಹಳೆಯದೆಲ್ಲವನ್ನೂ ತೆಗೆದುಹಾಕಿ ಎಲ್ಲವನ್ನೂ ಹೊಸದಾಗಿ ಮಾರ್ಪಡಿಸುವನು. ನೀವು ಕರ್ತನಲ್ಲಿ ನೂತನ ಸೃಷ್ಟಿಗಳಾಗಿ ಕಾಣಲ್ಪಡುವಿರಿ.

ದೇವಮಕ್ಕಳೇ, ನಿಮ್ಮ ವ್ಯಾಧಿಯ ಹಾಸಿಗೆಯನ್ನು ಪಾಪದ ಜೀವಿತವನ್ನು ಮಾರ್ಪಡಿಸುವ ಘನವೈದ್ಯನಾದ ಯೇಸುಕ್ರಿಸ್ತನನ್ನು ನಿಮ್ಮ ಸ್ವಂತರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳಿರಿ.

*ನೆನಪಿಗೆ : "ನಾನಂತೂ ಯೆಹೋವನೇ, ನಿನ್ನ ಆಜ್ಞೆಯನ್ನು ಮೀರಿ ಪಾಪ ಮಾಡಿದ್ದೇನೆ; ನನ್ನನ್ನು ಕರುಣಿಸಿ ಸ್ವಸ್ಥಮಾಡು" ಅಂದೆನು (ಕೀರ್ತ. 41:4).*



## ಜುಲೈ 4 ಅವನು ಯಾರು?

ಬೆಳಿಗ್ಗೆ : ಯೋಬ. 28,29
ಸಂಜೆ : ಅ.ಕೃ. 13:1–25

ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರೆಂದು ಅವನನ್ನು ಕೇಳಿದರು (ಯೋಹಾ. 5:12).

ಸ್ವಸ್ಥವಾದವನು, ತನ್ನನ್ನು ಗುಣಪಡಿಸಿದವನು, ಯಾರೆಂದು ಅರಿಯಲಿಲ್ಲ. ಪುನಃ ಯೇಸು ಅವನನ್ನು ದೇವಾಲಯದಲ್ಲಿ ಕಂಡು "ನಿನಗೆ ಸ್ವಸ್ಥವಾಯಿತಲ್ಲಾ ಇನ್ನು ಮೇಲೆ ಪಾಪ ಮಾಡಬೇಡ, ನಿನಗೆ ಹೆಚ್ಚಿನ ಕೇಡು ಬಂದೀತು" ಅಂದನು. ಆ ಮನುಷ್ಯನು ಅಲ್ಲಿಂದ ಹೋಗಿ ನನ್ನನ್ನು ಸ್ವಸ್ಥಮಾಡಿದವನು ಯೇಸುವೇ ಎಂದು ಯೆಹೂದ್ಯರಿಗೆ ತಿಳಿಸಿದನು. ಯೇಸು ಸಬ್ಬತ್ ದಿನದಲ್ಲಿ ಸ್ವಸ್ಥಪಡಿಸಿದ್ದರಿಂದ ಆತನನ್ನು ಹಿಂಸಿಸುತ್ತಾ, ಆತನನ್ನು ಕೊಲ್ಲುವ ಮಾರ್ಗವನ್ನು ಹುಡುಕುವವರಾದರು (ಯೋಹಾ. 5:14–16).

ಸ್ವಸ್ಥವಾದವನಿಗೆ ತನ್ನನ್ನು ಗುಣಪಡಿಸಿದವನು ಯಾರೆಂಬುದನ್ನು ತಿಳಿದುಕೊಳ್ಳುವ ಮನಸ್ಸಿಲ್ಲ. ಆತನಿಗೆ ಕೃತಜ್ಞತೆ ಸಲ್ಲಿಸಿ ಗೌರವಿಸಲೂ ಇಲ್ಲ. ಆರಾಧಿಸಲೂ ಇಲ್ಲ. ಇಂದು ಕರ್ತನು ಅನೇಕರಿಗೆ ಅದ್ಭುತಗಳನ್ನು ಮಾಡುವಾಗ ಅದನ್ನು ಹಗುರವಾಗಿ ತೆಗೆದುಕೊಳ್ಳುತ್ತಾರೆ. ಎಲ್ಲಾ ಸ್ವಾಭಾವಿಕವಾಗಿ ನಡೆದಂತೆ ಭಾವಿಸುತ್ತಾರೆ. ಕರ್ತನಿಗೆ ಘನಮಾನ ಮಹಿಮೆಗಳನ್ನು ಸಲ್ಲಿಸುವದಿಲ್ಲ. ತನ್ನನ್ನು ಗುಣಪಡಿಸಿದಾತನು ಯೇಸು ಎಂದು ತಿಳಿದಾಗ, ಅದನ್ನು ಕರ್ತನ ವಿರೋಧಿಗಳಾದ ಯೆಹೂದ್ಯರ ಬಳಿ ಹೋಗಿ ಹೇಳಿದನು. ಇದರಿಂದ ಅವರು ಯೇಸುವನ್ನು ಹಿಂಸಿಸುವರಾದರು. ಕೊಲೆ ಮಾಡುವ ಮಾರ್ಗ ಹುಡುಕಿದರು. ಇದರಿಂದ ಸ್ವಸ್ಥಹೊಂದಿದ ಆ ಮನುಷ್ಯನಿಗೆ ಯಾರ ಬಳಿ ಯಾವಾಗ ಏನನ್ನು ಹೇಳಬೇಕೆಂಬ ಪರಿಜ್ಞಾನ ಇಲ್ಲದಿರುವದನ್ನು ಕಾಣುತ್ತೇವೆ. ಆ ಮನುಷ್ಯನಿಗೆ ದೇವರ ದಯೆ ಕನಿಕರಗಳನ್ನು ಅರಿತುಕೊಳ್ಳಲಾಗಲಿಲ್ಲ. ಇನ್ನು ಮೇಲೆ ಪಾಪ ಮಾಡಬೇಡ, ಇನ್ನೂ ಹೆಚ್ಚು ಕೇಡು ಬಂದೀತು ಎಂದು ಕರ್ತನು ಹೇಳಿದಾಗ ಇನ್ನು ನಾನು ಪಾಪ ಮಾಡದಂತೆ ನನ್ನ ಅಂತರ್ಯದಲ್ಲಿ ಬಲ ನೀಡು ಎಂದೂ ಸಹ ಅವನು ಬೇಡಿಕೊಳ್ಳಲಿಲ್ಲ. ಹೀಗೆ ಅನೇಕರು ಕೃತಜ್ಞತೆ ಇಲ್ಲದವರಾಗಿ, ಜ್ಞಾನವಿಲ್ಲದವರಾಗಿ ಇರುವದರಿಂದ ಕರ್ತನು ಜನರ ಮಧ್ಯದಲ್ಲಿ ಅನೇಕ ಅದ್ಭುತಗಳನ್ನು ಸೂಚಕ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ.

ದೇವಮಕ್ಕಳೇ, ಚಿಕ್ಕ ಚಿಕ್ಕ ಪಾಪಗಳಾಗಲಿ, ದೊಡ್ಡ ಪಾಪವಾಗಲಿ ಕೂಡಲೇ ಕರ್ತನ ಬಳಿ ಅರಿಕೆ ಮಾಡಿರಿ. ನಿಜವಾಗಿ ಮಾನಸಾಂತರ ಪಡುವಾಗ, ನಿಮ್ಮ ಎಲ್ಲಾ ಪಾಪಗಳನ್ನು ಮನ್ನಿಸಿ ಅಕ್ರಮಗಳನ್ನು ನೀಗಿಸುವನು. ಅಕ್ರಮಗಳನ್ನು ಕ್ಷಮಿಸುವಾಗ, ವ್ಯಾಧಿಗಳು ತಾವಾಗೇ ಗುಣವಾಗುವವು.

*ನೆನಪಿಗೆ : ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವನು, ಸಮಸ್ತ ರೋಗಗಳನ್ನು ವಾಸಿ ಮಾಡುವನು (ಕೀರ್ತ. 103:3).*

ಜುಲೈ 5

## ಎಚ್ಚರವಿರುವ ಹಾಸಿಗೆ!

ಬೆಳಿಗ್ಗೆ : ಯೋಬ. 30,31
ಸಂಜೆ : ಅ.ಕೃ. 13:26–52

"ನಾನು ನಿದ್ರೆಗೊಂಡಿದ್ದರೂ ನನ್ನ ಹೃದಯವು ಎಚ್ಚರಗೊಂಡಿತ್ತು. ಎನ್ನಿನಿಯನು ಕದ ತಟ್ಟಿದನು" (ಪ.ಗೀ. 5:2).

ಇಲ್ಲಿ ವಧುವು ತನ್ನ ಅನುಭವವನ್ನು ಹೇಳುತ್ತಾಳೆ. ನಾನು ನಿದ್ರೆಯಲ್ಲಿದ್ದರೂ ನನ್ನ ಹೃದಯ ಎಚ್ಚರಗೊಂಡಿದ್ದಿದ್ದರಿಂದ ನನ್ನ ಇನಿಯನ ಕದ ತಟ್ಟುವಿಕೆಯ ಶಬ್ದವನ್ನು ಕೇಳಿಸಿಕೊಂಡೆನು ಎಂದು. ಅವಳು ತನ್ನ ಆತ್ಮದಾಪ್ತನ ಮೇಲೆ ಇಟ್ಟಿದ್ದ ಪ್ರೀತಿ, ಅಕ್ಕರೆಯಿಂದಾಗಿ ಅವಳ ಕಿವಿಗಳು ತನ್ನ ಪ್ರಿಯನ ಸ್ವರವನ್ನು ಕೇಳಲು ಆತುರದಿಂದ ಎದುರು ನೋಡುತ್ತಿತ್ತು. ಆದ್ದರಿಂದಲೇ ಕದವನ್ನು ತಟ್ಟುವ ತನ್ನ ಇನಿಯನ ಶಬ್ದವನ್ನು ಕೂಡಲೆ ಕೇಳಲು ಸಾಧ್ಯವಾಯಿತು.

ಕೆಲವು ಮನೆಗಳಲ್ಲಿ ಗಂಡಂದಿರು, ಮಕ್ಕಳೂ ಬೆಳಿಗ್ಗೆ ಬೇಗನೆ ಕೆಲಸಕ್ಕೆ ಶಾಲೆಗೆ ಹೋಗಬೇಕಾಗಿರುತ್ತದೆ. ಮನೆಯ ಒಡತಿ ಅದಕ್ಕೆ ಮೊದಲೇ ಎದ್ದು ಅಡಿಗೆ, ತಿಂಡಿ ಸಿದ್ಧ ಮಾಡಿ ಕಳುಹಿಸಲು ಅವಳ ಆಂತರ್ಯ ಎಚ್ಚರದಿಂದಿರುತ್ತದೆ. ಅದೇ ರೀತಿ ತಾಯಂದಿರು ತಮ್ಮ ಸಣ್ಣ ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ಹಗಲು ರಾತ್ರಿ ಎನ್ನದೆ ಎಚ್ಚರದಿಂದ ಇರುತ್ತಾರೆ. ನಿಮ್ಮ ಆಂತರ್ಯ ಕರ್ತನಿಗಾಗಿ ಹಂಬಲಿಸುವದಾದರೆ ರಾತ್ರಿಯಲ್ಲಿ ನೀವು ನಿದ್ರಿಸಿದ್ದರೂ, ಆತನ ಮೆಲುಧ್ವನಿಯನ್ನು ಕೇಳುವಿರಿ. ಆತನು ನಿಮಗೆ ತಿಳಿಯಪಡಿಸುವದನ್ನೂ, ಹೇಳುವದನ್ನೂ ಕೂಡಲೇ ಗ್ರಹಿಸಿಕೊಳ್ಳುವಿರಿ. ಆದ್ದರಿಂದ ಕರ್ತನ ಬಳಿ ಎಚ್ಚರ ಉಳ್ಳ ಹೃದಯವನ್ನು ನೀಡುವಂತೆ ಬೇಡಿಕೊಳ್ಳಿರಿ. ನನಗೆ ಗೊತ್ತಿರುವ ಒಬ್ಬ ಸ್ನೇಹಿತರಿರುವರು. ಅವರು ಹೊತ್ತಾರೆಯಲ್ಲಿ ನಾಲ್ಕು ಗಂಟೆಗೆಲ್ಲಾ ಎದ್ದು ಪ್ರಾರ್ಥಿಸಬೇಕೆಂಬ ಬಯಕೆಯಿಂದ ರಾತ್ರಿಯಲ್ಲಿ ಸ್ವಲ್ಪವಾಗಿ ಊಟ ಮಾಡುವರು. ದೇವಸಮ್ಮುಖದಲ್ಲಿ ಬೆಳಿಗ್ಗೆ ಬೇಗ ಕಾಣಿಸಿಕೊಳ್ಳಬೇಕೆಂದು ರಾತ್ರಿಯಲ್ಲಿ ಮಲಗಲು ಬೇಗ ಹಾಸಿಗೆಗೆ ಹೋಗುವರು. ಆತ್ಮನಾದಾತನು ಸರಿಯಾದ ಸಮಯಕ್ಕೆ ಅವರನ್ನು ಹೊತ್ತಾರೆಯಲ್ಲಿ ಎಚ್ಚರಗೊಳಿಸುವನು. ಕೀರ್ತನೆಗಾರನಾದ ದಾವೀದನಿಗೆ ಆ ಒಂದು ಹಂಬಲ, ನಿರೀಕ್ಷೆ ಇದ್ದಿತು. ನಾನಾದರೋ ನಿರಪರಾಧಿಯು, ನಿನ್ನ ಸಾನಿಧ್ಯವನ್ನು ಸೇರುವೆನು. ಎಚ್ಚತ್ತಾಗ ನಿನ್ನ ಸ್ವರೂಪದರ್ಶನದಿಂದ ತೃಪ್ತನಾಗಿರುವೆನು (ಕೀರ್ತ. 17:15) ಎಂದು ಹೇಳುತ್ತಾನೆ.

ದೇವಮಕ್ಕಳೇ, ಕರ್ತನ ಸ್ವರವನ್ನು ಮಾತ್ರವಲ್ಲ, ಆತನ ಬರುವಿಕೆಯ ತುತೂರಿ ಶಬ್ದವನ್ನು ಕೇಳಲೂ, ನೀವು ಎದುರುನೋಡುವವರಾಗಿರಿ, ನೀವು ನೆನಸದ ಗಳಿಗೆಯಲ್ಲಿ ಕರ್ತನು ಬರುವನು. ನೀವು ಅಂಗೀಕರಿಸಿಕೊಂಡವರ ಗುಂಪಿನಲ್ಲಿ ಇರುವಿರಾದರೆ ಕಣ್ಣುರೆಪ್ಪೆ ಬಡಿಯುವಷ್ಟರಲ್ಲಿ ಮಾರ್ಪಟ್ಟು ಆಕಾಶದಲ್ಲಿ ಕಾಣಲ್ಪಡುವ ಯೇಸುಕ್ರಿಸ್ತನೊಂದಿಗೆ ಕಾಣಲ್ಪಡುವಿರಿ.

*ನೆನಪಿಗೆ : ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರಿ (ಮತ್ತಾ.25:13).*



ಜುಲೈ 6

## ಇಳಿಸಿದ ಹಾಸಿಗೆ!

ಬೆಳಿಗ್ಗೆ : ಯೋಬ. 32,33
ಸಂಜೆ : ಅ.ಕೃ. 14

ಬಹುಜನರು ಕೂಡಿ ಬಂದದ್ದರಿಂದ ಅವರು ಆತನ ಹತ್ತಿರಕ್ಕೆ ಸೇರಲಾಗದೆ ಆತನಿದ್ದ ಮನೆಯ ಮೇಲ್ಛಾವಣಿಯನ್ನು ಬಿಚ್ಚಿ ದ್ವಾರ ಮಾಡಿ ಪಾರ್ಶ್ವವಾಯು ರೋಗಿಯು ಮಲಗಿದ್ದ ಹಾಸಿಗೆಯನ್ನು ಇಳಿಸಿದರು (ಮಾರ್ಕ. 2:4).

ಯೇಸುಕ್ರಿಸ್ತನು ಈ ಭೂಮಿಯಲ್ಲಿ ಇದ್ದಾಗ ಅನೇಕ ಪಾರ್ಶ್ವವಾಯು ರೋಗಿಗಳನ್ನು ಸ್ವಸ್ಥಪಡಿಸಿದನು. ಈ ವಾಕ್ಯ ಭಾಗದಲ್ಲಿ ಇನ್ನೊಬ್ಬ ಪಾರ್ಶ್ವವಾಯು ರೋಗಿಯನ್ನು ನೋಡುತ್ತೇವೆ. ಅವನು ಎಷ್ಟು ವರ್ಷಗಳಿಂದ ಪಾರ್ಶ್ವವಾಯು ರೋಗಿಯಾಗಿದ್ದನೆಂಬುದನ್ನು ಸತ್ಯವೇದ ಸೂಚಿಸಿಲ್ಲ. ಅವನಿಗೆ ವಿಶ್ವಾಸವಿಲ್ಲದೇ ಇದ್ದರೂ ಇರಬಹುದು. ಆದರೆ ಅವನನ್ನು ಹೊತ್ತುಕೊಂಡು ಬಂದ ನಾಲ್ಕು ಜನರಲ್ಲಿದ್ದ ನಂಬಿಕೆಯನ್ನು ಯೇಸು ಕಂಡನು. ಅವರ ನಿಮಿತ್ತ ಆ ರೋಗಿಯನ್ನು ಸ್ವಸ್ಥಪಡಿಸಲು ತೀರ್ಮಾನಿಸಿದನು.

ಯೇಸುಕ್ರಿಸ್ತನು ಆ ಪಾರ್ಶ್ವವಾಯು ರೋಗಿಯನ್ನು ನೋಡಿ, ಮಗನೇ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು. ಮಾತ್ರವಲ್ಲ, ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ ಅಂದನು (ಮಾರ್ಕ. 2:5,11). ಕೊಳದ ಬಳಿ ಬಿದ್ದಿದ್ದ ಪಾರ್ಶ್ವವಾಯು ರೋಗಿಯನ್ನು ಸ್ವಸ್ಥಪಡಿಸಿದಾಗ ಯೇಸು ಅವನನ್ನು ನೋಡಿ ಇನ್ನು ಮೇಲೆ ಪಾಪ ಮಾಡಬೇಡವೆಂದು ಹೇಳಿದನು. ಈ ಎರಡೂ ಸಂಭವಗಳಿಂದ ಪಾಪವೇ ಅನೇಕ ವ್ಯಾಧಿಗಳಿಗೆ ಕಾರಣವಾಗಿರುವದೆಂದು ತಿಳಿಯಬಹುದು. ಅನೇಕರು ಹಾಸಿಗೆಯಲ್ಲೂ ಪಾಪದ ಕುರಿತಾಗಿಯೇ ಚಿಂತಿಸುವರು. ಇದರಿಂದಾಗಿ ಇಚ್ಛೆಯ ಆತ್ಮಗಳಿಂದ ಹಿಡಿಯಲ್ಪಡುವರು. ಸೈತಾನನು ಇಚ್ಛೆಯ ಆತ್ಮಗಳನ್ನು ತಂದುಹಾಕಿ ಜನರನ್ನು ಬಲವಾಗಿ ಶೋಧಿಸುವನು. ಅನೇಕ ಯೌವನಸ್ಥರು ಕೆಟ್ಟ ಹವ್ಯಾಸಗಳಲ್ಲಿ ಸಿಕ್ಕಿಕೊಂಡು ತಮ್ಮ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಿರುವರು. ಈ ಆಧುನಿಕತೆಯ ಯುಗದಲ್ಲಿ ಟಿ.ವಿ. ಮೊಬೈಲ್, ಇಂಟರ್‌ನೆಟ್‌ಗಳ ಮೂಲಕ ಸೈತಾನನು ಅನೇಕಾನೇಕ ಆತ್ಮಗಳನ್ನು ನರಕದೆಡೆಗೆ ಕೊಂಡೊಯ್ಯುತ್ತಿರುವನು.

ದೇವಮಕ್ಕಳೇ, ಇಂದು ಕ್ರೈಸ್ತ ಮಕ್ಕಳೂ, ಸೈತಾನನ ಈ ತಂತ್ರಗಳಿಗೆ ಬಲಿಯಾಗುತ್ತಿರುವರು. ಮಕ್ಕಳನ್ನು ಅವನ ಕೈಯಿಂದ ತಪ್ಪಿಸುವದು ತಂದೆ ತಾಯಿಗಳಿಗೆ ದೊಡ್ಡ ಸವಾಲಾಗಿದೆ. ಇದಕ್ಕೆಲ್ಲಾ ಪರಿಹಾರ ಯೇಸುಕ್ರಿಸ್ತನೊಬ್ಬನೇ. ಆತನ ಬಳಿ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡುವಾಗ ಬಿಡುಗಡೆ ನಿಶ್ಚಯ. ನಿಮ್ಮ ಮಕ್ಕಳಿಗಾಗಿಯೂ ಕರ್ತನಲ್ಲಿ ಪ್ರಾರ್ಥಿಸಿರಿ. ಮಾತ್ರವಲ್ಲ, ಅವರನ್ನು ಕರ್ತನ ಬಳಿ ನಡೆಸಿರಿ.

*ನೆನಪಿಗೆ : ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ, ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು (1 ಯೋಹಾ. 1:9).*

ಜುಲೈ 7

## ಹೊಲೆಯಾದ ಹಾಸಿಗೆ!

ಬೆಳಿಗ್ಗೆ : ಯೋಬ. 34,35
ಸಂಜೆ : ಅ.ಕೃ. 15:1–21

ರೂಬೇನನೇ, ನೀನು ನನ್ನ ಚೊಚ್ಚಲ ಮಗನೂ... ಪ್ರಥಮ ಫಲವೂ ಆಗಿದ್ದೀ. ಆದರೂ ದಡಮೀರಿದ ಪ್ರವಾಹದಂತಿರುವ ನೀನು ಇನ್ನು ಪ್ರಮುಖ ಸ್ಥಾನದಲ್ಲಿ ಇರುವದಿಲ್ಲ. ನಿನ್ನ ತಂದೆಯ ಹಾಸಿಗೆಯನ್ನು ಹತ್ತಿ ಹೊಲೆಮಾಡಿದಿಯಲ್ಲಾ (ಆದಿ. 49:3,4).

ರೂಬೇನನು ಯಾಕೋಬನ ಜೇಷ್ಠಪುತ್ರನು. ಗೌರವದಲ್ಲಿಯೂ ಅಧಿಕಾರದಲ್ಲಿಯೂ ಪ್ರಮುಖನಾಗಿದ್ದನು. ಆದರೆ ವ್ಯಭಿಚಾರದ ಇಚ್ಛೆಯ ಆತ್ಮದಿಂದ ಹಿಡಿಯಲ್ಪಟ್ಟವನಾಗಿ ತಂದೆಯ ಹಾಸಿಗೆಯನ್ನು ಹತ್ತಿ ಅದನ್ನು ಹೊಲೆಮಾಡಿದನು. ದೇವರೊಂದಿಗೆ ಹೆಂಡತಿ ಮಕ್ಕಳೊಂದಿಗೆ ಅನ್ಯೋನ್ಯತೆ ಇಲ್ಲದವರು ಈ ಇಚ್ಛೆಯ ಆತ್ಮಗಳಿಗೆ ಬಲಿಯಾಗುವರು. ಇಂಥವರು ಮುಂದಿನ ಪರಿಣಾಮಗಳನ್ನು ಕುರಿತು ಸ್ವಲ್ಪವೂ ಚಿಂತಿಸುವದಿಲ್ಲ.

ರೂಬೇನನು ವ್ಯಭಿಚಾರದ ಆತ್ಮದಿಂದ ಹಿಡಿಯಲ್ಪಟ್ಟು ಸ್ವಂತ ತಂದೆಯ ಉಪಪತ್ನಿಯೊಡನೆ ಅಕ್ರಮ ಸಂಬಂಧವನ್ನು ಇರಿಸಿಕೊಂಡನು. ಯಾಕೋಬನು ಮಿಗ್ದಲ್ ಏದರಿನ ಬಳಿ ವಾಸವಾಗಿದ್ದಾಗ ರೂಬೇನನು ತನ್ನ ತಾಯಿಗೆ ಸಮಾನಳಾದ ಬಿಲ್ಹಳನ್ನು ಸಂಗಮಿಸಿ ದೇವರಿಗೆ ವಿರೋಧವಾಗಿ ಪಾಪಮಾಡಿದನು (ಆದಿ. 35:22) ಇದನ್ನು ಕೇಳಿದ ತಂದೆಯಾದ ಯಾಕೋಬನು ಎಷ್ಟೊಂದು ವ್ಯಥೆ ಪಟ್ಟಿರಬಹುದು. ವರ್ಷಗಳು ಉರುಳಿಹೋದರೂ ಅವನ ಆಂತರ್ಯಕ್ಕೆ ಉಂಟಾಗಿದ್ದ ಗಾಯ ಆರಲೇ ಇಲ್ಲ. ಸಾಯುವಾಗ, ಯಾಕೋಬನು ಎಲ್ಲಾ ಮಕ್ಕಳನ್ನು ಕರೆದು ಆಶೀರ್ವದಿಸಿದರೂ, ರೂಬೇನನನ್ನು "ದಡ ಮೀರಿದ ಪ್ರವಾಹದಂತಿರುವ ನೀನು ಪ್ರಮುಖ ಸ್ಥಾನದಲ್ಲಿರುವದಿಲ್ಲ" ಎಂದು ಶಪಿಸಿದನು (ಆದಿ. 49:4). ಸತ್ಯವೇದ ಪಂಡಿತರು, ರೂಬೇನನ ಸಂತತಿಯು ಇಂದಿಗೂ ಫ್ರಾನ್ಸ್ ದೇಶದಲ್ಲಿ ಜೀವಿಸುತ್ತಿರುವರೆಂದು ಕಂಡುಹಿಡಿದಿದ್ದಾರೆ. ಪ್ರಪಂಚದಲ್ಲಿ ಅಧಿಕವಾದ ಪ್ರವಾಸಿಗಳು ಆ ದೇಶಕ್ಕೆ ಹೋಗಿ ತಮ್ಮ ಇಚ್ಛೆಗಳನ್ನು ತೀರಿಸಿಕೊಳ್ಳುವರು. ಪ್ರಪಂಚದಲ್ಲೇ ಅಧಿಕವಾದ ವ್ಯಭಿಚಾರ ಆ ದೇಶದಲ್ಲಿ ನಡೆಯುವದೆಂದು ಕೆಲವು ಅಂಕಿ ಅಂಶಗಳು ತಿಳಿಸುತ್ತವೆ. ಇಚ್ಛೆಗಳನ್ನು ಕೆರಳಿಸುವ ಅನೇಕ ಸುಗಂಧ ದ್ರವ್ಯಗಳು ಮಾದಕ ವಸ್ತುಗಳು ಅಲ್ಲಿ ತಯಾರಿಸುವರು.

ದೇವಮಕ್ಕಳೇ, ಯೋಸೇಫನಂತೆ ಇಚ್ಛೆಯ ಆತ್ಮಗಳನ್ನು ಬಿಟ್ಟು ಓಡಿರಿ. ಯೋಸೇಫನೂ ಯಾಕೋಬನ ಮಗನೇ. ಆದರೂ ಪವಿತ್ರತೆಯನ್ನು ಕಾಪಾಡಿಕೊಳ್ಳಲು ಯೋಸೇಫನು ಎಷ್ಟು ಎಚ್ಚರಿಕೆಯುಳ್ಳವನಾಗಿದ್ದನು. ಯೋಸೇಫನ ಹಾಗೂ ದಾನಿಯೇಲನ ಜೀವನ ಚರಿತ್ರೆ ನಿಮಗೆ ಮಾದರಿಯಾಗಿರಲಿ.

*ನೆನಪಿಗೆ : ದಾಂಪತ್ಯವು ಮಾನ್ಯವಾದದ್ದೆಂದು ಎಲ್ಲರೂ ಎಣಿಸಬೇಕು; ಗಂಡ ಹೆಂಡತಿಯರ ಸಂಬಂಧವು ನಿಷ್ಕಳಂಕವಾಗಿರಬೇಕು. ಜಾರರಿಗೂ, ವ್ಯಭಿಚಾರಿಗಳಿಗೂ ದೇವರು ನ್ಯಾಯ ತೀರಿಸುವನೆಂದು ತಿಳಿದುಕೊಳ್ಳಿರಿ (ಇಬ್ರಿ. 13:3,4).*



ಜುಲೈ 8

## ದುಷ್ಟನ ಹಾಸಿಗೆ!

ಬೆಳಿಗ್ಗೆ : ಯೋಬ. 36,37
ಸಂಜೆ : ಅ.ಕೃ. 15:22–41

ದುಷ್ಟನು ತನ್ನ ಹಾಸಿಗೆಯ ಮೇಲಿರುವಾಗಲೂ ಕೆಡುಕನ್ನೇ ಯೋಚಿಸುತ್ತಿರುವನು. ಅಲ್ಲದ ದಾರಿಯಲ್ಲಿ ನಿಂತುಕೊಂಡಿದ್ದಾನೆ; ಎಂಥ ದುಷ್ಕೃತ್ಯಕ್ಕೂ ಹೇಸುವದಿಲ್ಲ (ಕೀರ್ತ. 36:4).

ಸತ್ಯವೇದದಲ್ಲಿ ಭಕ್ತರ ಹಾಸಿಗೆಯನ್ನೂ ನೋಡುತ್ತೇವೆ. ದುಷ್ಟರ ಹಾಸಿಗೆಯನ್ನೂ ನೋಡುತ್ತೇವೆ. ನೆಟ್ಟಗೆ ನಡೆಯುವ ಪ್ರತಿಯೊಬ್ಬನೂ ತನ್ನ ತನ್ನ ದೀರ್ಘ ನಿದ್ರಾ ಸ್ಥಾನದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದಾನೆ (ಯೆಶಾ. 57:2). ಆದರೆ, ದುಷ್ಟರು, ಕೊನೆಯಲ್ಲಿ ಪಾತಾಳಕ್ಕೆ ಹೋಗಿ, ಇರುಳಿನಲ್ಲಿ ಹುಳುಗಳ ಹಾಸಿಗೆಯ ಮೇಲೆ ಯಾತನೆಪಡುವರು (ಯೋಬ. 17:13). ಪ್ರವಾದಿಯಾದ ಯೆಶಾಯನು "ನಿನ್ನ ವೈಭವವೂ, ವೀಣಾನಾದವೂ ಪಾತಾಳಕ್ಕೆ ತಳ್ಳಲ್ಪಟ್ಟಿವೆ. ನಿನಗೆ ಹುಳುಗಳೇ ಹಾಸಿಗೆ, ಕ್ರಿಮಿಗಳೇ ಹೊದಿಕೆ" (ಯೆಶಾ. 14:11) ಎಂದು ಹೇಳುತ್ತಾನೆ.

ನೀವು ಹಾಸಿಗೆಯನ್ನು ಕರ್ತನಿಗೆಂದು ಪ್ರತಿಷ್ಠೆ ಮಾಡಿರಿ. ಹಾಸಿಗೆಗೆ ಹೋಗುವಾಗ, ಕರ್ತನನ್ನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು ಎಂದು ಸ್ತುತಿಸಿರಿ. ಹೊತ್ತಾರೆಯಲ್ಲಿ ಎದ್ದಾಗಲೂ ಪುನಃ ಕರ್ತನನ್ನು ಸ್ತುತಿಸಿ. ದಿನದ ಮೊದಲ ಕಾರ್ಯವಾಗಿ ನಿಮ್ಮ ಇಂದ್ರಿಯಗಳನ್ನು ಕಲ್ವಾರಿ ಶಿಲುಬೆಯಲ್ಲಿ ಅರ್ಪಿಸಿರಿ. ನಮ್ಮ ಕರ್ತನು ಪರಿಶುದ್ಧತೆಯುಳ್ಳವನು ಮಾತ್ರವಲ್ಲ, ನಿಮಗೆ ಪರಿಶುದ್ಧತೆಯನ್ನು ನೀಡುವಾತನೂ ಆಗಿರುವನು. ಕರ್ತನ ಹೆಸರುಗಳಲ್ಲಿ ಒಂದು ಯೆಹೋವ ಮೆಕದ್ದಸ್ ಎಂಬುದು. ಅಂದರೆ "ನಿಮ್ಮನ್ನು ಪರಿಶುದ್ಧ ಪಡಿಸುವ ದೇವರು ನಾನೇ" ಎಂದು ಅರ್ಥ. ಕರ್ತನ ಹಸ್ತಗಳಲ್ಲಿ ನಿಮ್ಮನ್ನು ಒಪ್ಪಿಸಿಕೊಡುವಿರಾದರೆ, ಆತನು ನಿಮ್ಮನ್ನು ಹಗಲೂ ಇರುಳೂ ಕಾಪಾಡುವನು. "ಕ್ರಿಸ್ತಯೇಸುವಿನವರು ತಮ್ಮ ಶರೀರ ಭಾವವನ್ನು ಅದರ ವಿಷಯಾಭಿಲಾಷೆ ಸ್ವೇಚ್ಛಾಭಿಲಾಷೆ ಸಹಿತ ಶಿಲುಬೆಗೆ ಹಾಕಿದವರು" ಎಂದು ಅಪೊ. ಪೌಲನು ಹೇಳುತ್ತಾನೆ (ಗಲಾ. 5:24). ಮತ್ತಾಯ13:25 ಹೇಳುತ್ತದೆ "ಜನರು ನಿದ್ರೆ ಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋದಿಯ ನಡುವೆ, ಹಣಜಿಯನ್ನು ಬಿತ್ತಿಹೋದನು" ಎಂದು. ಗೋದಿಯಾದ ಸತ್ಯವೇದ ವಾಕ್ಯಗಳನ್ನು ಬಿತ್ತುವವನು ದೇವರು. ಕಳೆಯಾದ ಇಚ್ಛೆಗಳನ್ನು ಬಿತ್ತುವವನು ಸೈತಾನನು. ನಿದ್ರಿಸುವ ವೇಳೆ ಮನುಷ್ಯನ ಬಲಹೀನವಾದ ಸಮಯ.

ಆದ್ದರಿಂದ ದೇವಮಕ್ಕಳೇ, ಸೈತಾನನು ಕಳೆಗಳನ್ನು ಬಿತ್ತದಂತೆ, ಪವಿತ್ರಾತ್ಮನನ್ನು ಕಾವಲಾಗಿರಿಸಿರಿ. ಇಸ್ರಾಯೇಲ್ಯರನ್ನು ಕಾಯುವಾತನು ತೂಕಡಿಸುವದಿಲ್ಲ, ನಿದ್ರಿಸುವದಿಲ್ಲ (ಕೀರ್ತ.121:4). ನಿಮ್ಮನ್ನು ನೀವು ಕರ್ತನಿಗೆ ಒಪ್ಪಿಸಿಕೊಡುವಿರಾದರೆ, ದೇವರಾತ್ಮನು ಸೈತಾನನಿಗೆ ವಿರೋಧವಾಗಿ ಧ್ವಜವೆತ್ತಿ ನಿಲ್ಲುವನು. ಆಗ ಶತ್ರುವಿನ ಬಲ ಮುರಿಯಲ್ಪಡುವದು.

*ನೆನಪಿಗೆ : ಪವಿತ್ರಾತ್ಮನು ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ.... ಪವಿತ್ರಾತ್ಮನು ತಾನೇ ಮಾತಿಲ್ಲದೆ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ (ರೋಮಾ. 8:26).*

ಜುಲೈ 9

## ಹಾಸಿಗೆಯಲ್ಲಿ ಕಪ್ಪೆ!

ಬೆಳಿಗ್ಗೆ : ಯೋಬ. 38,39,40
ಸಂಜೆ : ಅ.ಕೃ. 16:1–16

ನೈಲ್‌ನದಿಯಲ್ಲಿ ಕಪ್ಪೆಗಳು ಅಸಂಖ್ಯವಾಗಿ ಹುಟ್ಟುವವು. ಅವು ಹೊರಟುಬಂದು ನಿನ್ನ ಅರಮನೆಯಲ್ಲಿಯೂ ಮಂಚದ ಮೇಲೆಯೂ ಬರುವದಲ್ಲದೆ.... ಹಿಟ್ಟು ನಾದುವ ಕೊಣವಿಗಳಲ್ಲಿಯೂ ಬರುವವು (ವಿಮೋ. 8:3).

ಐಗುಪ್ತ್ಯರಿಗೆ ಬಂದ ಹತ್ತು ಬಾಧೆಗಳಲ್ಲಿ ಒಂದು ಬಾಧೆ ಕಪ್ಪೆಗಳು ಐಗುಪ್ತ್ಯರು ಆರಾಧಿಸುತ್ತಾ ಬಂದ ದೈವಗಳಲ್ಲಿ ಕಪ್ಪೆಯೂ ಒಂದು. ಕಪ್ಪೆಯ ಆತ್ಮ ಸಂತಾನ ವೃದ್ಧಿಯ ದೇವರು ಎಂದು ನಂಬಿದ್ದರು. ಆದರೆ ಕಪ್ಪೆಯ ಆತ್ಮ, ಕುಟುಂಬವನ್ನು ಅಭಿವೃದ್ಧಿ ಪಡಿಸುವ ಆತ್ಮವಲ್ಲ. ಅದು ಇಚ್ಛೆಗಳನ್ನು ಉಂಟುಮಾಡುವ ಆತ್ಮ. ಅಪೊ. ಯೋಹಾನನು ಪತ್ಮೋಸ್ ದ್ವೀಪದಲ್ಲಿ ಕಂಡ ದರ್ಶನದಲ್ಲಿ ಘಟಸರ್ಪ, ಮೃಗ, ಸುಳ್ಳು ಪ್ರವಾದಿ ಇವರ ಬಾಯಿಗಳಿಂದ ಕಪ್ಪೆಗಳಂತಿದ್ದ ಮೂರು ಅಶುದ್ಧಾತ್ಮಗಳು ಬರುವದನ್ನು ಕಂಡೆನು ಎಂದು (ಪ್ರಕ. 16:13,14) ಬರೆಯುತ್ತಾನೆ.

ಕಪ್ಪೆಗಳ ಆತ್ಮಗಳು ಹಲವು ರೀತಿಯ ಇಚ್ಛೆಗಳನ್ನು ತಂದುಹಾಕುವವು. ಆದರೆ ಪವಿತ್ರಾತ್ಮನು ಇಚ್ಛೆಗಳ ನಿಗ್ರಹವನ್ನು ತರುವದು. ಪವಿತ್ರಾತ್ಮನ ಒಂಬತ್ತು ಫಲಗಳಲ್ಲಿ ಒಂದು ಇಚ್ಛೆಗಳನ್ನು ನಿಗ್ರಹಿಸುವದು (ಗಲಾ. 5:22,23). ಹೋರಾಟ ಮಾಡುವವರೆಲ್ಲರೂ ಎಲ್ಲಾ ವಿಷಯಗಳಲ್ಲಿ ಮಿತಿಯಲ್ಲಿರುತ್ತಾರೆ. ಅವರು ಬಾಡಿಹೋಗುವ ಜಯಮಾಲೆಯನ್ನು ಹೊಂದುವದಕ್ಕೆ ಸಾಧನೆ ಮಾಡುತ್ತಾರೆ. ನಾವಾದರೋ ಬಾಡಿಹೋಗದ ಜಯಮಾಲೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ (1 ಕೊರಿಂ. 9:25) ಎಂದು ಅಪೊ. ಪೌಲನು ತನ್ನ ಪತ್ರಿಕೆಯಲ್ಲಿ ಬರೆಯುತ್ತಾನೆ. ಹೌದು, ನೀವು ಇಚ್ಛೆಗಳನ್ನು ನಿಗ್ರಹಿಸದೇ ಹೋದರೆ, ನೀವು ಜಯಶಾಲಿಗಳಾಗಿ ನಿತ್ಯತ್ವವನ್ನು ಬಾಧ್ಯತೆಯಾಗಿ ಪಡೆಯಲು ಸಾಧ್ಯವಿಲ್ಲ. ಸೈತಾನನು ಸುಳ್ಳುಗಾರನೂ, ಸುಳ್ಳಿಗೆ ತಂದೆಯಾಗಿರುವದು ಮಾತ್ರವಲ್ಲ ಇಚ್ಛೆಗಳಿಗೂ ತಂದೆಯಾಗಿರುವನು. ಶರೀರದ ಆಸೆ, ಕಣ್ಣಿನಾಶೆ, ಬದುಕು ಬಾಳಿನ ಡಂಭ ಸೈತಾನನಿಂದ ಬರುವದು. ಯೇಸು ಯೆಹೂದ್ಯರನ್ನು ಖಂಡಿಸಿ ಸೈತಾನನು ನಿಮ್ಮ ತಂದೆ, ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ" (ಯೋಹಾ. 8:44) ಎಂದು ಹೇಳಿದನು.

ದೇವಮಕ್ಕಳೇ, ಇಚ್ಛೆಗಳನ್ನು ಕುರಿತು ನೀವು ಬಹಳವಾಗಿ ಗಮನವುಳ್ಳವರಾಗಿಯೂ, ಎಚ್ಚರವುಳ್ಳವರಾಗಿಯೂ ಇರಬೇಕು. ಶುದ್ಧ ಮನಸ್ಸಿನಿಂದ ನಿಮ್ಮ ಹಾಸಿಗೆಗೆ ಹೋಗಿರಿ. ಹೊತ್ತಾರೆ ಎದ್ದು ಪರಿಶುದ್ಧತೆಯಿಂದ ಕರ್ತನನ್ನು ಸ್ತುತಿಸಿರಿ. ನಿಮ್ಮ ಕುಟುಂಬಗಳಲ್ಲಿ ಗಂಡನ ಮೇಲೂ, ಹೆಂಡತಿಯ ಮೇಲೂ ಮಕ್ಕಳ ಮೇಲೂ ಇಚ್ಛೆಯ ಆತ್ಮ ಬರುವದಾದರೆ ಕರ್ತನನ್ನು ದೃಷ್ಟಿಸಿರಿ. ಆತನು ಪ್ರವೇಶಿಸುವಾಗ ಕಪ್ಪೆಗಳು ಸತ್ತುಹೋಗುವವು. ಅವರು ಜಯಶಾಲಿಗಳಾಗಿ ನಡೆಯುವರು.

*ನೆನಪಿಗೆ : ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವಸ್ವಭಾವವನ್ನು ತೆಗೆದು ಹಾಕಬೇಕು. ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟುಹೋಗುವಂಥದು (ಎಫೆ. 4:22).*



ಜುಲೈ 10

## ದಾವೀದನ ಹಾಸಿಗೆ!

ಬೆಳಿಗ್ಗೆ : ಯೋಬ. 41,42
ಸಂಜೆ : ಅ.ಕೃ. 16:17–40

ಅವನು ಒಂದು ದಿವಸ ಸಂಜೇ ಹೊತ್ತಿನಲ್ಲಿ ಮಂಚದಿಂದೆದ್ದು ಅರಮನೆಯ ಮಾಳಿಗೆಯ ಮೇಲೆ ತಿರುಗಾಡುತ್ತಿದ್ದಾಗ ಅಲ್ಲಿಂದ ಬಹುಸುಂದರಿಯಾದ ಒಬ್ಬ ಸ್ತ್ರೀ ಸ್ನಾನ ಮಾಡುವದನ್ನು ಕಂಡನು (2 ಸಮು. 11:2).

ಸೋಮಾರಿಯ ಮನಸ್ಸು ಸೈತಾನನ ಕಾರ್ಖಾನೆ, ಸೋಮಾರಿಗಳ ಬೆನ್ನ ಮೇಲೆ ಸೈತಾನನು ಸವಾರಿ ಮಾಡುವನು. ಆದ್ದರಿಂದಲೇ ಯಾವಾಗಲೂ ಚುರುಕಾಗಿರ್ರಿ. ಕರ್ತನಿಗೆ ಸೇವೆ ಮಾಡಿರಿ. "ಈ ದಿನಗಳು ಕೆಟ್ಟವುಗಳಾಗಿವೆ. ಆದದರಿಂದ ಕಾಲವನ್ನು... ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆ. 5:16) ಎಂದು ಅಪೊ. ಪೌಲನು ಆಲೋಚನೆ ಕೊಡುತ್ತಾನೆ.

ಒಮ್ಮೆ ಅಮ್ಮೋನಿಯರಿಗೂ, ಇಸ್ರಾಯೇಲ್ಯರಿಗೂ ಯುದ್ಧ ಪ್ರಾರಂಭವಾಯಿತು. ಅದು ರಾಜರು ಯುದ್ಧಕ್ಕೆ ಹೊರಡುವ ಸಮಯ (2 ಸಮು. 11:1). ದಾವೀದನೂ ರಾಜನೇ, ಅವನ ನೇತೃತ್ವದಲ್ಲಿ ಆ ಯುದ್ಧ ನಡೆಸಬೇಕು. ಆದರೆ ದಾವೀದನು ತನ್ನ ಜವಾಬ್ದಾರಿಯನ್ನು ತನ್ನ ಸೇನಾಧಿಪತಿಯಾದ ಯೋವಾಬನಿಗೆ ವಹಿಸಿ ತಾನು ಯೆರೂಸಲೇಮಿನಲ್ಲಿ ಉಳಿದುಬಿಟ್ಟನು. ಸಾಯಂಕಾಲದವರೆಗೆ ಸೋಮಾರಿಯಾಗಿ ಮಲಗಿದ್ದನು. ನಂತರ ಮಾಳಿಗೆಯ ಮೇಲೆ ಅಡ್ಡಾಡುತ್ತಿದ್ದನು. ಆ ಸಮಯವನ್ನು ಸೈತಾನನು ಉಪಯೋಗಿಸಿಕೊಂಡನು. ದಾವೀದನು ಸ್ನಾನ ಮಾಡುತ್ತಿದ್ದ ಒಬ್ಬ ಸ್ತ್ರೀಯನ್ನು ನೋಡಿ ಇಚ್ಛೆಗೆ ಒಳಗಾದನು. ಅವಳೋ, ಒಬ್ಬ ಸೈನಿಕನ ಹೆಂಡತಿ. ಅವಳ ಗಂಡ ತನ್ನ ಪ್ರಾಣವನ್ನೇ ಒತ್ತೆ ಇಟ್ಟು ತನ್ನ ಜನರಿಗಾಗಿ ಹೋರಾಡುತ್ತಿದ್ದನು. ಸತ್ಯವೇದ ಹೀಗೆ ಎಚ್ಚರಿಸುತ್ತದೆ– "ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶಗಳಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ" ಎಂದು (ಯಾಕೊ.1:14–15). ಅಲ್ಲಿಯವರೆಗೆ ದಾವೀದನ ಮನೆ ಪರಿಶುದ್ಧವಾದ ಮನೆಯಾಗಿತ್ತು. ದೇವಪ್ರಸನ್ನತೆಯಿಂದ ತುಂಬಿತ್ತು. ದಾವೀದನು ಯಾವಾಗಲೂ ಕರ್ತನನ್ನು ಹಾಡಿ ಸ್ತುತಿಸುತ್ತಿದ್ದನು. ಕರ್ತನ ವಾಗ್ದಾನವೇನು? ನಾನು ಅವರಲ್ಲಿ ವಾಸಿಸುತ್ತಾ ಸಂಚರಿಸುವೆನು. ನಾನು ಅವರಿಗೆ ದೇವರಾಗಿರುವೆನು. ಅವರು ನನಗೆ ಪ್ರಜೆಯಾಗಿರುವರು" ಎಂಬುದೇ (2 ಕೊರಿಂ. 6:16). ದಾವೀದನ ಈ ಕಾರ್ಯದಿಂದ ಉಂಟಾದ ಫಲವೆಂದರೆ ಅಬ್ಶಾಲೋಮನು ದಾವೀದನ ಉಪಪತ್ನಿಯರನ್ನು ಕೆಡಿಸಿದನು, ಮಾತ್ರವಲ್ಲದೆ ಅವನು ಕೊಲೆಯಾದನು.

ದೇವಮಕ್ಕಳೇ, ಯೋಸೇಫನಂತೆ ಇಚ್ಛೆಯ ಆತ್ಮಗಳನ್ನು ದೂರವಿರಿಸಿ. ನಿಮ್ಮ ಆತ್ಮಗಳನ್ನು ಕಾಯ್ದುಕೊಳ್ಳಿರಿ.

*ನೆನಪಿಗೆ : ಆತ್ಮವನ್ನು ಸ್ವಾಧೀನ ಮಾಡಿಕೊಳ್ಳದವನು ಗೋಡೆ ಬಿದ್ದ ಹಾಳೂರಿಗೆ ಸಮಾನ (ಜ್ಞಾನೋ.25:28). ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಠ (ಜ್ಞಾನೋ.16:32)*

ಜುಲೈ 11

## ವಿಶ್ರಾಂತಿ ನೀಡುವ ಹಾಸಿಗೆ!

ಬೆಳಿಗ್ಗೆ : ಕೀರ್ತನೆ 1,2,3
ಸಂಜೆ : ಅ.ಕೃ. 17:1–15

ಹಾಸಿಗೆಯ ಮೇಲೆ ಇರುವಾಗ ಹೃದಯದಲ್ಲೇ ಆಲೋಚಿಸಿಕೊಳ್ಳಿರಿ (ಕೀರ್ತ. 4:4).

ಹಗಲೆಲ್ಲಾ ಕೆಲಸ ಮಾಡುವ ಮನುಷ್ಯನಿಗೆ ಒಳ್ಳೆಯ ವಿಶ್ರಾಂತಿ ಅಗತ್ಯವಾದದ್ದೆಂದು ಕರ್ತನು ರಾತ್ರಿಯನ್ನು ಸೃಷ್ಟಿಮಾಡಿದನು. ನಾವು ರಾತ್ರಿಯಲ್ಲಿ ಮಲಗುವಾಗ ಕೊಠಡಿಯಲ್ಲಿನ ಪ್ರಕಾಶಮಾನವಾದ ದೀಪವನ್ನು ಆರಿಸಿ ಮಂದಬೆಳಕನ್ನು ನೀಡುವ ಚಿಕ್ಕ ದೀಪಗಳನ್ನು ಹಚ್ಚುತ್ತೇವೆ. ಹಾಗೆಯೇ ಕರ್ತನು ಇರುಳಿನಲ್ಲಿ ಮಂದ ಬೆಳಕು ನೀಡುವ ಚಂದ್ರ, ನಕ್ಷತ್ರಗಳನ್ನು ಸೃಷ್ಟಿಸಿರುವನು. ಕರ್ತನು ತನ್ನ ಮಕ್ಕಳು ನಿದ್ರೆ ಮಾಡಿ ವಿಶ್ರಾಂತಿ ಪಡೆಯಬೇಕೆಂಬುದರಲ್ಲಿ ಎಷ್ಟೊಂದು ಅಕ್ಕರೆಯುಳ್ಳವನಾಗಿದ್ದಾನೆ.

ಮನುಷ್ಯನಿಗೆ ಕೆಲಸ ಎಷ್ಟು ಅಗತ್ಯವೋ, ವಿಶ್ರಾಂತಿಯೂ ಅಷ್ಟೇ ಅಗತ್ಯವಾದದ್ದು. ಇರುಳಿನಲ್ಲಿ ಒಳ್ಳೆಯ ವಿಶ್ರಾಂತಿ ಸಿಗಬೇಕಾದರೆ ಅವನ ಆಂತರ್ಯವೂ ನಿರ್ಮಲವಾಗಿರಬೇಕು. ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳಿರಬೇಕು. ಸತ್ಯವೇದ ಹೇಳುತ್ತದೆ "ಕರ್ತನು ತನ್ನ ಪ್ರಿಯರಿಗೆ ನಿದ್ರೆಯಲ್ಲಿಯೂ ಆಹಾರವನ್ನು ಕೊಡುತ್ತಾನೆ" (ಕೀರ್ತ. 127:2). "ಯೆಹೋವನು ನನ್ನನ್ನು ಕಾಪಾಡುವವನಾದ್ದರಿಂದ ನಾನು ಮಲಗಿಕೊಂಡು ಸುಖವಾಗಿ ನಿದ್ರೆ ಮಾಡಿ ಎಚ್ಚರಗೊಂಡೆನು" (ಕೀರ್ತ. 3:5). "ನಾನು ನಿರ್ಭಯವಾಗಿರುವದರಿಂದ ಮಲಗಿಕೊಂಡು ಕೂಡಲೆ ನಿದ್ರೆ ಮಾಡುವೆನು; ಯಾಕಂದರೆ ಯೆಹೋವನೇ ನಾನು ಯಾವ ಅಪಾಯವೂ ಇಲ್ಲದೆ ಸುರಕ್ಷಿತನಾಗಿರುವಂತೆ ನೀನು ಕಾಪಾಡುತ್ತೀ" (ಕೀರ್ತ. 4:8) ಎಂದು. ಹೌದು. ಯಾರ ಹೃದಯದಲ್ಲಿ ಕಪಟವಿರುವದಿಲ್ಲವೋ, ಯಾರು ಕರ್ತನನ್ನೇ ಆಶ್ರಯಿಸುವರೋ ಅವರಿಗೆ ಕರ್ತನು ಒಳ್ಳೆಯ ವಿಶ್ರಾಂತಿಯನ್ನು ನೀಡುವನು. ಒಬ್ಬ ಭಕ್ತನನ್ನು ಒಬ್ಬ ದುಷ್ಟನು ಬಹಳವಾಗಿ ತೊಂದರೆ ಪಡಿಸುತ್ತಿದ್ದನು. ತನ್ನ ಪತ್ರಿಕೆಯಲ್ಲಿ ಇಲ್ಲಸಲ್ಲದ ಅಪವಾದವನ್ನು ಹೊರಿಸಿ ಬರೆಯುತ್ತಿದ್ದನು. ಇದನ್ನು ಆ ದೇವ ಮನುಷ್ಯನಿಂದ ಸಹಿಸಲಾಗುತ್ತಿರಲಿಲ್ಲ. ಹಾಸಿಗೆಯಲ್ಲಿ ಮಲಗಿ ಈ ಕುರಿತು ಚಿಂತಿಸುತ್ತಾ ದುಃಖಿಸುತ್ತಿದ್ದನು. ಇದರಿಂದಾಗಿ ಅವನು ಹಾಸಿಗೆ ಹಿಡಿದನು. ಆಗ ಕರ್ತನು ಅವನೊಂದಿಗೆ ಮಾತನಾಡಿ ಈ ಒಬ್ಬ ಮನುಷ್ಯನನ್ನು ಕುರಿತು ಯಾಕೆ ವ್ಯಥೆ ಪಡುತ್ತೀ? ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತೀ? ಅವನನ್ನು ನನ್ನ ಬಳಿ ಒಪ್ಪಿಸಿಕೊಡು. ನಿನ್ನ ಸೇವೆಯನ್ನು ಮುಂದುವರಿಸು ನಾನು ನಿನ್ನ ಪಕ್ಷವಾಗಿ ನಿಂತಿದ್ದೇನಲ್ಲಾ? ಎಂದು ಹೇಳಿದನು.

ದೇವಮಕ್ಕಳೇ, ರಾತ್ರಿ ಹಾಸಿಗೆಗೆ ತೆರಳುವ ಮುನ್ನ ನಿಮ್ಮ ಚಿಂತೆಯನ್ನೆಲ್ಲಾ ಕರ್ತನಿಗೆ ಒಪ್ಪಿಸಿಕೊಡಿ. ಆತನು ನಿಮಗಾಗಿ ಚಿಂತಿಸುವನು. ಗಂಡ ಹೆಂಡತಿ ನಡುವೆ ಅಸಮಾಧಾನವಿದ್ದರೆ ಮಲಗುವ ಮೊದಲೇ ಸಂಧಾನ ಪಡಿಸಿಕೊಳ್ಳಿರಿ. ಒಳ್ಳೆಯ ಕಾರ್ಯಗಳನ್ನೇ ಚಿಂತಿಸುತ್ತಾ ಕರ್ತನನ್ನು ಸ್ತುತಿಸುತ್ತಾ ಹಾಸಿಗೆಗೆ ಹೋಗಿರಿ.

*ನೆನಪಿಗೆ : ನೀನು ಮಲಗುವಾಗ ಹೆದರಿಕೆ ಇರುವದಿಲ್ಲ. ಮಲಗಿದ ಮೇಲೆ ಸುಖವಾಗಿ ನಿದ್ರೆ ಮಾಡುವಿ (ಜ್ಞಾನೋ. 3:24).*



ಜುಲೈ 12

## ಕಣ್ಣೀರಿನ ಹಾಸಿಗೆ!

ಬೆಳಿಗ್ಗೆ : ಕೀರ್ತನೆ 4,5,6
ಸಂಜೆ : ಅ.ಕೃ. 17:16–34

ಪ್ರತಿರಾತ್ರಿಯೂ ನನ್ನ ಕಣ್ಣೀರಿನಿಂದ ಮಂಚವು ತೇಲಾಡುತ್ತದೆ; ಹಾಸಿಗೆಯು ಕಣ್ಣೀರಿನಿಂದ ನೆನೆದು ಹೋಗುತ್ತದೆ (ಕೀರ್ತ. 6:6).

ದಾವೀದನು ಸೌಲನಿಂದ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಅಂಥಹ ಒಂದು ಸಂದರ್ಭದಲ್ಲಿ ಅವನು ಪ್ರತಿ ರಾತ್ರಿಯೂ ನನ್ನ ಕಣ್ಣೀರಿನಿಂದ ಮಂಚವು ತೇಲಾಡುತ್ತದೆ. ಹಾಸಿಗೆಯು ಕಣ್ಣೀರಿನಿಂದ ನೆನೆದು ಹೋಗುತ್ತದೆ (ಕೀರ್ತ. 6:6) ಎಂದು ಪ್ರಲಾಪಿಸುತ್ತಾನೆ. ಆದರೆ ಅದೇ ಕೀರ್ತನೆಯ 8 ಮತ್ತು 9ನೇ ವಚನಗಳಲ್ಲಿ ಕರ್ತನು ನನ್ನ ವಿಜ್ಞಾಪನೆಯನ್ನು ಕೇಳಿದನಲ್ಲಾ, ನನ್ನ ಪ್ರಾರ್ಥನೆಯನ್ನು ಅಂಗೀಕರಿಸುವನು ಎಂದು ಸಾಕ್ಷಿಕೊಡುತ್ತಾನೆ. ಹೌದು, ಕರ್ತನು ತನ್ನ ಭಕ್ತರ ಕಣ್ಣೀರಿನ ಪ್ರಾರ್ಥನೆಯನ್ನು ಎಂದೂ ತಿರಸ್ಕರಿಸುವದಿಲ್ಲ.

ಹನ್ನಳು, ಮಗುವಿಗಾಗಿ ಕಣ್ಣೀರಿಟ್ಟು ಕರ್ತನ ಸಮ್ಮುಖದಲ್ಲಿ ಅತ್ತಾಗ, ಅವಳ ಕಣ್ಣೀರು ಕರ್ತನಿಗೆ ಮುಟ್ಟಿತು. ಸವತಿಯ ಅವಹೇಳನದ ಮಾತುಗಳಿಂದ ದುಃಖಿತಳಾದ ಹನ್ನಳ ಆರ್ತನಾದ ಕರ್ತನ ಸನ್ನಿಧಿಗೆ ಮುಟ್ಟಿತು. ಕರ್ತನು ಅವಳ ಕಣ್ಣೀರಿಗೆ ಪ್ರತಿಯಾಗಿ ಪ್ರವಾದಿಯಾದ ಸಮುವೇಲನು ಅವಳಲ್ಲಿ ಜನಿಸುವಂತೆ ಆಶೀರ್ವದಿಸಿದನು. ಸಮುವೇಲನಲ್ಲದೆ ಇನ್ನೂ ಐದು ಮಂದಿ ಮಕ್ಕಳನ್ನು ಅವಳಿಗೆ ದಯಪಾಲಿಸಿದನು. ಕಣ್ಣೀರಿನೊಂದಿಗೆ ಪ್ರಾರ್ಥಿಸುವದು ಒಳ್ಳೆಯದು. ಕಣ್ಣೀರಿನೊಂದಿಗೆ ಪಾಪದರಿಕೆ ಮಾಡುವದರಿಂದ ಆತ್ಮದಲ್ಲಿ ಬಿಡುಗಡೆ ಉಂಟಾಗುವದು. ನಿಮ್ಮ ಪಾಪಗಳನ್ನು ಚಿಂತಾಭಾರಗಳನ್ನು ಕರ್ತನ ಪಾದದಲ್ಲಿ ಇರಿಸುವಾಗ ಆದರಣೆಯೂ, ಸಂತೈಸುವಿಕೆಯೂ ಉಂಟಾಗುವದು. ಸತ್ಯವೇದ ಹೇಳುತ್ತದೆ "ಆತನ ಕೋಪವು ಕ್ಷಣಮಾತ್ರವೇ; ಆತನ ಅನುಗ್ರಹವೋ ಜೀವಮಾನವೆಲ್ಲಾ ಇರುವದು; ಸಂಜೆಗೆ ದುಃಖವೆಂಬುದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು" (ಕೀರ್ತ. 30:5). ದುಃಖಿಸುತ್ತಾ ಬೀಜವನ್ನು ತೆಗೆದುಕೊಂಡು ಹೋಗುವವನು ಹರ್ಷಿಸುತ್ತಾ ಸಿವುಡುಗಳನ್ನು ಹೊತ್ತುಕೊಂಡು ಬರುವನು (ಕೀರ್ತ. 126:6) ಎಂದು.

ದೇವಮಕ್ಕಳೇ, ಸಾಧಾರಣವಾಗಿ ನೀವು ನಾಲ್ಕುಗಂಟೆಗಳ ಕಾಲ ಪ್ರಾರ್ಥಿಸುವದಕ್ಕಿಂತಲೂ ಕಣ್ಣೀರಿನಿಂದ ಜಜ್ಜಿದ ಹೃದಯದಿಂದ ಅರ್ಧಗಂಟೆ ಪ್ರಾರ್ಥಿಸುವದು ಬಲವುಳ್ಳದ್ದಾಗಿರುವದು. ನಿಮ್ಮ ಆಂತರ್ಯವನ್ನು ಹೊಯ್ದು ಪ್ರಾರ್ಥಿಸುವಾಗ ಉತ್ತರವನ್ನು ಪಡೆಯುವಿರಿ.

*ನೆನಪಿಗೆ : ನೀನು ನನ್ನ ಗೋಳಾಟವನ್ನು ತಪ್ಪಿಸಿ ಸಂತೋಷದಿಂದ ಕುಣಿದಾಡುವಂತೆ ಮಾಡಿದಿ. ನಾನು ಕಟ್ಟಿಕೊಂಡಿದ್ದ ಗೋಣಿ ತಟ್ಟನ್ನು ತೆಗೆದುಬಿಟ್ಟು ಹರ್ಷವಸ್ತ್ರವನ್ನು ನನಗೆ ಧಾರಣೆ ಮಾಡಿಸಿದಿ (ಕೀರ್ತ. 30:11).*

ಜುಲೈ
13

## ವ್ಯಾಧಿಯ ಹಾಸಿಗೆ!

ಬೆಳಿಗ್ಗೆ : ಕೀರ್ತನೆ 7,8,9
ಸಂಜೆ : ಅ.ಕೃ. 18

ಅವನು ಅಸ್ವಸ್ಥನಾಗಿ ಬಿದ್ದುಕೊಂಡಿರುವಾಗ ಯೆಹೋವನು ಅವನನ್ನು ಉದ್ಧರಿಸುವನು; ಅವನ ರೋಗವನ್ನೆಲ್ಲಾ ಪರಿಹರಿಸಿ ಆರೋಗ್ಯವನ್ನುಂಟುಮಾಡುವನು (ಕೀರ್ತ. 41:3).

ವ್ಯಾಧಿಗಳು, ಬಲಹೀನತೆಗಳು ಎಲ್ಲರಿಗೂ ಬರುವದು. ನೀತಿವಂತನಿಗೂ ಬರುವದು ದುರ್ಮಾರ್ಗಿಗೂ ಬರುವದು. ಚಿಕ್ಕವರಿಗೂ ಬರುವದು ದೊಡ್ಡವರಿಗೂ ಬರುವದು. ಜ್ಞಾನಿಯಾದ ಸೊಲೊಮೋನನು ಈ ಕುರಿತು ಹೀಗೆ ಬರೆಯುತ್ತಾನೆ– "ಎಲ್ಲರಿಗೂ ಎಲ್ಲವೂ ಒಂದೇ ಬಗೆಯಾಗಿ ಸಂಭವಿಸುವದು; ಶಿಷ್ಟನಿಗೂ ದುಷ್ಟನಿಗೂ, ಒಳ್ಳೆಯವನಿಗೂ, ಶುದ್ಧನಿಗೂ ಅಶುದ್ಧನಿಗೂ ಯಜ್ಞ ಮಾಡುವವನಿಗೂ ಮಾಡದವನಿಗೂ ಒಂದೇ ಗತಿ. ನಿರ್ದೋಷಿಯಂತೆ ದೋಷಿಯಿರುವನು, ಆಣೆ ಇಡುವವನ ಹಾಗೆ ಆಣೆಗೆ ಅಂಜುವವನು ಇರುವನು. ಎಲ್ಲರಿಗೂ ಒಂದೇ ಗತಿಯೆಂಬ ಸಂಕಟವು ಲೋಕವ್ಯವಹಾರದಲ್ಲೆಲ್ಲಾ ಸೇರಿಕೊಂಡಿದೆ" ಎಂದು (ಪ್ರಸಂಗಿ 9:2,3).

ಆದರೆ ನೀತಿವಂತರಿಗಿರುವ ಆಶೀರ್ವಾದ ಏನಾಗಿದೆ? ಹಾಸಿಗೆಯಲ್ಲಿ ವ್ಯಾಧಿಯಿಂದ ಮಲಗಿರುವ ದೇವಮಕ್ಕಳನ್ನು ಕರ್ತನು ಮುಟ್ಟುವನು. ಆ ಹಾಸಿಗೆಯಲ್ಲಿ ಅವರು ತಮ್ಮನ್ನು ಪರೀಕ್ಷಿಸಿ ನೋಡಿ, ಕ್ರಮಪಡಿಸಿಕೊಳ್ಳಬೇಕಾದವುಗಳನ್ನು ಕ್ರಮಪಡಿಸಿಕೊಳ್ಳುವಾಗ, ಕರ್ತನು ನಿಶ್ಚಯವಾಗಿ ಗುಣಪಡಿಸುವನು. ದಾವೀದನೂ ಇದೇ ರೀತಿ ತನ್ನನ್ನು ಪರೀಕ್ಷಿಸಿಕೊಂಡು ನಾನಂತೂ ಯೆಹೋವನೇ ನಿನ್ನ ಆಜ್ಞೆಯನ್ನು ಮೀರಿ ಪಾಪ ಮಾಡಿದ್ದೇನೆ. ನನ್ನನ್ನು ಕರುಣಿಸಿ ಸ್ವಸ್ಥ ಮಾಡು ಅಂದೆನು (ಕೀರ್ತ. 41:4) ಎಂದು ಹೇಳುತ್ತಾನೆ. ಕೆಲವು ವೇಳೆಗಳಲ್ಲಿ ವ್ಯಾಧಿಯೂ ಒಂದು ಪ್ರೀತಿಯ ಶಿಕ್ಷೆಯಾಗಿದೆ. ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಸಹಿಸಿಕೊಳ್ಳಿರಿ.... ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ? (ಇಬ್ರಿ. 12:7,8) ಎಂದು ಅಪೊ.ಪೌಲನು ಹೇಳುತ್ತಾನೆ. ನಿಮಗೆ ರೋಗಿಗಳ ಮೇಲೆ ಕನಿಕರ ಕರುಣೆ, ಪ್ರಾರ್ಥಿಸುವ ಭಾರ ಉಂಟು ಮಾಡಲು ಕರ್ತನು ಅಂಥಹ ಮಾರ್ಗದಲ್ಲಿ ನಿಮ್ಮನ್ನು ನಡೆಸುವದುಂಟು. ತಾವು ವ್ಯಾಧಿಯ ಹಾಸಿಗೆಯಲ್ಲಿ ಪಟ್ಟ ವೇದನೆಗಳು ಇತರರಿಗೆ ಬರಬಾರದು ಎಂಬುದಕ್ಕಾಗಿ ಪ್ರಾರ್ಥಿಸಿ ಗುಣಪಡಿಸುವ ಬಲವನ್ನೂ ವರವನ್ನೂ ಪಡೆಯುವರು.

ದೇವಮಕ್ಕಳೇ, ಇಂದು ನೀವು ವ್ಯಾಧಿಗೆ ಒಳಗಾಗಿರುವಿರಾ? ಚಿಂತೆ ಮಾಡಬೇಡಿರಿ. ಕ್ರಿಸ್ತನು ತನ್ನ ಗಾಯವಾದ ಹಸ್ತವನ್ನು ನಿಮ್ಮ ಮೇಲೆ ಚಾಚಿ ಈಗಲೇ ಸ್ವಸ್ಥಪಡಿಸುವನು (ಯೆಶಾ.53:5). ಆತನು ಶಿಲುಬೆಯಲ್ಲಿ ನಿಮ್ಮ ಬೇನೆಗಳನ್ನೆಲ್ಲಾ ಹೊತ್ತು ತೀರಿಸಿರುವನು ಎಂದು ನಂಬುವಿರಾದರೆ ಆತನು ಹೊತ್ತದ್ದನ್ನು ನೀವು ಹೊರಬೇಕಾಗಿಲ್ಲ.

*ನೆನಪಿಗೆ : ನಾನು ಐಗುಪ್ತ್ಯರಿಗೆ ಉಂಟುಮಾಡಿದ ವ್ಯಾಧಿಗಳಲ್ಲಿ ಒಂದನ್ನೂ ನಿಮಗೆ ಬರಗೊಡಿಸುವದಿಲ್ಲ. ಯೆಹೋವನೆಂಬ ನಾನೇ ನಿಮಗೆ ಆರೋಗ್ಯದಾಯಕನು (ವಿಮೋ. 15:26).*



ಜುಲೈ
14

## ಧ್ಯಾನಿಸುವ ಹಾಸಿಗೆ!

ಬೆಳಿಗ್ಗೆ : ಕೀರ್ತನೆ 10,11,12
ಸಂಜೆ : ಅ.ಕೃ. 19:1–22

ನಾನು ಹಾಸಿಗೆಯ ಮೇಲಿದ್ದುಕೊಂಡು, ನಿನ್ನನ್ನು ಸ್ಮರಿಸುವಾಗ ರಾತ್ರಿಯ ಜಾವಗಳಲ್ಲಿ ನಿನ್ನನ್ನು ಧ್ಯಾನಿಸುತ್ತಿರುವೆನು (ಕೀರ್ತ. 63:6).

ನೀವು ನಿಮ್ಮ ಜೀವಿತದ ಶೇ.30ರಷ್ಟು ವೇಳೆ ಹಾಸಿಗೆಯಲ್ಲಿ ಕಳೆಯುತ್ತೀರಿ. ವ್ಯರ್ಥಚಿಂತನೆಗಳನ್ನು ಹಾಸಿಗೆಯ ಮೇಲಿರುವಾಗ ಮಾಡದಿರಿ. ಕೆಲವರು ಹಾಸಿಗೆಯಲ್ಲಿರುವಾಗ ಬೇಡದ ಚಿಂತೆಗಳನ್ನೆಲ್ಲಾ ಮಾಡಿ ನಿದ್ರೆಯನ್ನು ಹಾಳು ಮಾಡಿಕೊಳ್ಳುವರು. ಇನ್ನು ಕೆಲವರು ಕಳವಳದಿಂದ ಭಯದಿಂದಿರುತ್ತಾರೆ ಮತ್ತೆ ಕೆಲವರು ಹಗೆ ಸಾಧಿಸುವ ಕೆಟ್ಟ ಯೋಚನೆಗಳನ್ನೇ ಮಾಡುವರು.

ಅರಸನಾದ ದಾವೀದನು, ಮಲಗುವ ಸಮಯವನ್ನು ಕರ್ತನನ್ನು ಧ್ಯಾನಿಸುವದಕ್ಕಾಗಿ ಉಪಯೋಗಿಸಿಕೊಂಡನು. ಕರ್ತನು ತನ್ನ ಭಕ್ತರಿಗೆ ಮಾಡಿದ ಅದ್ಭುತಗಳನ್ನು ನೀಡಿದ ಆಶೀರ್ವಾದಗಳನ್ನು ಧ್ಯಾನಿಸಿದನು. "ನಿನ್ನ ನೇಮಗಳ ದಾರಿಯನ್ನು ತಿಳಿಯಪಡಿಸು, ಆಗ ನಿನ್ನ ಅದ್ಭುತ ಕೃತ್ಯಗಳನ್ನು ಧ್ಯಾನಿಸವೆನು" (ಕೀರ್ತ. 119:27). "ನಿನ್ನ ಆಜ್ಞೆಗಳಿಗಾಗಿಯೇ ಕೈಯೊಡ್ಡುತ್ತೇನೆ. ಅವು ನನಗೆ ಇಷ್ಟವಾಗಿವೆ; ನಿನ್ನ ನಿಬಂಧನೆಗಳನ್ನು ಧ್ಯಾನಿಸುವೆನು" (ಕೀರ್ತ 119:48). "ನಾನಾದರೋ ನಿನ್ನ ನೇಮಗಳನ್ನು ಧ್ಯಾನಿಸುತ್ತಿರುವೆನು" (ಕೀರ್ತ. 119:78). ರಾತ್ರಿಯಲ್ಲಿ ನಿಮಗೆ ನಿದ್ರೆ ಬರದೇ ಹೋದರೆ, ಎದ್ದು ಸ್ತೋತ್ರ ಮಾಡಿ, ಸತ್ಯವೇದವನ್ನು ಓದಿ ಧ್ಯಾನಿಸಲಾರಂಭಿಸಿರಿ. ಧ್ಯಾನಿಸುವದರಿಂದ ಅನೇಕಾನೇಕ ಆಶೀರ್ವಾದಗಳು ನಿಮಗೆ ದೊರೆಯುವದು. ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು. ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ. ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು (ಕೀರ್ತ. 1:2,3) ಎಂದು ಸತ್ಯವೇದ ಹೇಳುತ್ತದೆ. ಕರ್ತನನ್ನು ಧ್ಯಾನಿಸುವ ಧ್ಯಾನ ನಿಮಗೆ ಜ್ಞಾನವನ್ನು ಬುದ್ಧಿಯನ್ನು ವಿವೇಕವನ್ನು ನೀಡುವದು. ನಿನ್ನ ಕಟ್ಟಳೆಗಳು ನನ್ನ ಧ್ಯಾನವಾಗಿರುವದರಿಂದ ನನ್ನ ಉಪಾಧ್ಯಾಯರಿಗಿಂತ ಜ್ಞಾನಿಯಾಗಿದ್ದೇನೆ (ಕೀರ್ತ. 119:99) ಎಂದು ಕೀರ್ತನೆಗಾರನು ಹೇಳುತ್ತಾನೆ.

ದೇವಮಕ್ಕಳೇ, ನಿಮ್ಮ ಹಾಸಿಗೆಯನ್ನು ಧ್ಯಾನಪೀಠವನ್ನಾಗಿ ಮಾರ್ಪಡಿಸಿಕೊಳ್ಳಿರಿ. ಕರ್ತನ ಶಿಲುಬೆಯನ್ನೂ, ಆತನ ಪಂಚ ಗಾಯಗಳನ್ನೂ, ಬಾಸುಂಡೆಗಳನ್ನೂ ಆತನ ಪ್ರೀತಿಯನ್ನೂ ಧ್ಯಾನಿಸಿರಿ. ಕಲ್ವಾರಿ ಧ್ಯಾನಕ್ಕೆ ಯೋಗ್ಯವುಳ್ಳ ಜೀವಿತವನ್ನು ಜೀವಿಸಲು ನಿಮ್ಮನ್ನು ಅರ್ಪಿಸಿರಿ. ಆಗ ಇರುಳು ನಿಮಗೆ ಆಶೀರ್ವಾದಕರವಾಗಿ ಇರುವದು.

*ನೆನಪಿಗೆ : ಆತನನ್ನು ಕೀರ್ತಿಸಿರಿ, ಭಜಿಸಿರಿ; ಆತನ ಅದ್ಭುತಗಳನ್ನೆಲ್ಲಾ ಧ್ಯಾನಿಸಿರಿ (1 ಪೂ.ವೃ.16:9).*

ಜುಲೈ 15

## ಮುಂಜಾನೆಯಲ್ಲಿ!

ಬೆಳಿಗ್ಗೆ : ಕೀರ್ತನೆ 13,14,15
ಸಂಜೆ : ಅ.ಕೃ. 19:23–41

ಸಂಜೆಗೆ ದುಃಖವೆಂಬದು ಬಂದು ನಮ್ಮ ಬಳಿಯಲ್ಲಿ ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿಯು ಕೇಳಿಸುವದು (ಕೀರ್ತ. 30:5).

ಕರ್ತನು ಸಂಜೆಯನ್ನೂ ಉಂಟು ಮಾಡಿದನು ಹೊತ್ತಾರೆಯನ್ನೂ ಉಂಟುಮಾಡಿದನು. ರಾತ್ರಿಯೂ, ಹಗಲೂ ಕರ್ತನ ಸೃಷ್ಟಿಯೇ ಆಗಿದೆ. ಕರ್ತನ ಲೆಕ್ಕದ ಪ್ರಕಾರ ಒಂದು ದಿನದ ಪ್ರಾರಂಭ ಸಂಜೆಯ ವೇಳೆ. ಆದಿಕಾಂಡ 1:5ರಲ್ಲಿ ಹೀಗೆ ಬರೆಯಲ್ಪಟ್ಟಿದೆ– "ಹೀಗೆ ಸಾಯಂಕಾಲವೂ ಪ್ರಾತಃಕಾಲವೂ ಆಗಿ ಮೊದಲನೆಯ ದಿನವಾಯಿತು" ಎಂದು. ಆದ್ದರಿಂದಲೇ ಸಂಜೆ ದುಃಖವೆಂಬದು ಬಂದು ಇಳಿದುಕೊಂಡರೂ ಮುಂಜಾನೆ ಹರ್ಷಧ್ವನಿ ಕೇಳಿಸುವದು ಎಂದು ಕೀರ್ತ. 30:5ರಲ್ಲಿ ಹೇಳಲ್ಪಟ್ಟಿದೆ.

ಸಾಯಂಕಾಲಕ್ಕೂ, ಮುಂಜಾನೆಗೂ ನಡುವೆ ರಾತ್ರಿಯು ದಾಟಿಹೋಗಬೇಕಾಗಿದೆ. ಕೆಲವರು ರಾತ್ರಿಗಳಲ್ಲಿ ಹಾಸಿಗೆಯ ಮೇಲೆ ದುಃಖಿಸುತ್ತಾ ಮಂಚವನ್ನು ಕಣ್ಣೀರಿನಿಂದ ತೋಯಿಸುವರು. ರಾತ್ರಿಯಲ್ಲಿನ ಹಾಸಿಗೆ ಭಯಂಕರವಾದ ಚಿಂತೆಯಿಂದ ಕೂಡಿದ್ದಾಗಿ ಇರಬಹುದು. ಈ ರಾತ್ರಿ ವೇಳೆಯನ್ನು ಅಂಧಕಾರದ ಲೋಕಾಧಿಪತಿಯಾದ ಸೈತಾನನು ಉಪಯೋಗಿಸಲು ಯೋಚಿಸುವನು. "ಒಬ್ಬನು ರಾತ್ರಿಯಲ್ಲಿ ನಡೆದರೆ ಎಡವುವನು (ಯೋಹಾ. 11:10) ಎಂದು ಯೇಸು ಕ್ರಿಸ್ತನು ಹೇಳಿರುವನು. ಹೊಲದ ಯಜಮಾನನು ತನ್ನ ಹೊಲದಲ್ಲಿ ಗೋದಿಯ ಕಾಳನ್ನು ಬಿತ್ತಿದರೆ, ರಾತ್ರಿಯಲ್ಲಿ ವೈರಿಯು ಬಂದು ಹಣಜಿಯನ್ನು ಬಿತ್ತಿಹೋಗುವನು (ಮತ್ತಾ. 13:25). ದುಷ್ಟಕಾರ್ಯಗಳನ್ನು ಮಾಡಲು, ದುಷ್ಟ ಆಲೋಚನೆಗಳನ್ನು ಮಾಡಲು ಇರುಳನ್ನು ವೈರಿಯಾದ ಸೈತಾನನು ಉಪಯೋಗಿಸುವನು. ರಾತ್ರಿ ವೇಳೆಯಲ್ಲಿ ಲಾಬಾನನು ಮೋಸಗಾರನಾದ ಯಾಕೋಬನನ್ನು ಮೋಸಗೊಳಿಸಿದನು. ರಾಹೇಲಳ ಬದಲು ಅವಳ ಸಹೋದರಿ ಲೇಯಳನ್ನು ಅವನಿಗೆ ಕೊಟ್ಟನು. ಇರುಳು ವೇಳೆ ಅನೇಕರು ಮೋಸ ಮಾಡುವ ವೇಳೆ. ಪ್ರತಿಯೊಬ್ಬ ಮನುಷ್ಯನಿಗೂ ಜೀವಿತದಲ್ಲಿ ಹಗಲೂ ಬರುವದು ಇರುಳೂ ಬರುವದು. ಹಗಲಿರುವಾಗಲೇ ನಾವು ನಮ್ಮನ್ನು ಕಳುಹಿಸಿದಾತನ ಕಾರ್ಯ ನಡೆಸಬೇಕು. ರಾತ್ರಿ ಬರುತ್ತದೆ ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು (ಯೋಹಾನ 9:4) ಎಂದು ಯೇಸು ಎಚ್ಚರಿಸುತ್ತಾನೆ.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಎಷ್ಟೋ ರಾತ್ರಿ ಹಗಲುಗಳು ಬಂದಿರಬಹುದು. ಆದರೂ ಆಶೀರ್ವಾದಕರವಾಗಿರುವ ಮುಂಜಾನೆಗಳನ್ನು ಕರ್ತನು ನಿಮಗಾಗಿ ಇಟ್ಟಿರುವನು. ಆತನು ನಿಮಗಾಗಿ ಹೋರಾಡಿ ಯುದ್ಧ ಮಾಡಿ ಮುಂಜಾವಿನಲ್ಲಿ ಹರ್ಷ ಉಂಟಾಗುವಂತೆ ಮಾರ್ಪಡಿಸುವನು. ಕಷ್ಟ, ದುಃಖಗಳಲ್ಲೂ ಕರ್ತನನ್ನು ಹಾಡಿ ಸ್ತುತಿಸಿ ಹಾಸಿಗೆಗೆ ಹೋಗುವಿರಾದರೆ ಹೊಸ ಬಲದಿಂದ ಹೊಸ ಚೈತನ್ಯದಿಂದ ಮುಂಜಾನೆಯಲ್ಲಿ ದೇವಪ್ರಸನ್ನತೆಯನ್ನು ಅನುಭವಿಸುವಿರಿ.

*ನೆನಪಿಗೆ : "ನೀನು ಅವರಿಗೆ ಸಾಯಂಕಾಲದಲ್ಲಿ ಮಾಂಸವನ್ನೂ, ಹೊತ್ತಾರೆಯಲ್ಲಿ ಬೇಕಾದಷ್ಟು ರೊಟ್ಟಿಯನ್ನೂ ತಿನ್ನುವಿರಿ. ಇದರಿಂದ ನಾನು ನಿಮ್ಮ ದೇವರಾದ ಯೆಹೋವನೆಂಬದು ನಿಮಗೆ ಗೊತ್ತಾಗುವದೆಂದು ಹೇಳಬೇಕು" ಅಂದನು (ವಿಮೋ. 16:12).*



ಜುಲೈ 16

## ಕನಿಕರವುಳ್ಳವನು!

ಬೆಳಿಗ್ಗೆ : ಕೀರ್ತನೆ 16,17
ಸಂಜೆ : ಅ.ಕೃ. 20:1–12

"ಯೆಹೋವನು ಕನಿಕರವೂ ದಯೆಯೂ ದೀರ್ಘಶಾಂತಿಯೂ ಪೂರ್ಣಪ್ರೀತಿಯೂ ಉಳ್ಳವನು. ಆತನು ಯಾವಾಗಲೂ ತಪ್ಪುಹುಡುಕುವವನಲ್ಲ, ನಿತ್ಯವೂ ಕೋಪಿಸುವವನಲ್ಲ" (ಕೀರ್ತ.103:8,9).

ಕರ್ತನ ಗುಣಾತಿಶಯಗಳು ಆತನ ಪ್ರೀತಿಯ ಸ್ವಭಾವವು ನಮ್ಮ ಆಂತರ್ಯವನ್ನು ಕರಗುವಂತೆ ಮಾಡುವದು.ಆತನಂತೆ ನಮ್ಮನ್ನು ಪ್ರೀತಿಸುವವರು ಯಾರೂ ಇಲ್ಲ. ಆತನಂತೆ ಕನಿಕರ ತೋರಿಸುವವರೂ ಇಲ್ಲ. ಆತನಂತೆ ಯಾರು ಅದ್ಭುತ ಮಾಡುವರು?

ಯೆಹೋವನು ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು (ವಿಮೋ. 34:6). ಯೆಹೋವನು ದಯೆಯೂ, ಕನಿಕರವೂ ಉಳ್ಳವನಾಗಿರುತ್ತಾನೆ. ಆತನು ತನ್ನ ಕಡೆಗೆ ತಿರುಗಿಕೊಳ್ಳುವ ನಿಮ್ಮನ್ನು ಕಟಾಕ್ಷಿಸದೆ ಇರುವದಿಲ್ಲ (2 ಪೂ.ವೃ. 30:9) ಎಂದು ಸತ್ಯವೇದ ಹೇಳುತ್ತದೆ. ನೆಹೆಮೀಯನು ಪ್ರಾರ್ಥಿಸುವಾಗ "ನೀನು ದಯೆಯೂ ಕನಿಕರವೂ ಉಳ್ಳ ದೇವರಾಗಿರುವದರಿಂದ ನಿನ್ನ ಮಹಾಕೃಪಾನುಸಾರವಾಗಿ ಅವರನ್ನು ನಾಶಮಾಡಿಬಿಡಲಿಲ್ಲ, ಕೈಬಿಡಲೂ ಇಲ್ಲ" (ನೆಹೆ. 9:31) ಎಂದು ಹೇಳುತ್ತಾನೆ. ಅರಸನಾದ ದಾವೀದನು "ಯೆಹೋವನು ಕೃಪಾಳುವೂ, ನೀತಿವಂತನೂ ಆಗಿದ್ದಾನೆ. ನಮ್ಮ ದೇವರು ಕನಿಕರವುಳ್ಳವನು" (ಕೀರ್ತ 116:5) ಎಂದು ಹೇಳುವನು. ಕರ್ತನು ತನ್ನ ಕೃಪೆಯ ಐಶ್ವರ್ಯದಂತೆಯೇ ನಿಮ್ಮ ಜೀವಿತವನ್ನು ರೂಪಿಸುವನು. ತನ್ನ ಕನಿಕರದಿಂದ ನಿಮ್ಮನ್ನು ತನ್ನ ಮಹಿಮೆಗಾಗಿ ಕೃಪೆಯ ಪಾತ್ರೆಗಳನ್ನಾಗಿ ರೂಪಿಸುತ್ತಿರುವನು. ಕುಂಬಾರನು ಜೇಡಿಮಣ್ಣನ್ನು ತೆಗೆದುಕೊಂಡು ನೀರನ್ನು ಹೊಯ್ದು ಮಡಕೆಗಳನ್ನು ರೂಪಿಸುತ್ತಾನೆ. ಆದರೆ ನಮ್ಮ ಕರ್ತನಾದರೋ ನಿಮ್ಮ ಮೇಲೆ ತನ್ನ ರಕ್ತವನ್ನೇ ಹೊಯ್ದು ಕೃಪೆಯ ಪಾತ್ರೆಗಳನ್ನಾಗಿ ರೂಪಿಸುವನು. ಕುಂಬಾರನು ಕೈಯಲ್ಲಿ ಮಡಕೆ ಸರಿಬರದೇ ಒಡೆದು ಹೋದರೆ ಅವನು ಅದನ್ನು ಬಿಸಾಡಿಬಿಡಬಹುದು. ಆದರೆ ಪರಮ ಕುಂಬಾರನಾದ ಕರ್ತನೋ ನಮ್ಮನ್ನು ಬಿಸಾಡಿಬಿಡದೆ ಸುಂದರವಾದ ಕೃಪೆಯ ಪಾತ್ರೆಯಾಗಿ ರೂಪಿಸುವನು. ಆತನು ಕಾನಾ ಊರಿನ ಮದುವೆಯಲ್ಲಿ ಕೈಕಾಲುಗಳನ್ನು ತೊಳೆದುಕೊಳ್ಳಲು ಇಡಲ್ಪಟ್ಟ ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸಲಿಲ್ಲವೇ?

ದೇವಮಕ್ಕಳೇ, ಇಂದು "ನಾವು ಉಳಿದಿರುವದು ಯೆಹೋವನ ಕರುಣೆಯೇ" (ಪ್ರಲಾಪ.3:22). ನೀವು ಕೃಪಾಪಾತ್ರೆಗಳಾಗಿ ಮಾರ್ಪಡಬೇಕಾದದ್ದು ಅಗತ್ಯವಾದದ್ದು. ಹಾಗೆ ಮಾರ್ಪಡಲು ನಿಮ್ಮನ್ನು ಒಪ್ಪಿಸಿಕೊಡುವಿರಾದರೆ ನಿಮಗೆ ಆತನು ತನ್ನ ಮಹಿಮೆಯ ಐಶ್ವರ್ಯವನ್ನೆಲ್ಲಾ ಪ್ರಕಟಿಸುವನು (ರೋಮಾ. 9:23). ಉತ್ತಮ ಬಳಕೆಗೆ ಉಪಯೋಗಿಸುವ ಪಾತ್ರೆಗಳನ್ನಾಗಿ ರೂಪಿಸುವನು.

*ನೆನಪಿಗೆ : "ಈಗಲಾದರೂ ಯೆಹೋವನೇ ನೀನು ನಮ್ಮ ತಂದೆಯಾಗಿದ್ದೀ; ನಾವು ಜೇಡಿಮಣ್ಣು, ನೀನು ಕುಂಬಾರ. ನಾವೆಲ್ಲರೂ ನಿನ್ನ ಕೈಕೆಲಸವೇ" (ಯೆಶಾ. 64:8).*

ಜುಲೈ 17

## ಮಹಾ ಕೃಪೆಯುಳ್ಳವನು!

ಬೆಳಿಗ್ಗೆ : ಕೀರ್ತನೆ 18,19
ಸಂಜೆ : ಅ.ಕೃ. 20:13–38

ನಿಮ್ಮ ಬಟ್ಟೆಗಳನ್ನಲ್ಲಾ ನಿಮ್ಮ ಹೃದಯಗಳನ್ನು ಹರಿದುಕೊಂಡು ನಿಮ್ಮ ದೇವರಾದ ಯೆಹೋವನ ಕಡೆಗೆ ತಿರುಗಿಕೊಳ್ಳಿರಿ. ಆತನು ದಯೆಯೂ, ಕನಿಕರವೂ ದೀರ್ಘಶಾಂತಿಯೂ ಉಳ್ಳವನಾಗಿ ಮಾಡಬೇಕೆಂದಿದ್ದ ಕೇಡಿಗೆ ಮನಮರುಗುತ್ತಾನೆ (ಯೋವೇಲ. 2:13).

ಹಳೆಯ ಒಡಂಬಡಿಕೆಯ ಭಕ್ತರಿಗೆ ಮಾತ್ರವಲ್ಲ, ಹೊಸ ಒಡಂಬಡಿಕೆಯಲ್ಲಿಯೂ ಕರ್ತನ ಪ್ರೀತಿ, ಕನಿಕರ ಕೃಪೆ ಮಾರ್ಪಡಲಿಲ್ಲ. ಅಪೊ. ಯಾಕೋಬನು ಕರ್ತನು ಕರುಣಾಸಾಗರನೂ ದಯಾಳುವೂ ಆಗಿದ್ದಾನೆ (ಯಾಕೋ. 5:11) ಎಂದು ಹೇಳುತ್ತಾನೆ. ನಮ್ಮ ದೇವರು ನಿನ್ನೆ ಇಂದು ಎಂದೆಂದಿಗೂ ಮಾರ್ಪಡದಾತನು (ಇಬ್ರಿ. 13:8). "ಯೆಹೋವನಾದ ನಾನು ಮಾರ್ಪಟ್ಟಿಲ್ಲ" ಎಂದು ಹೇಳುತ್ತಾನೆ (ಮಲಾ. 3:6). ಹಳೆಯ ಒಡಂಬಡಿಕೆಯ ಕಾಲದಲ್ಲಿ ಆತನು ಎಷ್ಟು ಕನಿಕರ ಉಳ್ಳವನಾಗಿದ್ದನೋ, ಹೊಸ ಒಡಂಬಡಿಕೆಯ ಕಾಲದಲ್ಲೂ ಅಷ್ಟೇ ಕನಿಕರವುಳ್ಳವನಾಗಿರುವನು. ಕರ್ತನು ಕರುಣೆಯಲ್ಲಿ ಅತ್ಯಂತ ಐಶ್ವರ್ಯವಂತನೆಂದು ಅಪೊ. ಪೌಲನು ಅರಿತಿದ್ದನು (ಎಫೆ.2:4).

ಕರ್ತನು ಮನಮರುಗಿ ಪರಲೋಕವನ್ನು ತ್ಯಜಿಸಿ, ಈ ಭೂಮಿಗೆ ಬಂದನು. ಪಾಪಿಗಳ ಮತ್ತು ಸುಂಕದವರ ಸ್ನೇಹಿತನೆಂದು ಕರೆಯಲ್ಪಟ್ಟನು. ಕನಿಕರ ಕರುಣೆಯಲ್ಲಿ ಐಶ್ವರ್ಯವುಳ್ಳವನಾಗಿ ಹಳ್ಳಿ ಪಳ್ಳಿಗಳನ್ನು ಪಟ್ಟಣಗಳನ್ನು ಸುತ್ತಿ ಸುವಾರ್ತೆಯನ್ನು ಸಾರಿದನು. ರಾತ್ರಿಯೆಲ್ಲಾ ಜನರಿಗಾಗಿ ಪರಿತಪಿಸುತ್ತಾ ಪ್ರಾರ್ಥಿಸಿದನು. ಅಂದು ಕುರುಬನಿಲ್ಲದ ಕುರಿಗಳಂತಿದ್ದ ಜನರನ್ನು ನೋಡಿ, ಯೇಸು ಕ್ರಿಸ್ತನು ಮನಮರುಗಿದ ರಹಸ್ಯವೇನು? ದೆವ್ವಗಳನ್ನು ಓಡಿಸಿ, ಕುಷ್ಟರೋಗಿಗಳನ್ನು ವ್ಯಾಧಿ ಉಳ್ಳವರನ್ನು ಕುಂಟರು ಕುರುಡರನ್ನು ಸ್ವಸ್ಥಪಡಿಸಿದ್ದರ ರಹಸ್ಯವೇನು? ಆತನ ಕನಿಕರವಲ್ಲವಾ? (ಮತ್ತಾ.14:14,9:36). ಹಲವು ವೇಳೆ ನೀವು ಕನಿಕರ, ಕರುಣೆಗಾಗಿ ಇತರರಲ್ಲಿ ಬೇಡಬಹುದು. ಆದರೆ ಅನೇಕರು ಕಲ್ಲಿನ ಹೃದಯವುಳ್ಳವರಾಗಿ ಕನಿಕರ ತೋರಿಸುವದಿಲ್ಲ. ಮನುಷ್ಯರು ದಿನೇ ದಿನೇ ಮೃಗಗಳಾಗಿ ಮಾರ್ಪಡುತ್ತಿರುವರು. ಕಾರಣ ಅವರ ಕನಿಕರವಿಲ್ಲದ ಸ್ವಭಾವವಲ್ಲವೇ?

ದೇವಮಕ್ಕಳೇ, ಇಂದಿಗೂ ಕನಿಕರದಿಂದ ನಿಮಗೆ ಅದ್ಭುತಗಳನ್ನು ಮಾಡುವನು. ನಿಮ್ಮ ಭಕ್ತಿಯನ್ನು ನೋಡಿ ಅಲ್ಲ, ನಿಮ್ಮ ಸನ್ಮಾರ್ಗವನ್ನು ನೋಡಿ ಅಲ್ಲ, ಆತನ ಪ್ರೀತಿಯ ನಿಮಿತ್ತವೂ, ಕರುಣೆಯ ನಿಮಿತ್ತವೂ ನಿಮಗೆ ಕೃಪೆ ತೋರಿಸುವನು. ಇಂದು ನೀವು ಯಾವುದೇ ಪರಿಸ್ಥಿತಿಯಲ್ಲಿದ್ದರೂ ನಿಮಗೆ ಕನಿಕರ ತೋರಿಸುವ ನಿಮಗೆ ಕರುಣೆ ತೋರಿಸುವ ಯೇಸುಕ್ರಿಸ್ತನ ಬಳಿಗೆ ಬನ್ನಿರಿ. ಆತನ ಬಳಿಗೆ ಬರುವವರನ್ನು ಎಂದಿಗೂ ತಳ್ಳಿಬಿಡುವದಿಲ್ಲ. ನಿಮ್ಮ ಮೇಲೆ ಕರುಣೆ ತೋರಿಸಿ ನಿಮ್ಮ ಅಗತ್ಯತೆಗಳನ್ನು ಪೂರೈಸುವನು. ನಿಮ್ಮ ಕೊರತೆಗಳನ್ನೆಲ್ಲಾ ನೀಗಿಸುವನು.

*ನೆನಪಿಗೆ : ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ, ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ. ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ. ಆತನು ಅವನನ್ನು ಕರುಣಿಸುವನು (ಯೆಶಾ. 55:7).*



ಜುಲೈ 18

## ದಾವೀದನಿಗೆ ಕರುಣೆ!

ಬೆಳಿಗ್ಗೆ : ಕೀರ್ತನೆ 20,21,22
ಸಂಜೆ : ಅ.ಕೃ. 21:1–16

ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ಕರುಣಾ ನಿಧಿಯೇ ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು (ಕೀರ್ತನೆ. 51:1).

ದೇವರು, ತನ್ನ ಕೃಪೆಯಿಂದ ಕುರಿಗಳನ್ನು ಮೇಯಿಸುತ್ತಿದ್ದ ದಾವೀದನನ್ನು ಇಸ್ರಾಯೇಲ್ಯರ ಮೇಲೆ ಅರಸನನ್ನಾಗಿ ಮಾಡಿದನು. ಆದರೆ ಅವನು ಮಾಡಿದ ಕೇವಲವಾದ ಪಾಪ ಅವನನ್ನು ದೇವರ ಕೋಪಾಗ್ನಿಗೆ ಗುರಿಮಾಡಿತು. ಪಾಪ ಮಾಡುವ ಆತ್ಮ ಸಾಯುವದು (ಯೆಹೆ. 18:20). ಪಾಪ ಮಾಡುವವನು ದೇವರ ನ್ಯಾಯ ತೀರ್ಪಿಗೆ, ದಂಡನೆಗೆ ತಪ್ಪಿಸಿಕೊಳ್ಳಲಾರನು. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು (ಗಲಾ. 6:7).

ದಾವೀದನು 51ನೇ ಕೀರ್ತನೆಯನ್ನು ಬರೆಯಲು ಕಾರಣವೇನು? ಮನಸ್ಸಾಕ್ಷಿ ಅವನನ್ನು ಬಾಧಿಸಿತು. ದೇವರ ಕೋಪಕ್ಕೆ ಗುರಿಯಾಗಿದ್ದೇನೆ ಎಂಬುದನ್ನು ಅವನು ಅರಿತನು. ಅವನು ಮಾಡಿದ ತಪ್ಪಾದರೂ ಏನು? ಪರಸ್ತ್ರೀಯೊಂದಿಗೆ ವ್ಯಭಿಚಾರ ನಡೆಸಿ ಅವಳ ಗಂಡನನ್ನು ತಂತ್ರದಿಂದ ಕೊಲೆ ಮಾಡಿದನು. 2ನೇ ಸಮುವೇಲ 12ನೇ ಅಧ್ಯಾಯವನ್ನು ಓದುವಿರಾದರೆ, ದೇವರು ಪ್ರವಾದಿಯಾದ ನಾತಾನನನ್ನು ದಾವೀದನ ಬಳಿಗೆ ಕಳುಹಿಸಿ ದಾವೀದನ ತಪ್ಪನ್ನು ತಿಳಿಸಿದನು. ದಯೆಯಿಲ್ಲದ ಒಬ್ಬ ಮನುಷ್ಯನು ತನ್ನ ಮನೆಗೆ ಬಂದ ಅತಿಥಿಗೆ ತನ್ನ ಕುರಿಗಳಲ್ಲಿನ ಒಂದು ಕುರಿಯನ್ನು ಕೊಂದು ಔತಣ ಮಾಡಿದ. ಕಥೆಯ ಮೂಲಕ ದಾವೀದನ ತಪ್ಪನ್ನು ನಾತಾನನು ತಿಳಿಯಪಡಿಸಿದನು. ಅವನು ಮಾಡಿದ ತಪ್ಪು ಅವನನ್ನು ಕನಿಕರಕ್ಕೆ ಯೋಗ್ಯನಲ್ಲದವನನ್ನಾಗಿಸಿತು. ತನ್ನನ್ನು ತಾನು ಕ್ಷಮಿಸಿಕೊಳ್ಳಲಾಗದವನಾದನು. ಮನನೊಂದವನಾಗಿ ಅತ್ತು 51ನೇ ಕೀರ್ತನೆಯನ್ನು ಬರೆದಾಗ, ಕರ್ತನು ಅವನನ್ನು ಕ್ಷಮಿಸಿ ಒಡೆದುಹೋದ ಪಾತ್ರೆಯನ್ನು ಕೃಪಾಪಾತ್ರೆಯನ್ನಾಗಿ ರೂಪಿಸಿದನು. ದೋಷಗಳನ್ನು ಮುಚ್ಚಿಕೊಳ್ಳುವವನಿಗೆ ಶುಭವಾಗದು. ಅವುಗಳನ್ನು ಒಪ್ಪಿಕೊಂಡು ಬಿಟ್ಟುಬಿಡುವವನಿಗೆ ಕರುಣೆ ದೊರೆಯುವದು (ಜ್ಞಾನೋ. 28:13).

ದೇವಮಕ್ಕಳೇ, ನಿಮ್ಮ ಬಲಹೀನತೆಗಳಿಂದ ನೀವು ಪಾಪ ಮಾಡಿಬಿಡಬಹುದು. ಆದರೆ ನಿಮ್ಮ ಪಾಪಗಳನ್ನು ಮುಚ್ಚಿಡಬೇಡಿರಿ. ಹಲವು ಕಾರಣಗಳನ್ನು ಹೇಳಿ ನಿಮ್ಮನ್ನು ಸಮರ್ಥಿಸಿಕೊಳ್ಳಬೇಡಿರಿ. ಮಾಡಿದ ಪಾಪಕ್ಕಾಗಿ ಪಶ್ಚಾತ್ತಾಪಪಟ್ಟು ದೇವರ ಮುಂದೆ ಅರಿಕೆ ಮಾಡಿರಿ. ಕರ್ತನು ನಿಮ್ಮ ಪಾಪಗಳನ್ನು ಮನ್ನಿಸಿ ಕೃಪಾಪಾತ್ರೆಗಳನ್ನಾಗಿ ರೂಪಿಸಿ ಆಶೀರ್ವದಿಸುವನು.

*ನೆನಪಿಗೆ : ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ (ಕೀರ್ತನೆ 51:17).*

ಜುಲೈ 19

## ಒನೇಸಿಫೋರನ ಕುಟುಂಬದವರಿಗೆ ಕರುಣೆ!

ಬೆಳಿಗ್ಗೆ : ಕೀರ್ತನೆ 23,24,25
ಸಂಜೆ : ಅ.ಕೃ. 21:17–40

"ಒನೇಸಿಫೋರನ ಮನೆಯವರಿಗೆ ಕರ್ತನು ಕರುಣೆಯನ್ನು ತೋರಿಸಲಿ; ಅವನು ಅನೇಕಾವರ್ತಿ ನನ್ನನ್ನು ಆದರಿಸಿದನು. ನನ್ನ ಬೇಡಿಗಳಿಗೆ ನಾಚಿಕೆ ಪಡದೆ..." (2 ತಿಮೊ.1:16,17).

ಒನೇಸಿಫೋರನು ಅಪೊ. ಪೌಲನೊಂದಿಗೆ ಸೇವೆ ಮಾಡಿದನು. ಪೌಲನು ಸೆರೆಯಲ್ಲಿದ್ದಾಗ ಪೌಲನಿಗೆ ಆದರಣೆ ನೀಡಿದನು. ಇದರಿಂದ ಪೌಲನು ಮನಃಪೂರ್ವಕವಾಗಿ ಒನೇಸಿಫೋರನನ್ನು ಆಶೀರ್ವದಿಸಿದನು.

ಕರುಣೆವುಳ್ಳವರು ಧನ್ಯರು. ಅವರು ಕರುಣೆ ಹೊಂದುವರು (ಮತ್ತಾ. 5:7) ಎಂದು ಕರ್ತನು ತನ್ನ ಪರ್ವತ ಪ್ರಸಂಗದಲ್ಲಿ ಬೋಧಿಸಿರುವನು. ನೀವು ಇತರರಿಗೆ ಕರುಣೆ ತೋರಿಸುವಾಗ ನಿಶ್ಚಯವಾಗಿಯೇ ದೇವರ ಕರುಣೆಯನ್ನು ನೀವು ಪಡೆಯುವಿರಿ. ಒಬ್ಬ ಒಳ್ಳೆಯ ತಾಯಿ ನನಗೆ ಗೊತ್ತು. ಯಾರಾದರೂ ಆಕೆಯ ಬಳಿ ಬಂದು ತನ್ನ ಕಷ್ಟಗಳನ್ನು ಹೇಳಿದರೆ ಸಾಕು. ಕೂಡಲೇ "ಅಯ್ಯೋ ಪಾಪ" ಎಂದು ಹೇಳಿ ತನಗಾದಷ್ಟು ಸಹಾಯವನ್ನು ಮಾಡುವರು. ಕೆಲವರು ಬೇಕೆಂದೇ ತಂತ್ರವಾಗಿ ಯಾಮಾರಿಸಲು ಬಂದಾಗ್ಯೂ, ಅವರ ಕಪಟವನ್ನು ಆಕೆ ಅರಿತುಕೊಳ್ಳದೆ ಸಹಾಯ ಮಾಡುತ್ತಿದ್ದರು. ಆದರೂ ಕರ್ತನೋ, ಆಕೆಯ ಕರುಣೆಯನ್ನು ನೋಡಿ, ಅವರ ಕುಟುಂಬವನ್ನು ಆಶೀರ್ವದಿಸಿದನು. ಆಕೆಯ ಮಕ್ಕಳೆಲ್ಲಾ ಉತ್ತಮವಾದ ಸ್ಥಾನಗಳಲ್ಲಿಡಲ್ಪಟ್ಟಿದ್ದರು. ಹೌದು, ಕರುಣೆಯುಳ್ಳವರು ನಿಶ್ಚಯವಾಗಿಯೇ ಕರುಣೆ ಹೊಂದುವರು. ಐಶ್ವರ್ಯವಂತನ ಮತ್ತು ಲಾಜ಼ರನ ಘಟನೆಯನ್ನು ಓದಿನೋಡಿ. ತನ್ನ ಬಾಗಿಲಿನ ಬಳಿ ಹುಣ್ಣುಗಳಿಂದ, ಹಸಿವೆಯಿಂದ ಬಿದ್ದಿದ್ದ ಲಾಜ಼ರನಿಗೆ ಐಶ್ವರ್ಯವಂತನು ಸಹಾಯ ಮಾಡಲಿಲ್ಲ. ಅಂತ್ಯದಲ್ಲಿ ಏನಾಯಿತು? ಐಶ್ವರ್ಯವಂತನು ನರಕದಲ್ಲಿ ಬಿದ್ದು, ಒಂದು ತೊಟ್ಟು ನೀರಿಗಾಗಿ ಬೇಡಿದಾಗ ಕರುಣೆ ದೊರೆಯದಾಯಿತು. ಕರುಣೆ ಇಲ್ಲದವರಿಗೆ ಕರುಣೆ ಇಲ್ಲದ ನ್ಯಾಯತೀರ್ಪೇ ಸಿಗುವದು.

ದೇವಮಕ್ಕಳೇ, ಬಡವರಿಗೆ ಕರುಣೆ ತೋರಿಸಿರಿ. "ಬಡವರಿಗೆ ದಯೆ ತೋರಿಸುವವನು ಯೆಹೋವನಿಗೆ ಸಾಲಕೊಡುವನು" (ಜ್ಞಾನೋ. 19:17) ಎಂದು ಸತ್ಯವೇದ ಹೇಳುತ್ತದೆ. ವಿಧವೆಯರಿಗೆ ದಿಕ್ಕಿಲ್ಲದವರಿಗೆ ಅನಾಥರಿಗೆ ಸಹಾಯ ಮಾಡಿರಿ. ದೇವರು ಒಳ್ಳೆಯವರ ಮೇಲೂ ಕೆಟ್ಟವರ ಮೇಲೂ ಸೂರ್ಯನನ್ನು ಉದಯಿಸಮಾಡಿ ನೀತಿವಂತರ ಮೇಲೂ ಅನೀತಿವಂತರ ಮೇಲೂ ಮಳೆಸುರಿಯುವಂತೆ ಮಾಡುವನಲ್ಲವೇ? ಒಳ್ಳೆಯ ಸಮಾರ್ಯದವನಂತೆ ಕಷ್ಟದಲ್ಲಿರುವವರಿಗೆ ಕನಿಕರ ತೋರಿಸಿ ಸಹಾಯ ಮಾಡಿರಿ.

*ನೆನಪಿಗೆ : ಕರುಣೆ ತೋರಿಸದೆ ಇರುವವನಿಗೆ ನ್ಯಾಯತೀರ್ಮಾನದಲ್ಲಿ ಕರುಣೆಯು ತೋರಿಸಲ್ಪಡುವದಿಲ್ಲ. ಕರುಣೆಯು ನ್ಯಾಯತೀರ್ಮಾನವನ್ನು ಗೆದ್ದು ಹಿಗ್ಗುತ್ತದೆ (ಯಾಕೋ.2:13).*



ಜುಲೈ 20

## ಯೋಸೇಫನಿಗೆ ದಯೆ!

ಬೆಳಿಗ್ಗೆ : ಕೀರ್ತನೆ 26,27,28
ಸಂಜೆ : ಅ.ಕೃ. 22

ಯೆಹೋವನು ಯೋಸೇಫನ ಸಂಗಡ ಇದ್ದು ಅವನ ಮೇಲೆ ಕೃಪೆಯನ್ನಿಟ್ಟು ಅವನಿಗೆ ಸೆರೆ ಯಜಮಾನನ ಬಳಿಯಲ್ಲಿ ದಯೆ ದೊರಕುವಂತೆ ಮಾಡಿದನು. (ಆದಿ. 39:21).

ಹಳೆ ಒಡಂಬಡಿಕೆಯಲ್ಲಿ ಯೋಸೇಫನಿಗೆ ದಾನಿಯೇಲನಿಗೆ ಕರ್ತನ ದೃಷ್ಟಿಯಲ್ಲಿ ದಯೆ ದೊರೆಯಿತು. ಅವರು ದೇವರಿಗೆ ಭಯಪಡುವವರೂ, ಪರಿಶುದ್ಧರೂ ಆಗಿದ್ದರು. ಅವರ ಜೀವಿತದ ಎಲ್ಲಾ ವಿಷಯಗಳಲ್ಲೂ ಕರ್ತನನ್ನೇ ದೃಢವಾಗಿ ಆತುಕೊಂಡು ಆತನ ದಯೆಯನ್ನೂ ಕರುಣೆಯನ್ನೂ ಪಡೆದುಕೊಂಡರು. ಕರ್ತನು ಅವರಿಗೆ ಮೇಲಧಿಕಾರಿಗಳ ದೃಷ್ಟಿಯಲ್ಲಿ ದಯೆ ದೊರಕುವಂತೆ ಕೃಪೆ ನೀಡಿದನು.

ಯೋಸೇಫನು ಸೆರೆಮನೆಯಲ್ಲಿ ಶ್ರಮೆ ಅನುಭವಿಸಬೇಕಾದ ಕಾರಣ ಏನು? ಭಯಂಕರವಾದ ವ್ಯಭಿಚಾರದ ಆಪಾದನೆ ಅವನ ಮೇಲೆ ಹೊರಿಸಲ್ಪಟ್ಟಿತು. ಅವನ ಯಜಮಾನನಿಗೆ ದ್ರೋಹ ಮಾಡಿ ಯಜಮಾನಿಯ ಕೈಗಳನ್ನು ಹಿಡಿದು ಎಳೆದನು ಎಂದೂ ಅವಳು ಕೂಗಿಕೊಂಡಾಗ ತನ್ನ ವಸ್ತ್ರವನ್ನು ಬಿಟ್ಟು ಓಡಿಹೋದನು ಎಂದೂ, ಅನ್ಯಾಯವಾಗಿ ಆಪಾದನೆ ಹೊರಿಸಿದರು. ಒಬ್ಬನನ್ನು ಸೆರೆಮನೆಯಲ್ಲಿ ಇಡುವದೇ ಅವನನ್ನು ದಂಡಿಸುವದಕ್ಕಾಗಿ, ಆದರೆ ಕರ್ತನಾದರೋ ಹೃದಯದಲ್ಲಿ ಕಠಿಣವಾಗಿದ್ದ ಸೆರೆಯ ಯಜಮಾನನ ದೃಷ್ಟಿಯಲ್ಲಿ ಯೋಸೇಫನಿಗೆ ದಯೆ ತೋರಿಸುವಂತೆ ಕೃಪೆ ನೀಡಿದನು. ಯೋಸೇಫನೂ, ಇತರ ಸೆರೆಯಾಳುಗಳೊಂದಿಗೆ ಕರುಣೆಯಿಂದಲೂ, ದಯೆಯಿಂದಲೂ ನಡೆದುಕೊಂಡನು. ಇಬ್ಬರು ಖೈದಿಗಳು ರಾತ್ರಿಯಲ್ಲಿ ತಾವು ಕಂಡ ಸ್ವಪ್ನದಿಂದ ಕಳವಳಗೊಂಡಾಗ, ಅವರ ಸ್ವಪ್ನಗಳ ಅರ್ಥವನ್ನು ತಿಳಿಸಿದನು. ಇತರರೊಂದಿಗೆ ಪ್ರೀತಿಯಿಂದ ನಡೆದುಕೊಳ್ಳುವ ಒಳ್ಳೆಯ ಮನಸ್ಸು ಯೋಸೇಫನಿಗೆ ಇತ್ತು. ಕರ್ತನಿಗಾಗಿ ನಿಂತ ಯೋಸೇಫನಿಗಾಗಿ ಕರ್ತನು ಅಧಿಕವಾದ ವೈರಾಗ್ಯವುಳ್ಳವನಾಗಿದ್ದನು. ದಯೆತೋರಿಸಿದನು, ಕರುಣೆ ತೋರಿಸಿದನು. ಅದ್ಭುತವಾದ ರೀತಿಯಲ್ಲಿ ಸೆರೆಮನೆಯಿಂದ ಫರೋಹನನಿಗೆ ಎರಡನೆಯ ಸ್ಥಾನಕ್ಕೆ ಯೋಸೇಫನು ಎತ್ತಲ್ಪಟ್ಟನು. ಆ ಒಂದು ಏಳಿಗೆ ದಯಾಮಯನಾದ ಕರ್ತನಿಂದಲೇ ಬಂದಿತು. ಆ ಒಂದು ಉನ್ನತ ಸ್ಥಾನದಲ್ಲೂ ತನ್ನನ್ನು ಹಿಂಸೆಗೆ ಒಳಪಡಿಸಿದ ತನಗೆ ದ್ರೋಹವೆಸಗಿದ ತನ್ನ ಸಹೋದರರು ತನ್ನ ಬಳಿಗೆ ಬಂದಾಗ ಅವರಿಗೆ ಮುಯ್ಯಿಗೆ ಮುಯ್ಯಿ ತೀರಿಸದೆ ಅವರಿಗೆ ದಯೆ ತೋರಿಸಿದನು.

ದೇವಮಕ್ಕಳೇ, ಬಡವರಿಗೆ ಅನಾಥರಿಗೆ ದಯೆ ತೋರಿಸಿ ಮುಯ್ಯಿಗೆ ಮುಯ್ಯಿ ತೀರಿಸದೆ, ವೈರಿಗಳನ್ನು ಪ್ರೀತಿಸಿರಿ. ನೀವು ದಯೆ ತೋರಿಸುವವರಾಗಿದ್ದರೆ, ಕರ್ತನು ನಿಮಗೆ ದಯೆ ತೋರಿಸುವನು.

*ನೆನಪಿಗೆ : ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯ ಹೊಂದಿರಲಿಲ್ಲ ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ. (1 ಪೇತ್ರ. 2:10).*

ಜುಲೈ 21

## ಯಾಕೋಬನಿಗೆ ದಯೆ!

ಬೆಳಿಗ್ಗೆ : ಕೀರ್ತನೆ 29,30
ಸಂಜೆ : ಅ.ಕೃ. 23:1–16

ನೀನು ನಿನ್ನ ದಾಸನಾದ ನನ್ನ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ನಿನ್ನ ವಾಗ್ದಾನವನ್ನು ನೆರವೇರಿಸಿದ್ದೀಯಲ್ಲಾ ನಾನು ಅದಕ್ಕೆ ಕೇವಲ ಅಪಾತ್ರನಾಗಿದ್ದೇನೆ. ನಾನು ಮೊದಲು ಈ ಯೊರ್ದನ್ ನದಿಯನ್ನು ದಾಟಿದಾಗ ನನಗೆ ಕೋಲುಮಾತ್ರವೇ ಇತ್ತು. ಈಗ ಎರಡು ಪಾಳೆಯಗಳಿಗೆ ಒಡೆಯನಾಗಿದ್ದೇನೆ (ಆದಿ.32:10).

ಅಬ್ರಹಾಮ, ಇಸಾಕ, ಯಾಕೋಬ ಈ ಮೂವರೂ ಮೂಲ ಪಿತೃಗಳೆಂದು ಕರೆಯಲ್ಪಟ್ಟರು. ಇವರಲ್ಲಿ ಯಾಕೋಬನು ಇನ್ನೊಬ್ಬರನ್ನು ಮೋಸಗೊಳಿಸುವದರಲ್ಲಿ ನಿಪುಣನಾಗಿದ್ದನು. ಹಸಿವಾಗಿದೆ ಸ್ವಲ್ಪ ಕೂಳನ್ನು ಕೊಡು ಎಂದು ಸಹೋದರನಾದ ಏಸಾವನು ಕೇಳಿದಾಗ, ಆ ಸಮಯವನ್ನು ಉಪಯೋಗಿಸಿ ಜೇಷ್ಠಪುತ್ರ ಬಾಧ್ಯತೆಯನ್ನು ಅವನಿಂದ ಕಸಿದುಕೊಂಡನು. ತಂದೆಯ ಆಶೀರ್ವಾದವನ್ನು ಪಡೆದುಕೊಳ್ಳಲು ಎಷ್ಟು ಚೆನ್ನಾಗಿ ಮಾರುವೇಷ ಧರಿಸಿ ನಟಿಸಿದನು. ಕುರಿ ತುಪ್ಪಟವನ್ನು ಹೊದ್ದು ತನ್ನ ಸ್ವಂತ ತಂದೆಯನ್ನು ಮೋಸಗೊಳಿಸಿ ಆಶೀರ್ವಾದ ಹೊಂದಿಕೊಂಡನು.

ದನಕುರಿಗಳಿದ್ದ ಲಾಬಾನನ ಮನೆಯಲ್ಲಿ, ಅವನ ಎರಡು ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಂಡನು. ಸ್ವಲ್ಪಕಾಲದಲ್ಲಿಯೇ ಮಾವನ ಒಳ್ಳೆಯ ದನಕುರಿಗಳೆಲ್ಲವೂ ಯಾಕೋಬನಿಗೆ ಸೇರಿದವು. ಯಾಕೋಬನು ತಾನು ಸಂಪಾದಿಸಿದ್ದೆಂದು ಹೇಳಿದಾಗ್ಯೂ, ಎಲ್ಲವೂ ಮಾವನಿಂದ ಕೊಳ್ಳೆ ಹೊಡೆದವುಗಳೇ. ಯಾಕೋಬನು ಮೋಸಗಾರನಾಗಿದ್ದರೂ, ತಂತ್ರಗಾರನಾಗಿದ್ದರೂ ಕರ್ತನಿಗೆ ಗೌರವವನ್ನೂ, ಘನತೆಯನ್ನೂ ಸಲ್ಲಿಸಿ "ದೇವರೇ ನೀನು ನನಗೆ ತೋರಿಸಿದ ದಯೆಗೆ ನಾನು ಯಾವ ರೀತಿಯಲ್ಲೂ ಯೋಗ್ಯನಲ್ಲ" ಎಂದು ತನ್ನನ್ನು ತಗ್ಗಿಸಿಕೊಂಡನು. ಮಾತ್ರವಲ್ಲ ಯಬ್ಬೋಕ್ ಹೊಳೆಯ ದಂಡೆಯಲ್ಲಿ ಕರ್ತನ ಬಳಿ ಹೋರಾಡಿ ಅಣ್ಣನ ಜೇಷ್ಠಪುತ್ರ ಭಾಗ್ಯಕ್ಕಿಂತಲೂ ತಂದೆಯ ಆಶೀರ್ವಾದದಕ್ಕಿಂತಲೂ, ಲಾಬಾನನ ಬಳಿ ಸಂಪಾದಿಸಿದ ಮಂದೆಗಳಿಗಿಂತಲೂ ಮಿಗಿಲಾಗಿ ನಿನ್ನ ಆಶೀರ್ವಾದ ಬಹಳ ದೊಡ್ಡದು. ದಯಮಾಡಿ ಕರುಣೆ ತೋರಿಸು ಎಂದು ಬೇಡಿದನು. ಯೆಹೋವನ ಆಶೀರ್ವಾದವು ಭಾಗ್ಯದಾಯಕವು. ಅದು ವ್ಯಸನವನ್ನು ಸೇರಿಸದು (ಜ್ಞಾನೋ.10:22).

ದೇವಮಕ್ಕಳೇ, ಪ್ರಾಪಂಚಿಕ ಆಶೀರ್ವಾದಗಳಿಗಿಂತಲೂ, ಕರ್ತನು ನೀಡುವ ರಕ್ಷಣೆ, ಪವಿತ್ರಾತ್ಮನ ಅಭಿಷೇಕ, ದೈವೀಕ ಸಮಾಧಾನ, ಸಂತೋಷ, ನಿತ್ಯಜೀವದ ಆಶೀರ್ವಾದಗಳೇ ಎಷ್ಟೋ ದೊಡ್ಡ ಆಶೀರ್ವಾದ. ನೀವು ಕರುಣೆಯ ಪಾತ್ರೆಗಳಾಗಿ ಮಾರ್ಪಡಲು ಬಯಸುವಿರಾ? ಕರ್ತನ ಪಾದಗಳನ್ನು ಹಿಡಿದು ಆತನ ದಯೆಗಾಗಿ ಬೇಡುವಿರಾದರೆ ನಿಶ್ಚಯವಾಗಿ ಕರ್ತನು ಮಹಿಮೆಯಾದ ನೂತನ ಜೀವಿತವನ್ನು ದಯಪಾಲಿಸುವನು. ಎಲ್ಲರನ್ನೂ ಪ್ರಕಾಶಗೊಳಿಸುವ ನಿಜವಾದ ಬೆಳಕೇ ಆತನು. ದಯೆಯನ್ನು ಬಿತ್ತಿರಿ, ಆಗ ಕರುಣಾಸಾಗರನಾದ ದೇವರು ನಿಮಗೆ ದೊಡ್ಡ ಕೊಯ್ಲನ್ನು ಅನುಗ್ರಹಿಸುವನು.

*ನೆನಪಿಗೆ : ಯೆಹೋವನೇ, ನಾವು ನಿನ್ನನ್ನೇ ನಿರೀಕ್ಷಿಸಿಕೊಂಡಿದ್ದೇವೆ. ನಿನ್ನ ಕೃಪೆಯು ನಮ್ಮ ಮೇಲೆ ಇರಲಿ (ಕೀರ್ತ. 33:22).*



ಜುಲೈ 22

## ಕರುಣೆ ಹೊಂದುವಿರಿ!

ಬೆಳಿಗ್ಗೆ : ಕೀರ್ತನೆ 31,32
ಸಂಜೆ : ಅ.ಕೃ. 23:17–35

ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೋ ಸಾವಿರ ತಲೆಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ (ವಿಮೋ. 20:6).

ದೇವರ ಆಜ್ಞೆಗಳಿಗೆ ವಿಧೇಯರಾಗದೆ, ವಾಕ್ಯಗಳಂತೆ ನಡೆಯದೇ "ದೇವರೇ ಕರುಣೆ ತೋರಿಸು, ಕರುಣೆ ತೋರಿಸು" ಎಂದು ಕೇಳಿದರೆ ಕರುಣೆ ದೊರೆಯುವದಿಲ್ಲ. ಆದರೆ ದೇವರಿಗೆ ಭಯಪಟ್ಟು ಆತನ ಆಜ್ಞೆಗಳಿಗೆ ವಿಧೇಯರಾಗಿ ನಡೆಯುವಾಗ, ದೇವರು ಸಾವಿರ ತಲೆಗಳವರೆಗೆ ಕರುಣೆ ತೋರಿಸುವನು. ದೇವರ ಆಜ್ಞೆಗಳು ಭಾರವಾದವುಗಳಲ್ಲ. ಯೇಸುಕ್ರಿಸ್ತನು "ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು. ಯಾಕಂದರೆ ನನ್ನ ನೊಗವು ಮೃದುವಾದದ್ದು, ನನ್ನ ಹೊರೆಯು ಹಗುರವಾದದ್ದು" (ಮತ್ತಾ.11:29,30) ಎಂದು ಹೇಳಿರುವನು.

ಉದಾಹರಣೆಯಾಗಿ ದೀಕ್ಷಾಸ್ನಾನ ಹೊಂದುವದು ಕಠಿಣವಾದ ಕಾರ್ಯವಲ್ಲ. ಇದರಿಂದ ಒಬ್ಬನು ರೋಗಿಯಾಗುವದಿಲ್ಲ, ಮರಣಹೊಂದುವದಿಲ್ಲ. ಅದು ಬಹಳ ಸಾಧಾರಣ ಕಾರ್ಯ. ಆದರೆ ಕೆಲವರು ಇದಕ್ಕಾಗಿ ದೊಡ್ಡ ವಿತಂಡವಾದ ಮಾಡುತ್ತಿರುವರು. ಕಳ್ಳನು ದೀಕ್ಷಾಸ್ನಾನ ಮಾಡಿಸಿಕೊಂಡನಾ? ಎಂದು ಕಳ್ಳನ ಹಿಂದೆ ಹೋಗಿ ಬಚ್ಚಿಟ್ಟುಕೊಳ್ಳುವರೇ ಹೊರತು, ಕ್ರಿಸ್ತನು ತನ್ನನ್ನು ತಗ್ಗಿಸಿಕೊಂಡು ದೀಕ್ಷಾಸ್ನಾನ ಪಡೆದನಲ್ಲಾ, ಆತನ ಹೆಜ್ಜೆಯನ್ನು ಹಿಂಬಾಲಿಸಬೇಕು ಎಂದು ಭಾವಿಸುವದಿಲ್ಲ. ಇನ್ನು ಕೆಲವರು ದಶಮಭಾಗದ ಆಜ್ಞೆಗೆ ವಿಧೇಯರಾಗುವದಿಲ್ಲ. ಕರ್ತನಿಗೆ ಕೊಡುವಾಗ ಆತನು ಸಂತೋಷ ಪಡುವನು. ಆತನ ಸೇವೆ ಹೆಚ್ಚುವದು. ಆತನು ಪರಲೋಕದ ದ್ವಾರಗಳನ್ನು ತೆರೆದು ಸ್ಥಳ ಹಿಡಿಸಲಾರದಷ್ಟು ಆಶೀರ್ವಾದಗಳನ್ನು ನೀಡುವನು (ಮಲಾ. 3:10). ದೀಕ್ಷಾಸ್ನಾನ, ದಶಮಭಾಗ ಮಾತ್ರವಲ್ಲ, ಸತ್ಯವೇದದಲ್ಲಿರುವ ಎಲ್ಲಾ ಆಜ್ಞೆಗಳನ್ನು ಕೈಗೊಳ್ಳಿರಿ. ಅಂದು ಅಬ್ರಹಾಮನು ದೇವರ ಆಜ್ಞೆಗೆ ವಿಧೇಯನಾಗಿ, ತನ್ನ ತಂದೆಯ ಮನೆಯನ್ನು ಬಂಧುಗಳನ್ನು ಬಿಟ್ಟು ಕರ್ತನು ಹೇಳಿದ ದೇಶಕ್ಕೆ ಹೊರಟುಹೋದನು. ದಾಸಿಯಾದ ಹಾಗರಳನ್ನೂ, ಅವಳಲ್ಲಿ ತನಗೆ ಹುಟ್ಟಿದ ಮಗನನ್ನೂ ಹೊರಗೆ ಹಾಕಿದನು. ಮಾತ್ರವಲ್ಲ, ಕರ್ತನ ವಾಗ್ದಾನದಂತೆ ತನ್ನ ಹೆಂಡತಿಯಾದ ಸಾರಳಲ್ಲಿ ಹುಟ್ಟಿದ ಇಸಾಕನನ್ನು ಬಲಿಕೊಡುವಂತೆ ಕರ್ತನು ಆಜ್ಞಾಪಿಸಿದಾಗ ಆತನ ಆಜ್ಞೆಗೆ ವಿಧೇಯನಾದನು (ಆದಿ. 22:1,2).

ದೇವಮಕ್ಕಳೇ, ದೇವರ ಆಜ್ಞೆ ಚಿಕ್ಕದಾಗಲಿ ದೊಡ್ಡದಾಗಲಿ ಅದು ಅಂತರ್ಯದಲ್ಲಿ ವೇದನೆ ತರುವಂಥದ್ದೇ ಆಗಿರಲಿ. ಅದಕ್ಕೆ ನೂರಕ್ಕೆ ನೂರರಷ್ಟು ವಿಧೇಯರಾಗಿ ನಡೆದುಕೊಳ್ಳಿರಿ. ಆಗ ದೇವರ ಆಶೀರ್ವಾದಕ್ಕೆ ಪಾತ್ರರಾಗುವಿರಿ.

*ನೆನಪಿಗೆ : ನೀವು ನಿಮ್ಮ ದೇವರಾದ ಯೆಹೋವನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಈಗ ನಿಮಗೆ ಬೋಧಿಸುವ ಆತನ ಆಜ್ಞೆಗಳನ್ನೆಲ್ಲಾ ಅನುಸರಿಸಿ ನಡೆದರೆ ಆತನು ಭೂಮಿಯ ಮೇಲಿರುವ ಎಲ್ಲಾ ಜನಾಂಗಗಳಿಗಿಂತಲೂ ನಿಮ್ಮನ್ನು ಉನ್ನತ ಸ್ಥಿತಿಗೆ ತರುವನು (ಧರ್ಮೋ. 28:1).*

ಜುಲೈ 23

# ಕರ್ತನಿಗೆ ಭಯಪಡಿರಿ!

ಬೆಳಿಗ್ಗೆ : ಕೀರ್ತನೆ 33,34
ಸಂಜೆ : ಅ.ಕೃ. 24

ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರಗಳವರೆಗೆ ಇರುವದು (ಲೂಕ. 1:50).

ಮನುಷ್ಯರಿಗೆ ಭಯಪಡಬೇಡಿರಿ. ಮನುಷ್ಯನಿಗೆ ಭಯಪಡುವ ಭಯ ಕಣ್ಣೀರನ್ನು ತರಿಸುವದು. ಪರಿಸ್ಥಿತಿಗಳಿಗೆ ಭಯಪಡಬೇಡಿರಿ. ದುಷ್ಟ ಮನುಷ್ಯರಿಗೆ ಮಂತ್ರವಾದಿಗಳಿಗೆ ಭಯಪಡಬೇಡಿರಿ. ಸೈತಾನನನ್ನು ಜಯಿಸಿದ ಮರಣವನ್ನು ಜಯಿಸಿದ ಕರ್ತನು ನಿಮ್ಮೊಂದಿಗಿರುವನು. ಒಂದೇ ಒಂದು ಭಯ ನಿಮ್ಮೊಳಗೆ ಇರಲಿ. ಅದುವೇ ಕರ್ತನಿಗೆ ಭಯಪಡುವ ಭಯ. ನಿಮ್ಮೊಳಗೆ ದೇವಭಯ ಇರುವದಾದರೆ, ಎಲ್ಲಾ ಪಾಪ ಭೋಗಗಳಿಗೆ ದೂರವಾಗಿರುವಿರಿ. ಪಾಪ ಮಾರ್ಗವನ್ನು ತ್ಯಜಿಸಿ ಪರಿಶುದ್ಧ ಮಾರ್ಗಕ್ಕೆ ಬರುವಿರಿ.

ದೇಶದಲ್ಲಿ ದೇವರಿಗೆ ಭಯಪಡುವ ಭಯ ಇರುವದಾದರೆ ತಪ್ಪುಗಳು ನಡೆಯುವದೇ ಇಲ್ಲ. ಇಂದು ದೇಶದ ನಾಯಕರೂ ಸಹ ದೇವರಿಗೆ ಭಯಪಡದೆ ಹಣದ ದಾಹದಿಂದ ಎಷ್ಟು ಹೇಯಕರವಾಗಿ ಲೂಟಿ ಮಾಡುತ್ತಿದ್ದಾರೆ. ದಿನನಿತ್ಯ ವಾರ್ತಾಪತ್ರಿಕೆಗಳಲ್ಲಿ ಕೊಲೆ, ದರೋಡೆ ಮುಂತಾದ ಕೆಟ್ಟ ಸಮಾಚಾರಗಳನ್ನು ಓದುತ್ತಿದ್ದೇವೆ. ದಿನದಿಂದ ದಿನಕ್ಕೆ ಜನರಲ್ಲಿ ದೇವರ ಭಯ ಕಡಿಮೆಯಾಗುತ್ತಿರುವದು. ದೇವರ ದಯೆ ಯಾರಿಗೆ ದೊರೆಯುತ್ತದೆ? ಸತ್ಯವೇದ ಹೇಳುವ ಪ್ರಕಾರ ದೇವರಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರದವರೆಗೂ ಇರುವದು (ಲೂಕ. 1:50). ಯೆಹೋವನ ಭಯವೇ ತಿಳುವಳಿಕೆಗೆ ಮೂಲ (ಜ್ಞಾನೋ.1:7). ದೇವಭಯ ತಿಳುವಳಿಕೆಗೆ ಮಾತ್ರ ಮೂಲವಲ್ಲ, ದಯೆಯನ್ನು ಪಡೆಯಲೂ ಇದು ಮೂಲವಾಗಿದೆ. ದೇವರಭಯ ದೇವರ ಪ್ರಸನ್ನತೆಯನ್ನು ತರುವದು. ಪಾಪಕ್ಕೆ ದೂರವಾಗುವಂತೆ ಮಾಡುವದು. ಯೋಸೇಫನಿಗೆ ದೇವರ ಅಪರಿಮಿತವಾದ ದಯೆಯು ಸಿಕ್ಕಿದ್ದರ ಕಾರಣ ಅವನಲ್ಲಿದ್ದ ದೇವಭಯ ವ್ಯಭಿಚಾರವನ್ನು ಬಿಟ್ಟು ಓಡುವಂತೆ ಮಾಡಿತು. ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನೋ ಅವನಿಗೆ ಉಚಿತವಾದ ಮಾರ್ಗವನ್ನು ಕರ್ತನು ಬೋಧಿಸುವನು (ಕೀರ್ತ. 25:12).

ದೇವಮಕ್ಕಳೇ, ದೇವರಿಗೆ ಭಯಪಡಿರಿ. ಆತನ ವಾಕ್ಯಗಳಿಗೆ ವಿಧೇಯರಾಗಿ ನಡೆದುಕೊಳ್ಳಿರಿ. ಆಗ ಕರ್ತನು ನಿಮ್ಮನ್ನು ಆಶೀರ್ವದಿಸುವನು. ಎಲ್ಲಾ ಕೆಡುಕುಗಳಿಂದ ತಪ್ಪಿಸಿ ಕಾಯುವನು.

*ನೆನಪಿಗೆ : ಸದ್ಭಕ್ತರಿಗೋಸ್ಕರ ನೀನು ಇಟ್ಟುಕೊಂಡಿರುವ ಮೇಲೂ ಆಶ್ರಿತರಿಗೋಸ್ಕರ ನೀನು ಎಲ್ಲರ ಮುಂದೆ ಮಾಡಿದ ಉಪಕಾರಗಳೂ ಎಷ್ಟೋ ವಿಶೇಷವಾಗಿವೆ. (ಕೀರ್ತ. 31:19).*



ಜುಲೈ 24

# ದೀನರಿಗೆ ದಯೆ!

ಬೆಳಿಗ್ಗೆ : ಕೀರ್ತನೆ 35,36
ಸಂಜೆ : ಅ.ಕೃ. 25

ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ (ಯಾಕೋಬ. 4:6).

ದೇವರು ಯಾರಿಗೆ ಒಲಿಯುವನು? ಹೌದು, ತಮ್ಮನ್ನು ತಗ್ಗಿಸಿಕೊಂಡು ದೇವರ ದಯೆಯನ್ನು ಬೇಡುವವರಿಗೆ ಆತನು ದಯೆ ತೋರಿಸುವನು. ಇದಕ್ಕೆ ಸತ್ಯವೇದದಲ್ಲಿ ಹೇರಳವಾದ ಉದಾಹರಣೆಗಳಿವೆ. ಅರಸನಾದ ಯೆಹೋಷಾಫಾಟನ ವಿರೋಧವಾಗಿ ಮೋವಾಬ್ಯರೂ, ಅಮ್ಮೋನಿಯರೂ ಯುದ್ಧಕ್ಕೆ ಬಂದಾಗ ಆ ಮಹಾ ಸಮೂಹವನ್ನು ನೋಡಿದ ಯೆಹೊಷಾಫಾಟನು ಬಹಳವಾಗಿ ಭಯಗೊಂಡು ತನ್ನ ಸ್ಥಿತಿಯನ್ನು ಅರಿತುಕೊಂಡವನಾಗಿ ತನ್ನನ್ನು ತಗ್ಗಿಸಿಕೊಂಡು ದೇವರ ಬಳಿ "ನಮ್ಮ ಮೇಲೆ ಬಂದ ಈ ಮಹಾಸಮೂಹದ ಮುಂದೆ ನಿಲ್ಲುವದಕ್ಕೆ ನಮ್ಮಲ್ಲಿ ಬಲವಿಲ್ಲ, ಏನು ಮಾಡಬೇಕೆಂಬದೂ ತಿಳಿಯದು. ನಮ್ಮ ಕಣ್ಣುಗಳು ನಿನ್ನನ್ನೇ ನೋಡುತ್ತವೆ" ಎಂದು ಪ್ರಾರ್ಥಿಸಿದನು (2 ಪೂ.ವೃ. 20:12). ಕರ್ತನು ಅವನ ಪ್ರಾರ್ಥನೆಯನ್ನು ಕೇಳಿ ಆ ಯುದ್ಧದಲ್ಲಿ ಅವನಿಗೆ ಜಯ ನೀಡಿದನೆಂದು ಸತ್ಯವೇದ ಹೇಳುತ್ತದೆ.

ಒಮ್ಮೆ ಇಬ್ಬರು ಕುರುಡರು ಯೇಸುಸ್ವಾಮಿಯ ಬಳಿ ಬಂದು ದಾವೀದನ ಕುಮಾರನೇ ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು. ಕರ್ತನು ಅವರ ಮೊರೆಯನ್ನು ಆಲಿಸಿ ಅವರಿಗೆ ದಯೆ ತೋರಿಸಿದನು. ಅವರಿಗೆ ದೃಷ್ಟಿಯನ್ನು ನೀಡಿದನು (ಮತ್ತಾ. 9:27,30). ಹಾಗೆಯೇ ಕಾನಾನ್ಯ ಸ್ತ್ರೀ ಒಬ್ಬಳು ಕರ್ತನ ಬಳಿ ಬಂದು ಅಯ್ಯಾ ನನ್ನ ಮಗಳು ಭಯಂಕರವಾದ ವ್ಯಾಧಿಗೆ ತುತ್ತಾಗಿ ವೇದನೆ ಪಡುತ್ತಿರುವಳು ಎಂದು ಮೊರೆಯಿಟ್ಟಾಗ ಕರ್ತನು ಅವಳ ಮೊರೆಯನ್ನು ಆಲಿಸಿ ಅವಳ ಮಗಳಿಗೆ ಪರಿಪೂರ್ಣವಾದ ಸ್ವಸ್ಥತೆಯನ್ನು ನೀಡಿದನು (ಮತ್ತಾ. 15:22–28). ಒಬ್ಬ ತಂದೆ ಮೂರ್ಛೆ ರೋಗದಿಂದ ಬಳಲುತ್ತಿದ್ದ ತನ್ನ ಮಗನಿಗಾಗಿ ಬೇಡಿಕೊಂಡಾಗ ಕರ್ತನು ಅವನ ಕೂಗನ್ನು ಆಲಿಸಿ ಅವನ ಮಗನಿಗೆ ಬೇಕಾದ ಬಿಡುಗಡೆಯನ್ನು ನೀಡಿದನು (ಮತ್ತಾ. 17:15–19).

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ ಸಮಸ್ಯೆಗಳಾ? ಹೋರಾಟಗಳಾ? ಬಿಡುಗಡೆ ನಾಯಕನ ಕಡೆಗೆ ನಿಮ್ಮ ಕಣ್ಣುಗಳನ್ನು ಎತ್ತಿರಿ. ಕರ್ತನು ನಿಮಗೆ ಬಿಡುಗಡೆ ನೀಡುವನು. ನಿಮ್ಮ ಸಮಸ್ಯೆಗಳನ್ನು ಪರಿಹರಿಸುವನು. ಯಜಮಾನನ ಕೈಯನ್ನು ದಾಸನ ಕಣ್ಣುಗಳೂ, ಯಜಮಾನಿಯ ಕೈಗಳನ್ನು ದಾಸಿಯ ಕಣ್ಣುಗಳೂ ನೋಡುವ ಪ್ರಕಾರವೇ ನಮ್ಮ ಕಣ್ಣುಗಳು ನಮ್ಮ ಯೆಹೋವ ದೇವರನ್ನು ನಿರೀಕ್ಷಿಸುತ್ತಾ ಆತನ ಕಟಾಕ್ಷವನ್ನು ನಿರೀಕ್ಷಿಸಿಕೊಂಡಿವೆ (ಕೀರ್ತ. 123:2).

*ನೆನಪಿಗೆ : ನಾವು ಆತನ ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿ. 4:16).*

ಜುಲೈ 25

## ರಕ್ಷಕನಾದ ದೇವರು!

ಬೆಳಿಗ್ಗೆ : ಕೀರ್ತನೆ 37,38,39
ಸಂಜೆ : ಅ.ಕೃ. 26

ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲುಸುವದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ಪ್ರಭಾವ, ಮಹತ್ವ, ಆಧಿಪತ್ಯ, ಅಧಿಕಾರಗಳು.... ಈಗಲೂ ಯಾವಾಗಲೂ ಇರಲಿ. ಆಮೆನ್ (ಯೂದ. 1:24–25).

ಈ ಮೇಲಿನ ವಾಕ್ಯಗಳಲ್ಲಿ ನಮ್ಮ ದೇವರ ನಾಲ್ಕು ವಿಶೇಷವಾದ ಗುಣಾತಿಶಯಗಳನ್ನು ಕಾಣುತ್ತೇವೆ. 1. ಆತನು ರಕ್ಷಕನಾದ ದೇವರು. 2. ಜ್ಞಾನವಂತನಾದ ದೇವರು, 3. ಎಡವದಂತೆ ಕಾಪಾಡುವ ದೇವರು, 4. ಕಡೆಯವರೆಗೆ ನೆಲೆಗೊಳಿಸುವ ದೇವರು. ಕರ್ತನ ಈ ನಾಲ್ಕು ಗುಣಗಳನ್ನು ಧ್ಯಾನಿಸೋಣ.

ರಕ್ಷಣೆ ಆತನ ಗುಣಾತಿಶಯಗಳಲ್ಲಿ ಒಂದಾಗಿದೆ. ಆತನು ತನ್ನ ಜನರನ್ನು ಪಾಪದಿಂದ ಬಿಡಿಸಿ ರಕ್ಷಿಸುವನು. ಶಾಪಗಳಿಂದ ರಕ್ಷಿಸುವನು. ವ್ಯಾಧಿಯಿಂದ ರಕ್ಷಿಸುವನು. ಪಿಶಾಚನ ಹಿಡಿತದಿಂದ ಬಿಡಿಸುವನು. ನಿತ್ಯನಾಶನದಿಂದ ತಪ್ಪಿಸುವನು. ಆತನು ನಮ್ಮನ್ನು ರಕ್ಷಿಸುವ ಸಲುವಾಗಿ ಹುಟ್ಟದೇ ಹೋಗಿದ್ದಿದ್ದರೆ ನಮ್ಮ ಸ್ಥಿತಿ ಏನಾಗಿರುತ್ತಿತ್ತು? ಕೃಪೆಯಿಂದಲೇ ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಿರುವೆವು. ಹಳೆ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರು ದಾಸತ್ವದ ನೊಗಕ್ಕೆ ಸಿಕ್ಕಿಹಾಕಿಕೊಂಡು ತಮ್ಮನ್ನು ರಕ್ಷಿಸುವಂತೆ ಬೇಡಿಕೊಂಡಾಗಲೆಲ್ಲಾ ಕರ್ತನು ಕೆಲವು ರಕ್ಷಕರನ್ನು ಎಬ್ಬಿಸಿದನು. ನ್ಯಾಯಾಧಿಪತಿಗಳನ್ನು ಪ್ರವಾದಿಗಳನ್ನು ಎಬ್ಬಿಸಿದನು. ಅವರು ಇಸ್ರಾಯೇಲ್ಯರನ್ನು ಅವರ ಶತ್ರುಗಳಿಂದ ಬಿಡಿಸಿ ಕಾಪಾಡಿದರು. ಆದರೆ ಯೇಸುಕ್ರಿಸ್ತನು ಪ್ರಪಂಚದ ರೀತಿಯ ಶತ್ರುಗಳಿಂದ ಅಲ್ಲ, ಸೈತಾನನಿಂದಲೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೈನ್ಯದಿಂದಲೂ ನಿಮಗೆ ಬಿಡುಗಡೆಯನ್ನು ನೀಡಿರುವನು. ಅದಕ್ಕಾಗಿಯೇ ಆತನು ಕಲ್ವಾರಿ ಶಿಲುಬೆಯಲ್ಲಿ ಆರುಗಂಟೆಗಳ ಕಾಲ ತೂಗುಹಾಕಲ್ಪಟ್ಟು ತನ್ನ ರಕ್ತದಿಂದ ಪಾತಾಳದ ಸೈನ್ಯಗಳ ಬಲವನ್ನು ಮುರಿದು ಹಾಕಿದನು. ರಕ್ಷಣೆ ಹೊಂದಿದವರನ್ನು ಅನುದಿನವೂ ಸಭೆಗೆ ಸೇರಿಸುತ್ತಾ ಇರುವನು.

ದೇವಮಕ್ಕಳೇ, ನಿಮಗೆ ನೀಡಿದ ರಕ್ಷಣೆಯಲ್ಲಿ ಸಂತೋಷಿಸಿರಿ. ರಕ್ಷಣೆಯನ್ನು ನೀಡಿದ ಕರ್ತನನ್ನು ಸ್ತುತಿಸಿರಿ. ನಿಮ್ಮ ಕುಟುಂಬಗಳಲ್ಲಿ ರಕ್ಷಣೆಯ ಧ್ವನಿ ಮೊಳಗಲಿ. ನಿಮ್ಮ ಕುಟುಂಬದ ಪ್ರತಿಯೊಬ್ಬರ ರಕ್ಷಣೆಗಾಗಿ ಪ್ರಾರ್ಥಿಸಿರಿ. ಆಗ ನಿಮ್ಮ ಕುಟುಂಬ ಒಂದು ಪುಟ್ಟ ಪರಲೋಕದಂತಿರುವದು. ಕುಟುಂಬ ಸಮೇತವಾಗಿ ಪರಲೋಕದಲ್ಲಿ ಕಾಣಲ್ಪಡುವಿರಿ.

*ನೆನಪಿಗೆ : ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ. ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ (ಅ.ಕೃ. 4:12).*



ಜುಲೈ 26

## ಜ್ಞಾನವಂತ ದೇವರು!

ಬೆಳಿಗ್ಗೆ : ಕೀರ್ತನೆ 40,41,42
ಸಂಜೆ : ಅ.ಕೃ. 27:1–26

ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ. ಪ್ರಭಾವ, ಮಹತ್ವ, ಆಧಿಪತ್ಯ, ಅಧಿಕಾರ.... ಈಗಲೂ ಯಾವಾಗಲೂ ಇರಲಿ (ಯೂದ. 1:24,25).

ಕರ್ತನ ಜ್ಞಾನದ ಕುರಿತು ಅಪೊ. ಪೌಲನು ಆಶ್ಚರ್ಯಪಟ್ಟು “ಆಹಾ, ದೇವರ ಐಶ್ವರ್ಯವೂ, ಜ್ಞಾನವೂ, ವಿವೇಕವೂ ಎಷ್ಟೋ ಅಗಾಧ” (ರೋಮಾ. 11:33) ಎಂದು ಹೇಳುತ್ತಾನೆ. ಸರ್ವ ಲೋಕಗಳನ್ನು ಸೃಷ್ಟಿಸಿದ ಆತನ ಜ್ಞಾನವನ್ನು ವರ್ಣಿಸಲು ಸಾಧ್ಯವಿಲ್ಲ. ತಾಯಿಯ ಗರ್ಭದಲ್ಲಿ ಒಂದು ಚಿಕ್ಕ ಕಣದ ಮೂಲಕ ಒಬ್ಬ ಮನುಷ್ಯನನ್ನು ಎಷ್ಟು ಅದ್ಭುತವಾಗಿ ಸೃಷ್ಟಿಸುವನು. ಈ ರಹಸ್ಯವನ್ನು ಯಾವ ವಿಜ್ಞಾನಿಯೂ ಅರಿತುಕೊಳ್ಳಲಾರನು. “ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ, ತನ್ನ ವಿವೇಕದಿಂದ ಆಕಾಶ ಮಂಡಲವನ್ನು ಹರಡಿದ್ದಾನೆ” (ಯೆರೆ 51:15) ಎಂದು ಸತ್ಯವೇದ ಹೇಳುತ್ತದೆ.

ಜ್ಞಾನವಂತನಾದ ದೇವರು ಮನುಷ್ಯನನ್ನು ಸೃಷ್ಟಿಸಿದ್ದು ಮಾತ್ರವಲ್ಲ, ಅವನಿಗೆ ಉಪದೇಶ ನೀಡಿ ನೀನು ನಡೆಯಬೇಕಾದ ಮಾರ್ಗದಲ್ಲಿ ನಡೆಸುವೆನು. ನಿನ್ನನ್ನು ಕಟಾಕ್ಷಿಸಿ ಆಲೋಚನೆ ಹೇಳುವೆನು ಎನ್ನುತ್ತಾನೆ (ಕೀರ್ತ. 32:8, ಯೆಶಾ 48:17). ಕರ್ತನು ನಿಮಗೆ ಬುದ್ಧಿಯನ್ನೂ, ಜ್ಞಾನವನ್ನೂ ನೀಡುವನು. ಬೋಧಕರ ಮೂಲಕವಾಗಿ, ತಂದೆ ತಾಯಿಗಳ ಮೂಲಕವಾಗಿ, ಉಪಾಧ್ಯಾಯರ ಮೂಲಕವಾಗಿ ನೀವು ಜ್ಞಾನವನ್ನು ಪಡೆಯುವಿರಿ. ಜ್ಞಾನವೆಂದರೆ ಏನು? ಒಬ್ಬನು ತಾನು ಪಡೆದುಕೊಂಡ ತಿಳುವಳಿಕೆಯನ್ನು ಅಥವಾ ಅರಿವನ್ನು ಬುದ್ಧಿವಂತಿಕೆಯಿಂದ, ಚಾತುರ್ಯದಿಂದ ಉಪಯೋಗಿಸಿಕೊಳ್ಳುವದೇ ವಿವೇಕದಿಂದ ತುಂಬಿದ ಜ್ಞಾನವಾಗಿದೆ. ಆದ್ದರಿಂದಲೇ ಕರ್ತನು ಜ್ಞಾನವನ್ನು ಬೋಧಿಸುವ ಆತ್ಮನ ವರವನ್ನು ನಮಗೆ ನೀಡುವನು. ಆತನ ಆ ಜ್ಞಾನದಿಂದ, ಈ ವರದ ಮೂಲಕವಾಗಿ ಬೇಕಾದ ಜ್ಞಾನವನ್ನು ಕರ್ತನು ನಮಗೆ ಬೋಧಿಸುವನು, ನೀಡುವನು.

ದೇವಮಕ್ಕಳೇ, ದೇವರ ಬಳಿಯಲ್ಲಿ ಜ್ಞಾನವನ್ನು ಕೇಳಿ ಪಡೆದುಕೊಳ್ಳಿರಿ. ದೈವೀಕ ಜ್ಞಾನವೂ ಉಂಟು, ಜ್ಞಾನದ ಐಶ್ವರ್ಯವೂ ಉಂಟು. ಪರಲೋಕದ ತಂದೆಯ ಬಳಿಯಿಂದ ಕೃಪೆಯಾಗಿ ಆ ಜ್ಞಾನವನ್ನು ನಿಮಗೆ ಆತನು ನೀಡುವನು. ಸತ್ಯವೇದದ ಮೂಲಕ ಕರ್ತನು ನಿಮ್ಮನ್ನು ಜ್ಞಾನವಂತರನ್ನಾಗಿಸುವನು.

*ನೆನಪಿಗೆ : ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ. ಅದು ಅವನಿಗೆ ದೊರಕುವದು. ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ (ಯಾಕೋ. 1:5).*

## ಜುಲೈ 27 ಎಡವದಂತೆ ಕಾಯುವ ದೇವರು!

ಬೆಳಿಗ್ಗೆ : ಕೀರ್ತನೆ 43,44,45
ಸಂಜೆ : ಅ.ಕೃ. 27:27–44

ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ, ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು... ನಿಲ್ಲಿಸುವದಕ್ಕೂ ಶಕ್ತನು (ಯೂದ. 1:24).

ಈ ಪ್ರಪಂಚದಲ್ಲಿ ಎಡವಿ ಬೀಳಲು ಅನೇಕ ಮಾರ್ಗಗಳು ಇರುವದು. ನಡೆಯುವಾಗ, ಕಲ್ಲು ತಗಲಿ ಎಡವಿ ಬೀಳಬಹುದು. ನೀರಿನಿಂದ ತೊಯ್ದ ಜಾಗದಲ್ಲಿ ನಡೆಯುವಾಗ ಕಾಲು ಜಾರಿ ಬೀಳುವವರೂ ಉಂಟು. ಹೀಗೆ ಎಡವಿಬಿದ್ದಾಗ ಇತರರ ಸಹಾಯದಿಂದಲೋ, ನಮ್ಮ ಬಲದಿಂದಲೋ ಮೇಲೆ ಎದ್ದೇಳಬಹುದು. ಆದರೆ ಪರಿಶುದ್ಧವಾದ ಮಾರ್ಗದಿಂದ, ಆತ್ಮೀಕ ಜೀವಿತದಲ್ಲಿ ಎಡವಿ ಬೀಳುವದು ಅಪಾಯಕಾರಿಯಾದದ್ದು, ಆದರೆ ಕರ್ತನನ್ನು ದೃಢವಾಗಿ ಹಿಡಿದುಕೊಳ್ಳುವವರು ಆತನನ್ನು ನಂಬಿರುವದರಿಂದ ಕರ್ತನು ಅವರನ್ನು ಎಡವದಂತೆ ಜಾರದಂತೆ ಕಾಪಾಡುವನು. ಕಡೆಯವರೆಗೆ ನೆಲೆಗೊಳಿಸುವನು. “ದೇವರೇ ನನ್ನಿಂದ ಏನನ್ನೂ ಮಾಡಲು ಸಾಧ್ಯವಿಲ್ಲ. ನನ್ನ ಜೀವಿತದ ಹೊಣೆಯನ್ನು ನೀನು ತೆಗೆದುಕೋ. ಕಡೆಯವರೆಗೆ ನೆಲೆನಿಲ್ಲಿಸು” ಎಂದು ಒಂದು ಚಿಕ್ಕ ಪ್ರಾರ್ಥನೆ ಮಾಡಿದರೆ ಸಾಕು, ಕರ್ತನು ನೀವು ಎಡವಿ ಬೀಳದಂತೆ ಕಾಪಾಡುವನು.

ಜ್ಞಾನಿಯಾದ ಸೊಲೊಮೋನನು ಕರ್ತನ ಮೇಲಿನ ನಂಬಿಕೆಯನ್ನು ಮೊಟಕುಗೊಳಿಸಿ ತನ್ನ ಜ್ಞಾನದ ಮೇಲೆಯೇ ಆತುಕೊಂಡಿದ್ದನು. ಅವನಿಗೆ ರಾಜವಂಶದವರಾದ ಏಳುನೂರು ಮಂದಿ ಪತ್ನಿಯರಲ್ಲದೆ, ಮುನ್ನೂರು ಮಂದಿ ಉಪಪತ್ನಿಯರು ಇದ್ದರು. ಈ ಸ್ತ್ರೀಯರು ಅವನ ಮನಸ್ಸನ್ನು ಕೆಡಿಸಿಬಿಟ್ಟರು. ಅವನು ವೃದ್ಧನಾದಾಗ ಅವನ ಹೃದಯವನ್ನು ಅನ್ಯದೇವತೆಗಳ ಕಡೆಗೆ ತಿರುಗಿಸಿದರು. ಅವನು ತನ್ನ ದೇವರಾದ ಯೆಹೋವನಲ್ಲಿಟ್ಟಿದ್ದ ಯಥಾರ್ಥ ಭಕ್ತಿಯನ್ನು ಕಳೆದುಕೊಂಡನು. ತನ್ನ ತಂದೆಯಾದ ದಾವೀದನು ಪೂರ್ಣ ಮನಸ್ಸಿನಿಂದ ಯೆಹೋವನನ್ನು ಸೇವಿಸಿದಂತೆ ಅವನು ಸೇವಿಸಲಿಲ್ಲ (1 ಅರಸು. 11:3,4,6). ಅನ್ಯಸ್ತ್ರೀಯರ ಕುರಿತು ಎಚ್ಚರಿಕೆಯಿಂದ ಇರಿ. ನಿಮ್ಮ ವೃತ್ತಿಯಲ್ಲಿ ಅನ್ಯರು ಭಾಗಿಗಳಾಗಿರುವಾಗ ಸ್ವಲ್ಪಸ್ವಲ್ಪವಾಗಿ ನೀವು ಮಾರ್ಗತಪ್ಪಿಹೋಗುವ ಸಂಭವವಿರುತ್ತದೆ. ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ಎಂದು ಸತ್ಯವೇದ ಎಚ್ಚರಿಸುತ್ತದೆ (2 ಕೊರಿಂ.6:14,15).

ದೇವಮಕ್ಕಳೇ, ಇಚ್ಛೆಗಳು, ಹಣದಾಶೆ, ಹೆಮ್ಮೆ ನಿಮ್ಮನ್ನು ಮಾರ್ಗತಪ್ಪುವಂತೆ ಮಾಡುವದು. ಅವಸರದ ಮಾರ್ಗದಲ್ಲಿ ನಡೆಯುವವರು ಎಡವಿ ಬೀಳುವರು. ಆದ್ದರಿಂದ ಇಂದೇ ನಿಮ್ಮ ಜೀವಿತವನ್ನು ಕರ್ತನ ಕೈಗಳಲ್ಲಿ ಒಪ್ಪಿಸಿಕೊಡಿರಿ ನನ್ನ ಹೆಜ್ಜೆ ಜಾರದಂತೆ, ಎಡವದಂತೆ ನಿನ್ನ ಮಾರ್ಗಗಳಲ್ಲಿ ಸ್ಥಿರಪಡಿಸು (ಕೀರ್ತ. 17:5) ಎಂದು ಪ್ರಾರ್ಥಿಸಿರಿ. ನಿಮ್ಮ ಕಾಲುಗಳನ್ನು ಮಾತ್ರವಲ್ಲ, ನಿಮ್ಮ ಆತ್ಮಗಳನ್ನೂ ಎಡವದಂತೆ ಕಾಪಾಡುವನು.

*ನೆನಪಿಗೆ : ನೀನು ನನ್ನ ಕಾಲುಗಳಿಗೆ ವಿಶಾಲ ಸ್ಥಳವನ್ನು ಕೊಟ್ಟದ್ದರಿಂದ ನನ್ನ ಹರಡುಗಳು ಕದಲುವದಿಲ್ಲ (ಕೀರ್ತ. 18:36).*



## ಜುಲೈ 28 ಅಂತ್ಯದವರೆಗೆ ಕಾಯುವವನು!

ಬೆಳಿಗ್ಗೆ : ಕೀರ್ತನೆ 46,47,48
ಸಂಜೆ : ಅ.ಕೃ. 28

ನಿಮ್ಮನ್ನು ತನ್ನ ಪ್ರಭಾವದ ಸಮಕ್ಷಮದಲ್ಲಿ ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನು (ಯೂದ. 1:24).

ನಮ್ಮ ದೇವರು ಯಾರು? ಪ್ರಪಂಚದ ಜೀವಿತದಲ್ಲೆಲ್ಲಾ ಪಾಪವು ನಿಮ್ಮನ್ನು ಮುಟ್ಟದಂತೆ ರಕ್ಷಿಸಿ ನಡೆಸಲು ಶಕ್ತನಾದಾತನು. ತನ್ನ ಮಹಿಮೆಯಾದ ಸನ್ನಿದಿಯಲ್ಲಿ ನಿರ್ದೋಷಿಗಳಾಗಿ ಹರ್ಷದೊಡನೆ ನಿಲ್ಲಿಸುವಾತನಾಗಿರುವನು. ಆತನು ಯುಗಯುಗಾಂತರಗಳಲ್ಲಿಯೂ ನಮ್ಮ ದೇವರು, ನಿರಂತರವೂ ನಮ್ಮನ್ನು ನಡೆಸುವವನಾಗಿದ್ದಾನೆ (ಕೀರ್ತ. 48:14). ನಾನು ಯಾವ ದುಷ್ಕೃತ್ಯವನ್ನೂ ಮಾಡದಂತೆ ಕರ್ತನು ನನ್ನನ್ನು ಕಾಪಾಡಿ ತನ್ನ ಬಳಿಗೆ ಪರಲೋಕ ರಾಜ್ಯಕ್ಕೆ ಸೇರಿಸುವನು” (2ತಿಮೊ. 4:18) ಎಂದು ಅಪೊ. ಪೌಲನು ಹೇಳುತ್ತಾನೆ.

ಒಮ್ಮೆ ಅಲ್ಪ್ಸ್ ಪರ್ವತವನ್ನು ಸುತ್ತಿ ತೋರಿಸಲು ಒಬ್ಬ ಶ್ರೀಮಂತ ಪ್ರವಾಸಿಯನ್ನು ಒಬ್ಬ ಮಾರ್ಗದರ್ಶಿ ಕರೆದುಕೊಂಡುಹೋದನು. ಆ ಪರ್ವತವನ್ನು ಹತ್ತಲು ಆ ಪ್ರವಾಸಿಗೆ ಬಹಳ ಭಯವಾಯಿತು. ಆದರೆ ಆ ಮಾರ್ಗದರ್ಶಿ ತನ್ನ ದೃಢವಾದ ಕೈಗಳಿಂದ ಆ ಶ್ರೀಮಂತನ ಕೈಗಳನ್ನು ಹಿಡಿದು ಹತ್ತಲಾರಂಭಿಸಿದನು. ಸ್ವಲ್ಪ ದೂರ ಹೋದ ಮೇಲೆ ಆ ಶ್ರೀಮಂತನು ಕೆಳಗೆ ನೋಡಲಾಗಿ, ಅವನೊಳಗೆ ಎಲ್ಲಿಲ್ಲದ ಭಯ ಉಂಟಾಯಿತು. ಕೆಳಗೆ ಬಿದ್ದರೆ ಒಂದು ಮೂಳೆಯಾದರೂ ಸಿಗುತ್ತಿರಲಿಲ್ಲ. ಆಗ ಅವನು “ಇನ್ನು ನನ್ನಿಂದ ಮೇಲೇರಲು ಸಾಧ್ಯವಿಲ್ಲ. ಸಾಕು ನಾನು ಬಿದ್ದು ಹೋಗುತ್ತೇನೆ” ಎಂದನು. ಆಗ ಆ ಮಾರ್ಗದರ್ಶಿ “ಅಯ್ಯಾ ನಾನು ಸುಮಾರು ಮೂವತ್ತು ವರ್ಷಗಳಿಂದ ಈ ಆಲ್ಪ್ಸ್ ಪರ್ವತಕ್ಕೆ ಬರುವ ಪ್ರವಾಸಿಗಳಿಗೆ ಮಾರ್ಗದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿರುವೆನು. ಸಾವಿರಾರು ಜನರನ್ನು ಕರೆದೊಯ್ದಿದ್ದೇನೆ. ಆದರೆ ಒಬ್ಬರಾದರೂ ನನ್ನ ಕೈಯಿಂದ ಜಾರಿಬಿದ್ದಿಲ್ಲ” ಎಂದು ತನ್ನ ಬಲವಾದ ಹಸ್ತಗಳನ್ನು ತೋರಿಸಿದನು. ಆಗ ಆ ಶ್ರೀಮಂತನ ಭಯವೆಲ್ಲಾ ಮಾಯವಾಯಿತು.

ದೇವಮಕ್ಕಳೇ, ಒಬ್ಬ ಸಾಮಾನ್ಯ ಮನುಷ್ಯನ ಕೈಗಳು ಇಷ್ಟು ಬಲವುಳ್ಳದ್ದಾಗಿರುವದಾದರೆ ಕರ್ತನ ಕೈಗಳು ಇನ್ನೂ ಎಷ್ಟೋ ಅಧಿಕವಾದ ಬಲವುಳ್ಳದ್ದಾಗಿರುವದಲ್ಲವೇ? ನಿಮ್ಮ ಕಣ್ಣುಗಳನ್ನು ಕರ್ತನ ಕಡೆಗೆ ಎತ್ತಿರಿ. ಇಂದು ಇರುವ ಕಷ್ಟಗಳು, ಚಿಂತೆಗಳಿಂದ ಸೋತುಹೋಗಿ ಈ ಕ್ರಿಸ್ತೀಯ ಓಟವನ್ನು ನನ್ನಿಂದ ಓಡಿ ಮುಗಿಸಲಾಗದು ಎಂದು ಅಧೈರ್ಯ ಪಡದಿರಿ. ಕರ್ತನ ಕೈಗಳಲ್ಲಿ ನಿಮ್ಮನ್ನು ಪೂರ್ಣವಾಗಿ ಒಪ್ಪಿಸಿಕೊಟ್ಟು ಧೈರ್ಯದಿಂದ ಮುಂದೆ ಸಾಗಿರಿ. ಕರ್ತನು ನಿಶ್ಚಯವಾಗಿ ನಿಮ್ಮನ್ನು ಗುರಿಮುಟ್ಟಿಸುವನು. ಪರಲೋಕ ರಾಜ್ಯವೇ ನಿಮ್ಮ ಗುರಿಯಾಗಿರಲಿ.

*ನೆನಪಿಗೆ : ಸ್ಥಿರ ಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ. ಅವನಿಗೆ ನಿನ್ನಲ್ಲಿ ಭರವಸವಿದೆ (ಯೆಶಾ. 26:3).*

ಜುಲೈ
29

## ಹೇರಳವಾಗಿ ದಯಪಾಲಿಸುವ ದೇವರು!

ಬೆಳಿಗ್ಗೆ : ಕೀರ್ತನೆ 49, 50
ಸಂಜೆ : ರೋಮಾ 1

ನಮ್ಮ ಅನುಭೋಗಕ್ಕೋಸ್ಕರ ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರ ಮೇಲೆ ನಿರೀಕ್ಷೆಯನ್ನಿಡಬೇಕೆಂದು ಆಜ್ಞಾಪಿಸು (1 ತಿಮೊ. 6:17–19).

ಈ ಮೇಲಿನ ವಾಕ್ಯದಲ್ಲಿ ದೇವರನ್ನು ಕುರಿತು ಎರಡು ಕಾರ್ಯಗಳು ಸೂಚಿಸಲ್ಪಟ್ಟಿರುವದು. ಮೊದಲನೆಯದಾಗಿ ನಾವು ಅನುಭವಿಸುವಂತೆ ಸಕಲವನ್ನೂ ಹೇರಳವಾಗಿ ನೀಡುವ ದೇವರು, ಎರಡನೆಯದಾಗಿ ಆತನು ನಂಬಿಕೆಗೆ ಯೋಗ್ಯನಾದ ಜೀವವುಳ್ಳ ದೇವರು.

ದೇವರು ಮನುಷ್ಯನನ್ನು ಕಡೆಯದಾಗಿ ಸೃಷ್ಟಿಸಿದರೂ ಅವನಿಗೆ ಏನೇನು ಬೇಕೆಂದು ಅರಿತು ಅವನ ಅಗತ್ಯತೆಗಳನ್ನೆಲ್ಲಾ ಮೊದಲ ಆರು ದಿನಗಳಲ್ಲಿ ಸೃಷ್ಟಿಸಿದನು. ಸೂರ್ಯ, ಚಂದ್ರ, ನಕ್ಷತ್ರಗಳನ್ನು ಸೃಷ್ಟಿಸಿದನು. ಅವನ ಆಹಾರಕ್ಕಾಗಿ ಫಲಕೊಡುವ ವೃಕ್ಷಗಳನ್ನು, ಸುಂದರವಾದ ಪುಷ್ಪಗಳನ್ನು, ಮೃಗ ಪಕ್ಷಿಸಂಕುಲಗಳನ್ನು ಸೃಷ್ಟಿಸಿದನು. ಈ ಪ್ರಪಂಚದಲ್ಲಿ ನಾವು ಅನುಭವಿಸುವದಕ್ಕಾಗಿ ಸಂತೋಷವಾಗಿರುವದಕ್ಕಾಗಿ ಸಕಲವನ್ನೂ ಸೃಷ್ಟಿಸಿದನು. ಆದರೆ ಮನುಷ್ಯನ ಪಾಪದ ನಿಮಿತ್ತ ಶಾಪಗಳು, ವ್ಯಾಧಿಗಳು ಮರಣವೂ ಬಂದಾಗ, ಆಗಲೂ ಅವನಿಗೆ ಒಳ್ಳೆಯದನ್ನೇ ಮಾಡಬೇಕೆಂದು ಬಯಸಿ ಕಲ್ವಾರಿ ಶಿಲುಬೆಯಲ್ಲಿ ಪಾಪಕ್ಷಮಾಪಣೆಯನ್ನೂ, ದೈವೀಕ ಸ್ವಸ್ಥತೆಯನ್ನೂ, ನಿತ್ಯ ಜೀವವನ್ನೂ ನೀಡಿದನು. ಶಿಲುಬೆಯನ್ನು ದೃಷ್ಟಿಸಿ ನೋಡುವಾಗ ಕರ್ತನು ನನಗಾಗಿ ಎಲ್ಲವನ್ನೂ ಮಾಡಿ ಮುಗಿಸಿದನು ಎಂಬ ಸತ್ಯವನ್ನು ತಿಳಿಯುತ್ತೇವೆ. ಆದ್ದರಿಂದಲೇ ಕೀರ್ತನೆಗಾರನು ಯೆಹೋವನು ನನ್ನ ಕಾರ್ಯವನ್ನು ಸಿದ್ಧಿಗೆ ತರುವನು. ಯೆಹೋವನೇ ನಿನ್ನ ಕೃಪೆಯು ಶಾಶ್ವತವಾದದ್ದು ಎಂದು ಹೇಳುತ್ತಾನೆ (ಕೀರ್ತ. 138:8). ಒಂದು ದಿನ ಈ ಲೋಕದ ಯಾತ್ರೆಯನ್ನು ಮುಗಿಸಿ ಪರಲೋಕಕ್ಕೆ ಹೋಗುವಾಗ ಅಲ್ಲಿಯೂ ಕರ್ತನು ನಮಗಾಗಿ ಎಲ್ಲವನ್ನೂ ಮುಗಿಸಿರುವದನ್ನು ಕಾಣುವೆವು. ಕ್ರಿಸ್ತನು ಇರುವ ಸ್ಥಳದಲ್ಲಿ ನಾವೂ ವಾಸಮಾಡುವಂತೆ ಬಿಡಾರಗಳನ್ನು ಸಿದ್ಧಮಾಡಿರುವದನ್ನು ಕಾಣುತ್ತೇವೆ (ಯೋಹಾ. 14:2,3).

ದೇವಮಕ್ಕಳೇ, ನಿಮಗೆ ಜ್ಞಾನ ಬೇಕೇ? ಅಭಿವೃದ್ಧಿ ಹೊಂದಬೇಕೇ? ಮಾಡುವ ವೃತ್ತಿಯಲ್ಲಿ ಏಳಿಗೆ ಹೊಂದಬೇಕೆ? ಆಂತರ್ಯದಲ್ಲಿ ಸಮಾಧಾನ ಬೇಕೇ? ಕುಟುಂಬದಲ್ಲಿ ಸಂತೋಷ ಬೇಕೇ? ಇಂದೇ ಕರ್ತನ ಬಳಿಗೆ ಬನ್ನಿ. ಆತನ ಆಜ್ಞೆಗಳಿಗೆ ವಿಧೇಯರಾಗಲು ನಿಮ್ಮನ್ನು ಪೂರ್ಣ ಮನಸ್ಸಿನಿಂದ ಕರ್ತನಿಗೆ ಒಪ್ಪಿಸಿಕೊಡಿರಿ. ಕರ್ತನು ನಿಮಗಾಗಿ ಎಲ್ಲವನ್ನೂ ಮಾಡಿ ಮುಗಿಸಿರುವದರಿಂದ ನಿಶ್ಚಯವಾಗಿ ನಿಮ್ಮನ್ನು ಆಶೀರ್ವದಿಸುವನು.

*ನೆನಪಿಗೆ : ಅವರು ಒಳ್ಳೇಯದನ್ನು ಮಾಡುವವರೂ, ಸತ್ಕಾರ್ಯಗಳಲ್ಲಿ ಐಶ್ವರ್ಯವಂತರೂ, ದಾನ ಧರ್ಮಗಳನ್ನು ಮಾಡುವವರೂ, ಪರೋಪಕಾರ ಮಾಡುವವರೂ ಆಗಿರಬೇಕೆಂದು ಅವರಿಗೆ ಆಜ್ಞಾಪಿಸು (1 ತಿಮೊ. 6:18,19).*



ಜುಲೈ
30

## ಜೀವವುಳ್ಳ ದೇವರು!

ಬೆಳಿಗ್ಗೆ : ಕೀರ್ತನೆ 51,52,53
ಸಂಜೆ : ರೋಮಾ 2

ನಮಗೆ ಎಲ್ಲವನ್ನೂ ಹೇರಳವಾಗಿ ದಯಪಾಲಿಸುವ ದೇವರು (1 ತಿಮೊ. 6:17).

ನಮ್ಮ ದೇವರು ಜೀವವುಳ್ಳ ದೇವರು. ಜೀವವಿರಬೇಕೆಂತಲೂ, ಅದು ಪರಿಪೂರ್ಣವಾಗಿರಬೇಕೆಂತಲೂ ಬಂದ ದೇವರು. ಮನುಷ್ಯನನ್ನು ಸೃಷ್ಟಿಸಿ ಅವನ ಮೂಗಿನಲ್ಲಿ ತನ್ನ ಶ್ವಾಸವನ್ನು ಊದಿದಾಗ, ಕರ್ತನ ಜೀವ ಅವನೊಳಗೆ ಪ್ರವೇಶಿಸಿತು. ಅವನು ಜೀವಾತ್ಮನಾದನು. ಈ ಪ್ರಪಂಚದಲ್ಲಿ ಜೀವಿಸಿರುವ ಎಲ್ಲಾ ಮನುಷ್ಯರಿಗೂ ಜೀವದಿಂದಿರುವದಕ್ಕಾಗಿ, ಪ್ರಾಣವನ್ನು ಕೊಟ್ಟಿರುವನು. ಆದರೆ ಶಿಲುಬೆಯ ಬಳಿ ಬಂದು, ಕ್ರಿಸ್ತಯೇಸುವಿನ ರಕ್ತದಿಂದ ತೊಳೆಯಲ್ಪಟ್ಟು, ಆತನನ್ನು ನಂಬುವ ಪ್ರತಿಯೊಬ್ಬರಿಗೂ ನಿತ್ಯಜೀವವನ್ನು ಅಂದರೆ ಎಂದಿಗೂ ಅಳಿದುಹೋಗದ ಜೀವವನ್ನು ಕೊಟ್ಟಿರುವನು. ಅದು ಆತ್ಮದಲ್ಲಿರುವ ಜೀವ.

ಮಾರ್ಥಳೂ, ಮರಿಯಳೂ ತನ್ನ ಸಹೋದರನಾದ ಲಾಜರನು ಸತ್ತುಹೋದನೆಂದು ದುಃಖಿಸಿದಾಗ ಕ್ರಿಸ್ತಯೇಸು ಅವರನ್ನು ನೋಡಿ "ನಾನೇ ಪುನರುತ್ಥಾನವೂ, ಜೀವವೂ, ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ" ಅಂದನು (ಯೋಹಾ. 11:25,26). ಜನರು ವ್ಯಾಧಿಗೆ ಒಳಗಾದಾಗ ವೈದ್ಯರನ್ನು ನಂಬಿ ಆಸ್ಪತ್ರೆಗಳಿಗೆ ಓಡುವರು. ವೈದ್ಯರು ತಾತ್ಕಾಲಿಕವಾಗಿ ಮಾತ್ರ ಸಹಾಯ ಮಾಡಲು ಸಾಧ್ಯವೇ ಹೊರತು ನಿರಂತರವಾಗಿ ಈ ಭೂಮಿಯಲ್ಲಿ ಜೀವಿಸುವಂತೆ ಮಾಡಲು ಸಾಧ್ಯವಿಲ್ಲ. ಆದರೆ ಕರ್ತನನ್ನು ಹುಡುಕುವಾಗ, ಆತನು ವ್ಯಾಧಿಯನ್ನು ನೀಗಿಸಿ ಆರೋಗ್ಯ ನೀಡುವನು. ಮಾತ್ರವಲ್ಲ, ಆತ್ಮವು ನಿರಂತರವಾಗಿ ಜೀವಿಸುವಂತೆ ನಿತ್ಯಜೀವವನ್ನು ದಯಪಾಲಿಸುವನು. ದೇವರ ಮಕ್ಕಳು ಮರಣವನ್ನು ಜಯವಾಗಿ ಮಾರ್ಪಡಿಸುವರು. ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಪಾತಾಳವೇ ನಿನ್ನ ಜಯವೆಲ್ಲಿ? ಎಂದು ಜಯಘೋಷ ಮಾಡುವರು. ಈ ನಂಬಿಕೆಯನ್ನು ಕೊಡುವದಕ್ಕಾಗಿಯೇ ಕ್ರಿಸ್ತನು ಮರಣವನ್ನು ದಾಟಿ ಪುನರುತ್ಥಾನ ಹೊಂದಿದನು. ಇಂದು ಆತನ ಪುನರುತ್ಥಾನದ ಶಕ್ತಿ ನಿಮ್ಮ ಮೇಲೆ ಇಳಿದುಬರಲಿ.

ದೇವಮಕ್ಕಳೇ, ಇಂದು ಕ್ರಿಸ್ತನ ಬಳಿ "ದೇವರೇ, ನನ್ನನ್ನು ನಿನ್ನ ಜೀವದಿಂದ ತುಂಬಿಸು. ನಿನ್ನ ಪುನರುತ್ಥಾನದ ಶಕ್ತಿ ನನ್ನ ಮೇಲೆ ಇಳಿದುಬರಲಿ. ನಿತ್ಯ ಜೀವವನ್ನು ನನಗೆ ನೀಡು" ಎಂದು ಕೇಳಿರಿ. ಆಗ ಕ್ರಿಸ್ತನ ಜೀವ ನಿಮ್ಮೊಳಗೆ ಬಂದು ನಿಮ್ಮನ್ನು ಉಜ್ಜೀವಿಸುವದು. ಹಿಜ್ಕೀಯನ ಜೀವಿತದಲ್ಲಿ ನಡೆದಂಥ ಅದ್ಭುತ ನಿಮ್ಮ ಜೀವಿತದಲ್ಲಿಯೂ ಕರ್ತನು ನಡೆಸುವನು.

*ನೆನಪಿಗೆ : ನಾನು ಆಕಾಶದ ಕಡೆಗೆ ಕೈಯೆತ್ತಿ ನಾನು ಸದಾಕಾಲ ಜೀವಿಸುವವನೆಂಬದು ಎಷ್ಟು ನಿಶ್ಚಯವೋ ಅಷ್ಟು ಖಂಡಿತವಾಗಿ ಪ್ರಮಾಣ ಮಾಡುವೆನು (ಧರ್ಮೋ. 32:40).*

ಜುಲೈ
31

# ತಾಳ್ಮೆಯುಳ್ಳ ದೇವರು!

ಬೆಳಿಗ್ಗೆ : ಕೀರ್ತನೆ 54,55,56
ಸಂಜೆ : ರೋಮ 3

"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ" (ಯಾಕೋಬ 4:6).

ಒಬ್ಬನು ದೀನತೆಯನ್ನು ಕಲಿತುಕೊಳ್ಳಬೇಕೆಂದರೆ ಅದನ್ನು ಯೇಸುಕ್ರಿಸ್ತನಿಂದ ಮಾತ್ರವೇ ಕಲಿತುಕೊಳ್ಳಲು ಸಾಧ್ಯ. ನಾನು ಸಾತ್ವಿಕನೂ, ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ ಎಂದು ಪ್ರೀತಿಯಿಂದ ಕರೆಯುತ್ತಾನೆ (ಮತ್ತಾ. 11:29). ಹಾಗೆ ನೀವು ತಾಳ್ಮೆಯನ್ನು ಕಲಿತುಕೊಳ್ಳುವಿರಾದರೆ ತಾಳ್ಮೆಯಿಂದ ಬರುವ ಸಕಲ ಆಶೀರ್ವಾದಗಳನ್ನೂ ಸ್ವಾಸ್ಥ್ಯವಾಗಿ ಪಡೆಯುವಿರಿ.

ನಾಲ್ಕು ಸುವಾರ್ತೆಗಳಲ್ಲಿಯೂ ಯೇಸುಕ್ರಿಸ್ತನ ದೀನತೆ ತಾಳ್ಮೆಯ ಕುರಿತಾಗಿ ನೀವು ಅಧಿಕವಾಗಿ ತಿಳಿಯಬಹುದು. ತಂದೆದೇವರು ತನಗಿಂತ ದೊಡ್ಡವನು ಎಂದೂ, "ದೇವರೊಬ್ಬನೇ ಹೊರತು ಒಳ್ಳೆಯವನು ಒಬ್ಬನೂ ಇಲ್ಲ" ಎಂದೂ ಹೇಳಿ ತನ್ನನ್ನು ತಗ್ಗಿಸಿಕೊಂಡನು. ಆತನು ತಂದೆಯ ಮುಂದೆ ಮಾತ್ರವಲ್ಲ, ತಾನು ಸೃಷ್ಟಿಸಿದ ಮನುಷ್ಯನ ಮುಂದೆಯೂ ಬಹಳ ದೀನತೆಯಿಂದ ನಡೆದುಕೊಂಡನು. ತನ್ನ ತಾಯಿ ಮರಿಯಳು, ತಂದೆ ಯೋಸೇಫನಿಗೆ ವಿಧೇಯನಾಗಿ ನಡೆದುಕೊಂಡನು ಸ್ನಾನಿಕನಾದ ಯೋಹಾನನ ಮುಂದೆ ತನ್ನನ್ನು ತಗ್ಗಿಸಿಕೊಂಡು ದೀಕ್ಷಾಸ್ನಾನ ಪಡೆದನು. ಪಿಲಾತನ ಮುಂದೆ ವಿಚಾರಣೆಯಲ್ಲಿ ತನ್ನನ್ನು ತಗ್ಗಿಸಿಕೊಂಡು ತನ್ನ ನ್ಯಾಯವನ್ನು ಕುರಿತು ಮಾತನಾಡದೆ ಮೌನವಾಗಿದ್ದನು. "ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ತನ್ನನ್ನು ತಗ್ಗಿಸಿಕೊಂಡು ಶಿಲುಬೆಯ ಮರಣವನ್ನು ಹೊಂದುವಷ್ಟು ವಿಧೇಯನಾದನು (ಫಿಲಿಪ್ಪಿ 2:6–8). ಹಾಗೆ ತನ್ನನ್ನು ತಗ್ಗಿಸಿಕೊಂಡ ಯೇಸುಕ್ರಿಸ್ತನಿಗೆ ದೊರೆತ ಭಾಗ್ಯವಾದರೂ ಏನು? ದೇವರು ಆತನನ್ನು ಅತ್ಯುನ್ನತಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿ. 2:9–11).

ದೇವಮಕ್ಕಳೇ, ದೀನಮನಸ್ಸುಳ್ಳವರಿಗೆ ಕರ್ತನು ಕೊಡುವ ಕೃಪೆ, ಆಶೀರ್ವಾದಗಳು ದೊಡ್ಡದಾಗಿದೆ. ದೀನರನ್ನು ಕರ್ತನು ಅಭಿವೃದ್ಧಿ ಪಡಿಸುವನು. ಅವರಿಗಾಗಿ ಕರ್ತನು ಹೋರಾಡುವನು. ನೀವು ಕರ್ತನ ಮುಂದೆಯೂ ವಿಶ್ವಾಸಿಗಳ ಮುಂದೆಯೂ ದೇವ ಸೇವಕರ ಮುಂದೆಯೂ ದೀನತೆಯಿಂದ ನಡೆದುಕೊಂಡು ಕೃಪೆಯ ಮೇಲೆ ಕೃಪೆಯನ್ನು ಪಡೆದುಕೊಳ್ಳಿರಿ.

*ನೆನಪಿಗೆ : ನೀವು ಯಾವ ಬಂಡೆಯೊಳಗಿಂದ ಒಡೆದು ತೆಗೆಯಲ್ಪಟ್ಟಿರಿ, ಯಾವ ಗುಂಡಿಯಿಂದ ತೋಡಲ್ಪಟ್ಟಿರಿ ಎಂಬುದನ್ನು ನೋಡಿರಿ. (ಯೆಶಾ. 51:1).*



ಜುಲೈ